# ಅಧ್ಯಾಯ – ೪

# ಕೃಷಿ ಮತ್ತು ನೀರಾವರಿ*

**ಭೌ**ಗೋಳಿಕ ಸ್ಥಿತಿಗತಿಯನ್ನನುಸರಿಸಿ ಉಡುಪಿ ಜಿಲ್ಲೆಯನ್ನು ಕರಾವಳಿ ಪ್ರದೇಶ, ಜಿಲ್ಲೆಯ ಮಧ್ಯಭಾಗ ಮತ್ತು ಪಶ್ಚಿಮ ಘಟ್ಟ ಶ್ರೇಣಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಪಶ್ಚಿಮ ಘಟ್ಟಗಳು ಹಲವಾರು ಕಡೆಗಳಲ್ಲಿ ಕರಾವಳಿ ಮತ್ತು ಮಧ್ಯಭಾಗಗಳಿಗೆ ಮುನ್ನುಗ್ಗಿ ಸಣ್ಣಪುಟ್ಟ ಕಣಿವೆಗಳನ್ನುಂಟು ಮಾಡಿವೆ. ಜಿಲ್ಲೆಯ ಮಧ್ಯಭಾಗದಲ್ಲಿ ಹಲವಾರು ಗುಡ್ಡ ಮತ್ತು ಕಣಿವೆಗಳಿವೆ. ಇದು ಜಿಲ್ಲೆಯ ಪ್ರಮುಖ ಕೃಷಿ ಭೂಮಿಯಾಗಿದೆ. ಇಲ್ಲಿ ಮುಖ್ಯವಾಗಿ ಅಡಿಕೆ, ತೆಂಗಿನ ಕೃಷಿ, ಭತ್ತದ ಬೇಸಾಯ ನಡೆಯುತ್ತಿದ್ದು, ಅಲ್ಲಲ್ಲಿ ಸ್ವಲ್ಪ ಹಣ್ಣು–ಹಂಪಲು ಮತ್ತು ತರಕಾರಿಗಳನ್ನು ಬೆಳೆಸುತ್ತಾರೆ. ಪಶ್ಚಿಮಘಟ್ಟದಿಂದ ಹರಿಯುವ ನದಿಗಳು ಮಳೆಗಾಲದಲ್ಲಿ ನೆರೆ ಹಾವಳಿಯನ್ನು ಉಂಟುಮಾಡುವವು. ಘಟ್ಟದ ಇಳಿಜಾರಿನಲ್ಲಿ ಬೆಳೆಯುವ ಸಸ್ಯಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುವು. ನೆರೆಯಿಂದ ಜಿಲ್ಲೆಯಲ್ಲಿರುವ ಹೆಚ್ಚಿನ ನದಿ ಬಯಲುಗಳಲ್ಲಿ ಮಳೆಗಾಲದ ಬೇಸಾಯ ಅನಿಶ್ಚಿತ. ಆದರೆ ಸ್ವಲ್ಪ ಮಟ್ಟಿಗೆ ಸಾವಯವ ವಸ್ತುಗಳನ್ನು ತಂದು ಬಯಲು ಪ್ರದೇಶಕ್ಕೆ ಹಾಕಿ ಎರಡನೇ ಬೆಳೆಗೆ ಸಾರವನ್ನು ಒದಗಿಸುತ್ತವೆ. ಪ್ರವಾಹದ ಕೊರೆತದಿಂದ ಬಂದ ಹೊಯಿಗೆ ಮತ್ತು ಕಲ್ಲುಗಳು ನದೀತಳದಲ್ಲಿ ನಿಂತು ನೆರೆಹಾವಳಿ ಇನ್ನಷ್ಟು ಹೆಚ್ಚಿದೆ. ಹೆಚ್ಚಿನ ಬಯಲು ಸೀಮೆಗಳಿಗೆ ಹೊಯಿಗೆ ಮಣ್ಣು ಬಂದು ಬೀಳುವುದರಿಂದ ಕೃಷಿಗೆ ಮಣ್ಣು ನಿರುಪಯುಕ್ತವಾಗುತ್ತದೆ. ಜಿಲ್ಲೆಯಲ್ಲಿ ಹರಿಯುವ ಹೆಚ್ಚಿನ ನದಿಗಳಲ್ಲಿ ಬೇಸಿಗೆ ಕಾಲದಲ್ಲಿ ನೀರಿನ ಪ್ರವಾಹ ನಿಲ್ಲುತ್ತದೆ. ಅಲ್ಲಲ್ಲಿ ಮಾತ್ರ ನೀರು ಕಂಡುಬರುತ್ತದೆ. ಆದರೆ ತಳದಲ್ಲಿ ನೀರಿನ ಒರತೆ ಇರುವುದರಿಂದ ಎರಡು ಬದಿಗಳಲ್ಲೂ ಇರುವ ಬಯಲು ಪ್ರದೇಶಗಳಿಗೆ ಕೃಷಿ ನೀರನ್ನು ಈ ನದಿಗಳು ಒದಗಿಸುತ್ತವೆ.

ಉಡುಪಿ ಜಿಲ್ಲೆಯ ಮಣ್ಣನ್ನು ಹೊಯಿಗೆ ಮಣ್ಣು, ಕರಾವಳಿ ಮಣ್ಣು, ಕಲ್ಲುಮಣ್ಣು ಮತ್ತು ಕಾಡಿನ ಕಪ್ಪುಮಣ್ಣು ಎಂದು ವಿಂಗಡಿಸಬಹುದು. ಇಲ್ಲಿಯ ಮಣ್ಣಿನಲ್ಲಿ ಪೊಟ್ಯಾಷ್ ಅಂಶ ಕಡಿಮೆ, ರಂಜಕದ ಅಂಶ ಸಾಧಾರಣ ಮತ್ತು ನೈಟ್ರೋಜನ್ ಅಂಶ ಬಹಳ ಹೆಚ್ಚಿದೆ. ಕರಾವಳಿ ಪ್ರದೇಶದಲ್ಲಿ ಹೊಯಿಗೆಯ ಪ್ರಮಾಣ ಹೆಚ್ಚಿದ್ದು, ಇಲ್ಲಿ ಯಶಸ್ವಿ ಫಸಲನ್ನು ಪಡೆಯಲು ಸತತವಾದ ಪ್ರಯತ್ನವನ್ನು ಮಾಡಬೇಕಾಗುತ್ತದೆ. ವರ್ಷದ ಹೆಚ್ಚಿನ ಸಮಯದಲ್ಲಿ ಸೂರ್ಯನ ಪ್ರಖರವಾದ ಬಿಸಿಲು ಮಣ್ಣಿನ ಮೇಲೆ ಬೀಳುತ್ತಿದ್ದು ಸಾವಯವ

* *ಈ ಅಧ್ಯಾಯವು ತೋಟಗಾರಿಕೆ, ಪಶುಸಂಗೋಪನೆ ಮತ್ತು ಪಶುವೈದ್ಯಸೇವೆ ಹಾಗೂ ಮೀನುಗಾರಿಕೆ ಘಟಕಗಳನ್ನು ಒಳಗೊಂಡಿದೆ.*

ಪದಾರ್ಥಗಳು ಸುಟ್ಟು ಹೋಗಿ ಮಣ್ಣಿನ ಫಲವತ್ತತೆಯು ಕ್ರಮೇಣ ಕಡಿಮೆಯಾಗುವುದು ಒಂದು ಮುಖ್ಯ ಸಮಸ್ಯೆಯಾಗಿದೆ. ಅಲ್ಲದೆ ಜಂಬಿಟ್ಟಿಗೆ (Laterite)ಯ ಮೂಲದ ಮಣ್ಣಿನ ಇನ್ನೊಂದು ವೈಶಿಷ್ಟ್ಯವೆಂದರೆ ಅದರಲ್ಲಿ ಕಬ್ಬಿಣ ಹಾಗೂ ಸತುವಿನ ಅಂಶ ಹೆಚ್ಚಿದ್ದು, ಮಣ್ಣಿನಲ್ಲಿ ಆಮ್ಲದ ಗುಣ ಹೆಚ್ಚಾದಂತೆ ಸಸ್ಯಪೋಷಕಾಂಶಗಳು ಇವುಗಳಿಂದ ತಡೆಹಿಡಿಯಲ್ಪಟ್ಟು ಬೆಳೆಗೆ ಲಭಿಸುವುದು ದುರ್ಲಭವಾಗುತ್ತದೆ. ಹೀಗಾಗಿ ಅನೇಕ ಸಂದರ್ಭಗಳಲ್ಲಿ ನಿರ್ದಿಷ್ಟ ಪ್ರಮಾಣದ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿದರೂ ನಿರೀಕ್ಷಿತ ಉತ್ಪಾದನಾ ಹೆಚ್ಚಳ ಪಡೆಯಲು ಅಸಾಧ್ಯವಾಗುತ್ತದೆ. ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಧಾರಾಕಾರವಾಗಿ ಮಳೆ ಸುರಿದು ಭೂಮಿಯ ಮೇಲೆ ಸತತವಾಗಿ ಹರಿಯುವುದರಿಂದ ಮಣ್ಣಿನ ಕೊರೆತ ಉಂಟಾಗಿ ಮೇಲ್ಸೈಯ ಫಲವತ್ತಾದ ಮಣ್ಣು ತೊಳೆದು, ನದಿಗಳ ಮೂಲಕ ಸಮುದ್ರವನ್ನು ಸೇರಿ ಭೂಮಿಯ ಫಲವತ್ತತೆ ಕಡಿಮೆಯಾಗುವುದು ಸಾಮಾನ್ಯವಾಗಿ ಕಾಣಬಹುದಾದ ಒಂದು ವಿದ್ಯಮಾನವಾಗಿದೆ. ಇದರೊಂದಿಗೆ ಮಣ್ಣಿನಲ್ಲಿರುವ ಸುಣ್ಣದ ಅಂಶವು ತೊಳೆದು ಹೋಗಿ, ಆ ಮಣ್ಣು ಆಮ್ಲಗುಣದಿಂದ ಕೂಡಿರಲು ಕಾರಣವಾಗುತ್ತದೆ. ಇಂಥ ಆಮ್ಲಯುಕ್ತವಾದ ಮಣ್ಣು ಗಿಡಗಳ ಸಮರ್ಪಕವಾದ ಬೆಳವಣಿಗೆಗೆ ಸೂಕ್ತವಾಗಿರುವುದಿಲ್ಲ. ಆದುದರಿಂದ ಸಾಂದ್ರ ಕೃಷಿ ಯೋಜನೆಗಳನ್ನು ಅಳವಡಿಸಿಕೊಂಡು ಬಯಲುಸೀಮೆಯಲ್ಲಿ ಗಳಿಸಿದಂಥ ಉತ್ಪಾದನಾ ಹೆಚ್ಚಳವನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಇದಲ್ಲದೆ ಭೂಮಿಯ ಸವೆತದಿಂದ ಮಣ್ಣಿನ ಸೂಕ್ಷ್ಮ ಕಣಗಳು ಹಾಗೂ ಫಲವತ್ತತೆಯ ಮುಖ್ಯ ಸಾಧನವಾದ ಕೊಳೆತ ಸೇಂದ್ರಿಯ ಪದಾರ್ಥಗಳು ಕೊಚ್ಚಿಹೋಗಿ ಅವುಗಳ ಸತತವಾದ ಮರು ಸೇರಿಸುವಿಕೆ ಯಶಸ್ವಿಯಾದ ವ್ಯವಸಾಯಕ್ಕೆ ಅತ್ಯಂತ ಅವಶ್ಯವಾಗಿದೆ.

ಹೇರಳ ಮಳೆಯಿದ್ದರೂ ಇದು ವರ್ಷದ ಒಂದು ಋತುವಿನಲ್ಲಿ ಮಾತ್ರ ಬೀಳುವುದರಿಂದ ಸಾಗುವಳಿಯಾಗುವ ಎಲ್ಲ ಪ್ರದೇಶಗಳಲ್ಲಿ ಎಲ್ಲ ಋತುಗಳಲ್ಲಿಯೂ ಕೃಷಿ ಮಾಡುವುದು ಅಸಾಧ್ಯವೆನಿಸುತ್ತದೆ. ಮಳೆಗಾಲದಲ್ಲಿ ಸಹ ಮಳೆಯ ಪ್ರಮಾಣ ಎಲ್ಲ ದಿನಗಳಲ್ಲಿಯೂ ಸಮಾನವಾಗಿ ಇರದೆ ಹತ್ತು ಹದಿನೈದು ದಿನ ಮಳೆಯಿಲ್ಲದಿದ್ದಲ್ಲಿ ಬಹುಪಾಲು ಪ್ರದೇಶದ ಕೃಷಿ ನಿಕೃಷ್ಟವಾಗುವುದು ಒಂದು ಸಾಮಾನ್ಯ ಅನುಭವವಾಗಿದೆ. ಬಾವಿ, ಕೆರೆ ಅಥವಾ ಇನ್ನಿತರ ವಿಧಾನಗಳಿಂದ ನೀರೆತ್ತುವ ಅನುಕೂಲತೆಯಿಲ್ಲದಲ್ಲಿ ಕೃಷಿ ಸಂಪೂರ್ಣವಾಗಿ ಪ್ರಕೃತಿಯನ್ನೇ ಅವಲಂಬಿಸಿದ್ದು, ರೈತರ ಸಮಸ್ಯೆಗೆ ಕಾರಣವಾಗುತ್ತದೆ. ಹೆಚ್ಚಿನ ಪ್ರದೇಶಗಳಲ್ಲಿ ನವೆಂಬರ್ ತಿಂಗಳಿನ ನಂತರ ಬಾವಿ, ಕೆರೆಗಳಲ್ಲಿ ಸಹ ನೀರಿನ ಪ್ರಮಾಣ ಕಡಿಮೆಯಾಗಲು ತೊಡಗಿ ಏಪ್ರಿಲ್–ಮೇ ತಿಂಗಳಿನಲ್ಲಿ ಇದು ಸಂಪೂರ್ಣ ಇಳಿಮುಖವಾಗುತ್ತದೆ. ಹೀಗಾಗಿ ನೀರಾವರಿಯ ಮೂಲಗಳು ಸಹ ಅಷ್ಟೊಂದು ಪ್ರಯೋಜನಕಾರಿಯಾಗಲಾರವು. ಸಾಮಾನ್ಯವಾಗಿ ಏಪ್ರಿಲ್ ಅಂತ್ಯ ಅಥವಾ ಮೇ ತಿಂಗಳಿನಲ್ಲಿ ಮಳೆಯಿಲ್ಲದಿದ್ದಲ್ಲಿ ಶೇಕಡಾ ೭೫ಕ್ಕೂ ಮಿಕ್ಕಿದ ಪ್ರದೇಶಗಳಲ್ಲಿ ಬಿತ್ತನೆ ಒಂದು ಸಮಸ್ಯೆಯಾಗಿ ಪರಿಣಮಿಸುತ್ತದೆ. ಅಂತೆಯೇ ಮೊದಲನೇ ಮಳೆಗಾಲದ ಆರಂಭ ಜೂನ್ ತಿಂಗಳ ಮೊದಲನೇ ವಾರದಲ್ಲಿ ಆಗದಿದ್ದಲ್ಲಿ, ಆಗಲೂ ಸಹ ಭತ್ತದ ಕೃಷಿಯ ಯಶಸ್ಸು ಬಹುಪಾಲು ಕುಂಠಿತವಾಗುತ್ತದೆ. ಜಿಲ್ಲೆಯಲ್ಲಿ ಹರಿಯುವ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಅರಬ್ಬೀ ಸಮುದ್ರವನ್ನು ಸೇರುವುದಿದ್ದರೂ ಇವುಗಳಲ್ಲಿ ಹರಿಯುವ ನೀರಿನ ಪ್ರಮಾಣ ಡಿಸೆಂಬರ್ ತಿಂಗಳ ನಂತರ ಅತ್ಯಂತ ಕಡಿಮೆಯಾಗುತ್ತದೆ. ಹಾಗಾಗಿ ಇವು ನೀರಾವರಿಗೆ ಅಷ್ಟೊಂದು ಅನುಕೂಲವಾಗಿಲ್ಲ. ಬದಲಾಗಿ ಮಳೆಗಾಲದಲ್ಲಿ ಈ ನದಿಗಳು ತುಂಬಿ ಹರಿದು ಇಕ್ಕೆಲಗಳಲ್ಲಿರುವ ಸಾವಿರಾರು ಹೆಕ್ಟೇರು ಪ್ರದೇಶವನ್ನು ಆಗಾಗ ನೀರಿನಲ್ಲಿ ಮುಳುಗಿಸಿ ಒಂದು ಸಮಸ್ಯೆಗೆ ಕಾರಣವಾಗುತ್ತದೆ. ಜನವರಿಯ ನಂತರ ಈ ನದಿಗಳಲ್ಲಿ ಸಮುದ್ರದ ನೀರು ಉಬ್ಬರದ ಸಮಯದಲ್ಲಿ ಹರಿದು, ಈ ಉಪ್ಪು ನೀರಿನಿಂದಾಗಿಯೂ ಕೆಲವು ಸಾಗುವಳಿಯ ಪ್ರದೇಶಗಳಿಗೆ ಸಮಸ್ಯೆಯುಂಟಾಗುತ್ತದೆ.

ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆ, ಈ ಮೂರೂ ಋತುಗಳು ಹವಾಮಾನದ ದೃಷ್ಟಿಯಿಂದ ವೈವಿಧ್ಯದಿಂದ ಕೂಡಿದ್ದು ಎಲ್ಲ ಸಂದರ್ಭಗಳಲ್ಲಿಯೂ ಎಲ್ಲ ಬೆಳೆಗಳನ್ನು ಬೆಳೆಸಲು ಅನುಕೂಲ ಪರಿಸ್ಥಿತಿಯಿರುವುದಿಲ್ಲ. ನಿರ್ದಿಷ್ಟ ಹವಾಮಾನಕ್ಕೆ ನಿರ್ದಿಷ್ಟ ಬೆಳೆ ಹಾಗೂ ಬೇರೆ ಬೇರೆ ತಳಿಗಳ ಉಪಯೋಗ ಅನಿವಾರ್ಯವಾಗುತ್ತದೆ. ಅಲ್ಲದೆ ಆರ್ಥಿಕವಾಗಿ ಲಾಭದಾಯಕವಾದ ಬೆಳೆಗಳನ್ನು ಬೆಳೆಸಲು ಸಹ ಇಲ್ಲಿನ

ಹವಾಮಾನ ಅಷ್ಟೊಂದು ಹಿತಕರವಾಗಿಲ್ಲ. ಆದುದರಿಂದ ಮುಖ್ಯವಾಗಿ ಕೆಲವೊಂದು ಬೆಳೆಗಳನ್ನು ಮಾತ್ರ ರೈತರ ಬೆಳೆಯಬೇಕಾಗುತ್ತದೆ. ಚಿಕ್ಕ ಹಿಡುವಳಿ ಹಾಗೂ ಗದ್ದೆಗಳು ಒಂದೇ ಕಡೆಯಲ್ಲಿ ಇಲ್ಲದಿರುವುದು ಈ ಪ್ರದೇಶದ ಒಂದು ವೈಶಿಷ್ಟ್ಯವಾಗಿದೆ. ಶೇಕಡಾ ೮೦ಕ್ಕೂ ಮೀರಿದ ರೈತರು ಇನ್ನೂ ಈ ಸಮಸ್ಯೆಯಿಂದ ಪೀಡಿತರಾಗಿದ್ದು, ಅವರ ಕೃಷಿ ಕ್ಷೇತ್ರ ಆರ್ಥಿಕವಾಗಿ ಲಾಭದಾಯಕವಾಗದಿರಲು ಮುಖ್ಯವಾದ ಕಾರಣವಾಗಿದೆ.

ಈ ಹಿಡುವಳಿ ಸಮಸ್ಯೆಯು ಸಮಗ್ರ ಕೃಷಿ ಅಭಿವೃದ್ಧಿಯ ದೃಷ್ಟಿಯಿಂದ ಬಹುದೊಡ್ಡ ತೊಡಕಾಗಿದೆ. ಹೆಚ್ಚಿನ ರೈತರು ಸಣ್ಣ ಹಿಡುವಳಿಯನ್ನು ಹೊಂದಿರುವುದರಿಂದ ಹಾಗೂ ಆಧುನಿಕ ಕೃಷಿ ವಿಧಾನಗಳಲ್ಲಿ ಅವರಿಗಿರುವ ವಿಶ್ವಾಸ ಕಡಿಮೆಯಿದ್ದು, ಅವರಲ್ಲಿ ಹೊಸ ವಿಧಾನಗಳ ಬಗ್ಗೆ ನಂಬಿಕೆ ಹುಟ್ಟಿಸುವ ಪ್ರಯತ್ನ ನಡೆಯುತ್ತಿದ್ದರೂ ಸಹ ವಿದ್ಯಾವಂತ ರೈತರನ್ನು ಹೊರತುಪಡಿಸಿದರೆ ಉಳಿದವರ ಮೇಲೆ ಅದು ಬೀರಿದ ಪರಿಣಾಮ ಬಹು ಅಲ್ಪವಾಗಿದೆ. ಸಣ್ಣ ಹಿಡುವಳಿ ಮತ್ತು ಸಮಸ್ಯಾತ್ಮಕವಾದ ಭೂಮಿಯನ್ನೊಳಗೊಂಡಿರುವ ಈ ಪ್ರದೇಶದಲ್ಲಿ ಆರ್ಥಿಕವಾಗಿ ಲಾಭದಾಯಕವಾಗುವ ಕೃಷಿ ಮಾಡಲು ಮಿಶ್ರ ವ್ಯವಸಾಯ ಪದ್ಧತಿ ಹೆಚ್ಚು ಸಹಾಯಕವಾಗುತ್ತದೆ. ಈವರೆಗಿನ ಕೃಷಿ ಪದ್ಧತಿಯನ್ನು ವಿಮರ್ಶಿಸಿದಾಗ ಮಾರುಕಟ್ಟೆ ಅಥವಾ ಬೆಲೆ ಇವುಗಳನ್ನು ಅಲವಂಬಿಸಿ ಬೆಳೆ ಬೆಳೆಯಲಾಗುತ್ತಿದೆಯೇ ವಿನಃ ಒಂದು ನಿರ್ದಿಷ್ಟ ಯೋಜನೆಯೊಂದಿಗೆ ಸಮತೋಲನ ಬೆಳೆ ಬೆಳೆಯುವ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಇದರಿಂದಾಗಿ ಪ್ರತೀ ವರ್ಷ ಹೆಚ್ಚಾಗಿ ಬೆಳೆಯಲ್ಪಟ್ಟ ಕೃಷಿ ಉತ್ಪಾದನೆಯ ಧಾರಣೆ ಇಳಿದು ಆ ಮೂಲಕ ರೈತರು ನಿರಾಶೆ ಹೊಂದುವುದು ಒಂದು ಸಾಮಾನ್ಯ ಅನುಭವವಾಗಿದೆ. ಜೊತೆಗೆ ಎಲ್ಲರೂ ಏಕ ಕಾಲದಲ್ಲಿ ಒಂದೇ ಬೆಳೆಯನ್ನು (ಉದಾ: ಟೊಮೆಟೋ, ಆಲೂಗೆಡ್ಡೆ, ಈರುಳ್ಳಿ ಇತ್ಯಾದಿ) ಬೆಳೆಯುವುದರಿಂದ ಮಾರುಕಟ್ಟೆಗೆ ಪೂರೈಕೆ ಹೆಚ್ಚಾಗಿ ವರ್ಷದ ಕೆಲವೊಂದು ಕಾಲಗಳಲ್ಲಿ ಕೆಲವು ಕೃಷಿ ಉತ್ಪನ್ನಗಳ ಧಾರಣೆ ಎಣಿಕೆಗೂ ಮೀರಿ ಇಳಿಯುತ್ತದೆ.

ಕರಾವಳಿ ಪ್ರದೇಶದ ಹೆಚ್ಚಿನ ಜನರು ಜೀವನೋಪಾಯಕ್ಕಾಗಿ ಹೊರ ಪ್ರಾಂತ್ಯಗಳಿಗೆ ಹೋಗುವ ಪರಿಪಾಠವಿರುವುದರಿಂದ ಸಾಗುವಳಿ ಹಾಗೂ ಕಟಾವಿನ ಸಮಯದಲ್ಲಿ ಕೆಲಸಗಾರರ ತೀವ್ರ ಕೊರತೆಯನ್ನು ಎದುರಿಸಲಾಗುತ್ತಿದೆ. ಇದರಿಂದ ಅನೇಕ ಕಡೆಗಳಲ್ಲಿ ಸಮಯಕ್ಕೆ ಸರಿಯಾಗಿ ಕೆಲಸಗಳನ್ನು ಮಾಡಲಾಗದೆ ಪ್ರತಿಕೂಲ ಪರಿಣಾಮ ಬೆಳೆಯ ಮೇಲಾಗುವುದನ್ನು ಕಾಣಬಹುದು. ಹೀಗೆ ಅನೇಕ ಸಮಸ್ಯೆಗಳನ್ನು ಹೊಂದಿದ್ದರೂ ಸಹ ಈ ಜಿಲ್ಲೆಗಳಲ್ಲಿ ಲಭ್ಯವಿರುವ ಉತ್ತಮ ಸಾರಿಗೆ ಸಂಪರ್ಕ ಹಾಗೂ ವಿದ್ಯಾವಂತ ಕೃಷಿಕರಿಂದಾಗಿ ಕೃಷಿ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ.

### ಕೃಷಿ ಕೆಲಸಗಾರರು

೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ೯೭,೨೫೮ ಜನರು ಕೃಷಿ ಸಾಗುವಳಿದಾರರು ಮತ್ತು ೮೭,೭೬೧ ಜನರು ಕೃಷಿ ಕಾರ್ಮಿಕರು ಇದ್ದರು. ೨೦೦೧ರ ಜನಗಣತಿಯಂತೆ ಕೃಷಿ ಸಾಗುವಳಿದಾರರ ಮತ್ತು ಕೃಷಿ ಕಾರ್ಮಿಕರ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆಯಾಗಿರುವುದು ಕಂಡುಬರುತ್ತದೆ. ೨೦೦೧ರ ನಗಣತಿಯ ಮೇರೆಗೆ ಜಿಲ್ಲೆಯಲ್ಲಿ ಒಟ್ಟು ೮೩,೩೦೫ ಜನರು ಸಾಗುವಳಿದಾರರಾಗಿದ್ದು ೫೭,೯೩ ಜನರು ಕೃಷಿ ಕಾರ್ಮಿಕರಾಗಿದ್ದಾರೆ. ಸಾಗುವಳಿದಾರರಲ್ಲಿ ೪೯,೮೭೭ ಮಂದಿ ಪುರುಷರು ಮತ್ತು ೩೩,೪೨೮ ಮಂದಿ ಮಹಿಳೆಯರಾಗಿದ್ದರೆ ಕೃಷಿಕಾರ್ಮಿಕರಲ್ಲಿ ೨೮,೯೫೬ ಮಂದಿ ಪುರುಷರು ಮತ್ತು ೨೮,೯೫೬ ಮಂದಿ ಮಹಿಳೆಯರಾಗಿದ್ದಾರೆ. ೧೯೯೧ ಮತ್ತು ೨೦೦೧ರ ಜನಗಣತಿ ವರದಿಗಳನ್ವಯ ತಾಲೂಕುವಾರು ಕೃಷಿ ಸಾಗುವಳಿದಾರರು, ಕೃಷಿ ಕಾರ್ಮಿಕರು ಹಾಗೂ ವಿವಿಧ ಪ್ರಮಾಣದ ಭೂ ಹಿಡುವಳಿದಾರರ ವಿವರಗಳನ್ನು ಕೋಷ್ಟಕ ೪.೧ ಮತ್ತು ೪.೨ರಲ್ಲಿ ನೀಡಲಾಗಿದೆ.

ಜಿಲ್ಲೆಯ ೧೯೯೯-೨೦೦೦ದಿಂದ ೨೦೦೨-೦೩ನೇ ಸಾಲಿನ ಭೂಉಪಯೋಗದ ವಿವರಗಳನ್ನು ಮತ್ತು ತಾಲೂಕುವಾರು ಭೂ ಉಪಯೋಗದ ವಿವರಗಳನ್ನು ಕೋಷ್ಟಕ ೪.೩ ಮತ್ತು ೪.೪ರಲ್ಲಿ ನೀಡಿದೆ.

## ಕೋಷ್ಟಕ ೪.೧ : ತಾಲೂಕುವಾರು ಸಾಗುವಳಿದಾರರು ಮತ್ತು ಕೃಷಿ ಕಾರ್ಮಿಕರ ವಿವರ ೧೯೯೧ ಮತ್ತು ೨೦೦೧

| ಕ್ರ.ಸಂ. | ವಿವರ | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|
| **I** | **ಕೃಷಿ ಸಾಗುವಳಿದಾರರು–೧೯೯೧ರ ಜನಗಣತಿಯಂತೆ** | | | | |
| ೧. | ಗಂಡಸರು | ೨೦,೯೯೮ | ೧೧,೯೮೭ | ೨೦,೧೪೬ | **೫೩,೧೩೧** |
| ೨. | ಹೆಂಗಸರು | ೧೮,೪೫೧ | ೯,೭೫೭ | ೧೫,೯೧೯ | **೪೪,೧೨೭** |
| ೩. | ಒಟ್ಟು | ೩೯,೪೪೯ | ೨೧,೭೪೪ | ೩೬,೦೬೫ | **೯೭,೨೫೮** |
| **II** | **ಕೃಷಿ ಕಾರ್ಮಿಕರು–೧೯೯೧ರ ಜನಗಣತಿಯಂತೆ** | | | | |
| ೧. | ಗಂಡಸರು | ೧೫,೮೯೩ | ೬,೮೧೯ | ೧೪,೫೮೭ | **೩೭,೨೯೯** |
| ೨. | ಹೆಂಗಸರು | ೨೪,೨೩೮ | ೬,೩೭೦ | ೧೯,೮೫೪ | **೫೦,೪೬೨** |
| ೩. | ಒಟ್ಟು | ೪೦,೧೩೧ | ೧೩,೧೮೯ | ೩೪,೪೪೧ | **೮೭,೭೬೧** |
| **III** | **ಕೃಷಿ ಸಾಗುವಳಿದಾರರು–೨೦೦೧ರ ಜನಗಣತಿಯಂತೆ** | | | | |
| ೧. | ಗಂಡಸರು | ೯,೪೫೩ | ೧೯,೦೭೧ | ೧೧,೩೫೩ | **೪೯,೮೭೭** |
| ೨. | ಹೆಂಗಸರು | ೧೨,೨೯೮ | ೧೩,೨೭೯ | ೭,೮೫೧ | **೩೩,೪೨೮** |
| ೩. | ಒಟ್ಟು | ೩೧,೭೫೧ | ೩೨,೩೫೦ | ೧೯,೨೦೪ | **೮೩,೩೦೫** |
| **IV** | **ಕೃಷಿ ಕಾರ್ಮಿಕರು–೨೦೦೧ರ ಜನಗಣತಿಯಂತೆ** | | | | |
| ೧. | ಗಂಡಸರು | ೧೧,೭೦೯ | ೧೧,೬೯೪ | ೫,೫೫೩ | **೨೮,೯೫೬** |
| ೨. | ಹೆಂಗಸರು | ೧೨,೦೪೬ | ೧೨,೯೪೮ | ೩,೯೪೩ | **೨೮,೯೩೭** |
| ೩. | ಒಟ್ಟು | ೨೩,೭೫೫ | ೨೪,೬೪೨ | ೯,೪೯೬ | **೫೭,೮೯೩** |

## ಕೋಷ್ಟಕ ೪.೨ : ಕೃಷಿ ಭೂ ಹಿಡುವಳಿಗಳ ತಾಲೂಕುವಾರು ವಿವರ ೨೦೦೦–೦೧

| ಕ್ರ.ಸಂ. | ವಿವರ | | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|---|
| ೧. | ಚಿಕ್ಕ ರೈತರು (ಒಂದು ಹೆಕ್ಟೇರಿಗಿಂತ ಕಡಿಮೆ) | | | | | |
| i | ಪರಿಶಿಷ್ಟ ಜಾತಿ | ಹಿ | ೧,೬೬೦ | ೧,೧೭೫ | ೧,೮೪೭ | ೪,೬೮೨ |
| | | ವಿ | ೫೮೭ | ೪೭೭ | ೪೮೨ | ೧,೫೪೬ |
| ii | ಪರಿಶಿಷ್ಟ ವರ್ಗ | ಹಿ | ೧,೧೬೫ | ೮೬೪ | ೨,೧೫೮ | ೪,೧೮೭ |
| | | ವಿ | ೫೦೮ | ೪೦೩ | ೮೨೦ | ೧,೭೩೧ |
| iii | ಇತರೆ ವರ್ಗ | ಹಿ | ೫೫,೪೭೧ | ೧೬,೩೧೨ | ೫೯,೩೪೩ | ೧,೩೧,೧೨೬ |
| | | ವಿ | ೧೬,೪೪೯ | ೬,೪೭೫ | ೧೮,೩೫೭ | ೪೧,೨೮೧ |
| iv | ಒಟ್ಟು | ಹಿ | ೫೮,೨೯೬ | ೧೮,೩೫೧ | ೬೩,೩೪೮ | ೧,೩೯,೯೯೫ |
| | | ವಿ | ೧೭,೫೪೪ | ೭,೩೫೫ | ೧೯,೬೫೯ | ೪೪,೫೫೮ |

ಸೂಚನೆ : ಹಿ–ಹಿಡುವಳಿ ಸಂಖ್ಯೆಗಳಲ್ಲಿ; ವಿ–ವಿಸ್ತೀರ್ಣ ಹೆಕ್ಟೇರುಗಳಲ್ಲಿ

| ಕ್ರ.ಸಂ. | ವಿವರ | | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|---|
| ೨. | ಸಣ್ಣ ರೈತರು (ಒಂದರಿಂದ ಎರಡು ಹೆಕ್ಟೇರುಗಳವರೆಗೆ) | | | | | |
| i | ಪರಿಶಿಷ್ಟ ಜಾತಿ | ಹಿ | ೨೬೩ | ೧೬೮ | ೧೨೮ | ೫೫೯ |
| | | ವಿ | ೩೬೦ | ೨೨೮ | ೧೬೪ | ೭೫೨ |
| ii | ಪರಿಶಿಷ್ಟ ವರ್ಗ | ಹಿ | ೪೨೧ | ೨೯೦ | ೪೫೮ | ೧,೧೬೯ |
| | | ವಿ | ೫೮೦ | ೪೦೩ | ೬೪೧ | ೧,೬೨೪ |
| iii | ಇತರೆ ವರ್ಗ | ಹಿ | ೮,೦೯೭ | ೫,೭೯೩ | ೮,೭೬೬ | ೨೨,೬೫೬ |
| | | ವಿ | ೧೧,೩೮೦ | ೮,೨೫೮ | ೧೨,೨೭೦ | ೩೧,೯೦೮ |
| iv | ಒಟ್ಟು | ಹಿ | ೮,೭೮೧ | ೬,೨೫೧ | ೯,೩೫೨ | ೨೪,೩೮೪ |
| | | ವಿ | ೧೨,೩೨೦ | ೮,೮೮೯ | ೧೩,೦೭೫ | ೩೪,೨೮೪ |
| ೩. | ಅರೆ ಮಧ್ಯಮ ರೈತರು (ಎರಡರಿಂದ ನಾಲ್ಕು ಹೆಕ್ಟೇರುಗಳವರೆಗೆ) | | | | | |
| i | ಪರಿಶಿಷ್ಟ ಜಾತಿ | ಹಿ | ೫೨ | ೨೪ | ೬ | ೮೨ |
| | | ವಿ | ೧೨೩ | ೫೭ | ೧೫ | ೧೯೫ |
| ii | ಪರಿಶಿಷ್ಟ ವರ್ಗ | ಹಿ | ೧೩೮ | ೮೭ | ೧೨೧ | ೩೪೬ |
| | | ವಿ | ೩೫೨ | ೨೩೧ | ೩೧೪ | ೮೯೭ |
| iii | ಇತರೆ ವರ್ಗ | ಹಿ | ೩,೫೦೮ | ೪,೩೭೯ | ೪,೩೪೧ | ೧೨,೨೨೮ |
| | | ವಿ | ೯,೪೭೩ | ೧೨,೨೨೭ | ೧೧,೭೩೭ | ೩೩,೪೩೭ |
| iv | ಒಟ್ಟು | ಹಿ | ೩,೬೯೮ | ೪,೪೯೦ | ೪,೪೬೮ | ೧೨,೬೫೬ |
| | | ವಿ | ೯,೯೪೮ | ೧೨,೫೧೫ | ೧೨,೦೬೬ | ೩೪,೫೨೯ |
| ೪. | ಮಧ್ಯಮ ರೈತರು (ನಾಲ್ಕರಿಂದ ಹತ್ತು ಹೆಕ್ಟೇರುಗಳವರೆಗೆ) | | | | | |
| i | ಪರಿಶಿಷ್ಟ ಜಾತಿ | ಹಿ | ೪ | ೪ | ೦ | ೮ |
| | | ವಿ | ೨೨ | ೨೫ | ೦ | ೪೭ |
| ii | ಪರಿಶಿಷ್ಟ ವರ್ಗ | ಹಿ | ೧೭ | ೨೯ | ೨೫ | ೭೧ |
| | | ವಿ | ೮೯ | ೧೪೯ | ೧೩೯ | ೩೭೭ |
| iii | ಇತರೆ ವರ್ಗ | ಹಿ | ೧,೨೪೦ | ೨,೦೬೦ | ೧,೩೯೬ | ೪,೬೯೬ |
| | | ವಿ | ೭,೦೫೧ | ೧೧,೭೯೪ | ೭,೯೦೬ | ೨೬,೭೫೧ |
| iv | ಒಟ್ಟು | ಹಿ | ೧,೨೬೧ | ೨,೦೯೩ | ೧,೪೨೧ | ೪,೭೭೫ |
| | | ವಿ | ೭,೧೬೨ | ೧೧,೯೬೮ | ೮,೦೪೫ | ೨೭,೧೭೫ |
| ೫. | ದೊಡ್ಡ ರೈತರು (ಹತ್ತು ಹೆಕ್ಟೇರುಗಳಿಗಿಂತ ಹೆಚ್ಚು) | | | | | |
| i | ಪರಿಶಿಷ್ಟ ಜಾತಿ | ಹಿ | ೦ | ೦ | ೦ | ೦ |
| | | ವಿ | ೦ | ೦ | ೦ | ೦ |
| ii | ಪರಿಶಿಷ್ಟ ವರ್ಗ | ಹಿ | ೧ | ೦ | ೦ | ೧ |
| | | ವಿ | ೧೦ | ೦ | ೦ | ೧೦ |
| iii | ಇತರೆ ವರ್ಗ | ಹಿ | ೧೮೧ | ೨೦೯ | ೧೨೭ | ೫೧೭ |
| | | ವಿ | ೩,೬೨೨ | ೨,೯೮೯ | ೧,೯೯೨ | ೮,೬೦೩ |
| iv | ಒಟ್ಟು | ಹಿ | ೧೮೨ | ೨೦೯ | ೧೨೭ | ೫೧೮ |
| | | ವಿ | ೩,೬೩೨ | ೨,೯೮೯ | ೧,೯೯೨ | ೮,೬೧೩ |

| ಕ್ರ.ಸಂ. | ವಿವರ | | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|---|
| ೬. | ಒಟ್ಟು ಹಿಡುವಳಿದಾರರು | | | | | |
| i | ಪರಿಶಿಷ್ಟ ಜಾತಿ | ಹಿ | ೧,೯೭೯ | ೧,೩೭೧ | ೧,೯೮೧ | ೫,೩೩೧ |
| | | ವಿ | ೧,೦೯೨ | ೭೮೭ | ೬೬೧ | ೨,೫೪೦ |
| ii | ಪರಿಶಿಷ್ಟ ವರ್ಗ | ಹಿ | ೧,೭೪೨ | ೧,೨೭೦ | ೨,೭೬೨ | ೫,೭೭೪ |
| | | ವಿ | ೧,೫೩೯ | ೧,೧೮೬ | ೧,೯೧೪ | ೪,೬೩೯ |
| iii | ಇತರೆ ವರ್ಗ | ಹಿ | ೬೮,೪೯೭ | ೨೮,೭೫೩ | ೭೩,೯೭೩ | ೧,೭೧,೨೨೩ |
| | | ವಿ | ೪೭,೯೭೫ | ೪೧,೭೪೩ | ೫೨,೨೬೨ | ೧,೪೧,೯೮೦ |
| iv | ಸಂಘ ಸಂಸ್ಥೆಗಳು | ಹಿ | ೧೩೩ | ೧೯೪ | ೧೯೦ | ೫೧೭ |
| | | ವಿ | ೧೯೯ | ೧,೩೯೯ | ೧,೨೦೯ | ೨,೮೦೭ |
| v | ಒಟ್ಟು | ಹಿ | **೭೨,೩೫೧** | **೩೧,೫೮೮** | **೭೮,೯೦೬** | **೧,೮೨,೮೪೫** |
| | | ವಿ | **೫೦,೮೦೫** | **೪೫,೧೧೫** | **೫೬,೦೪೬** | **೧,೫೧,೯೬೬** |

## ಮಣ್ಣು ಆರೋಗ್ಯ ಕೇಂದ್ರ

ಉಡುಪಿ ಜಿಲ್ಲೆಯಲ್ಲಿ ಪ್ರತ್ಯೇಕ ಮಣ್ಣು ಆರೋಗ್ಯ ಕೇಂದ್ರವಿರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಮಣ್ಣು ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಈ ಜಿಲ್ಲೆಯೂ ಸೇರಿದೆ. ಮಣ್ಣು ಮಾದರಿ ವಿಶ್ಲೇಷಣೆಯು ಒಂದು ವೈಜ್ಞಾನಿಕ ಪದ್ಧತಿಯಾಗಿದ್ದು, ಭೂ ಫಲವತ್ತತೆಯನ್ನು ಹಾಗೂ ಬೆಳೆಗಳಿಗೆ ದೊರೆಯುವ ಪೋಷಕಾಂಶಗಳನ್ನು ತಿಳಿದು, ಅನವಶ್ಯಕವಾಗಿ ಹೆಚ್ಚು ರಸಗೊಬ್ಬರಗಳ ಬಳಕೆಯನ್ನು ತಪ್ಪಿಸುತ್ತದೆ. ಅಲ್ಲದೇ ಸಮತೋಲನ ರಸಗೊಬ್ಬರಗಳನ್ನು ಬಳಸಿ ಅಧಿಕ ಉತ್ಪಾದನೆ ಪಡೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಈ ಕೇಂದ್ರದಲ್ಲಿ ರೈತರು ಹಾಗೂ ಕೃಷಿ ವಿಸ್ತರಣಾ ಸಿಬ್ಬಂದಿ ಸಂಗ್ರಹಿಸಿದ ಮಣ್ಣು ಮಾದರಿಗಳನ್ನು ವಿಶ್ಲೇಷಿಸಿ ಸೂಕ್ತ ರಸಗೊಬ್ಬರಗಳ ಬಳಕೆಗೆ ಸಲಹೆ ನೀಡಲಾಗುತ್ತಿದೆ. ಸಂಚಾರಿ ಮಣ್ಣು ಆರೋಗ್ಯ ಕೇಂದ್ರಗಳು ರೈತರ ಮಣ್ಣು ಮಾದರಿಗಳನ್ನು ಸ್ಥಳದಲ್ಲಿಯೇ ವಿಶ್ಲೇಷಿಸಿ, ಸೂಕ್ತ ಸಮತೋಲನ ರಸಗೊಬ್ಬರಗಳ ಶಿಫಾರಸ್ಸನ್ನು ನೀಡುತ್ತವೆ. ಜೊತೆಗೆ ರೈತರಿಂದ ಪಡೆದ ನೀರಿನ ಮಾದರಿಗಳನ್ನು ನೀರಾವರಿಗೆ ಯೋಗ್ಯವೇ ಎಂಬುದರ ಬಗ್ಗೆ ವಿಶ್ಲೇಷಿಸಿ ಅವಶ್ಯವಿದ್ದಲ್ಲಿ ಸೂಕ್ತ ಬಳಕೆಯ ಮಾಹಿತಿ ನೀಡಲಾಗುತ್ತಿದೆ. ಸುಣ್ಣ ಮತ್ತು ಜಿಪ್ಸಂ ಮಾದರಿಗಳನ್ನು ಸಹ ವಿಶ್ಲೇಷಿಸಲಾಗುತ್ತಿದೆ. ಪ್ರತೀ ವರ್ಷ ಸುಮಾರು ೩೦,೦೦೦ ಮಣ್ಣಿನ ಮಾದರಿಗಳನ್ನು ಪರೀಕ್ಷಿಸುವ ಸಾಮರ್ಥ್ಯವನ್ನು ಈ ಕೇಂದ್ರ ಹೊಂದಿದೆ.

ಈ ಪರೀಕ್ಷಾ ಕೇಂದ್ರದಲ್ಲಿ ಮಣ್ಣಿನ ಮಾದರಿಯಲ್ಲಿ ಪರೀಕ್ಷೆ ಮಾಡುವ ಅಂಶಗಳೆಂದರೆ ರಸಸಾರ(ಪಿ.ಎಚ್.), ಸಾವಯವ ಇಂಗಾಲ, ರಂಜಕ, ಸಾರಜನಕ ಮತ್ತು ಪೊಟ್ಯಾಷ್, ಇದರ ಜೊತೆಗೆ ವಿದ್ಯುತ್ ವಹನತೆ ಸಹ ಗೊತ್ತುಪಡಿಸುತ್ತದೆ. ಇದರಿಂದ ಆ ಮಣ್ಣಿನಲ್ಲಿರುವ ಚೌಳಿನ ಅಂಶ ತಿಳಿಯಲು ಸಹಾಯವಾಗುತ್ತದೆ. ಈ ಅಂಶಗಳ ಆಧಾರವನ್ನೇ ಇಟ್ಟುಕೊಂಡು ಅದರ ಜೊತೆಗೆ ಬೆಳೆ ಮಾದರಿಯನ್ನು ಹೋಲಿಸಿ ಆ ಮಣ್ಣಿನಲ್ಲಿ ಸೇರಿಸಬೇಕಾದ ಜಿಪ್ಸಂ, ಉಪ್ಪು ಅಥವಾ ಸುಣ್ಣದ ಅಂಶವನ್ನು ನಿರ್ಧರಿಸಲಾಗುತ್ತದೆ. ಇದರ ಜೊತೆಗೆ ಅಲ್ಲಿ ಬೆಳೆಯಬೇಕೆಂದಿರುವ ಪ್ರತೀ ಬೆಳೆಗೂ ಒದಗಿಸಬೇಕಾದ ಆಹಾರಾಂಶಗಳನ್ನೂ ನಿರ್ಧರಿಸಲಾಗುವುದು. ಹೆಚ್ಚಾಗಿ ಚೌಳಿನ ಅಂಶವಿರುವ ಕಡೆ ಅದನ್ನು ಸರಿಪಡಿಸಲು ಸೂಕ್ತ ಕ್ರಮವನ್ನು ತಿಳಿಸಲಾಗುವುದು. ಮಣ್ಣಿನ ಪರೀಕ್ಷೆಯ ಗುಣಮಟ್ಟ ರಕ್ಷಣೆಗೆ ಸಂಬಂಧಪಟ್ಟ ಕಾಯಿದೆಯೊಂದು ಜಾರಿಯಲ್ಲಿದೆ. ೧೯೭೦-೭೧ ರಲ್ಲಿ ಜಾರಿಗೆ ಬಂದ ಈ ಕಾಯಿದೆಯ ಪ್ರಕಾರ ಪ್ರತೀ ಮಣ್ಣಿನ ಮಾದರಿಯನ್ನು ಪರೀಕ್ಷೆ ಮಾಡಿದ ನಂತರ ಬರುವ ಫಲಿತಾಂಶಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿಯೇ ಕೊಡಬೇಕೆಂದು ನಿಗದಿ ಮಾಡಲಾಗಿದೆ. ಇದರ ಉದ್ದೇಶಗಳು ಈ ರೀತಿ ಇವೆ: ೧. ಮಣ್ಣಿನ ಪರೀಕ್ಷೆಯ ಸಮಯದಲ್ಲಿ ಅನುಸರಿಸುವ ಕ್ರಮಗಳನ್ನು ನಿಯಂತ್ರಿಸುವುದು, ೨. ಪರೀಕ್ಷಾ ಕೇಂದ್ರಗಳು ಬಹಳ ದಕ್ಷತೆಯಿಂದ ಕೆಲಸಮಾಡಲು ಬೆಂಬಲ

**ಕೋಷ್ಟಕ ೪.೩ : ಜಿಲ್ಲೆಯಲ್ಲಿನ ಕೃಷಿ ಭೂ ಬಳಕೆಯ ವಿವರ ೧೯೯೯-೨೦೦೦ ದಿಂದ ೨೦೦೨-೨೦೦೩**

ವಿಸ್ತೀರ್ಣ-ಹೆಕ್ಟೇರುಗಳಲ್ಲಿ

| ಕ್ರ.ಸಂ. | ವಿವರ | ೧೯೯೯-೨೦೦೦ | ೨೦೦೦-೨೦೦೧ | ೨೦೦೧-೨೦೦೨ | ೨೦೦೨-೦೩ |
|---|---|---|---|---|---|
| ೧ | **ಒಟ್ಟು ಭೌಗೋಳಿಕ ವಿವರ** | | | | |
| ಅ) | ಮೋಜಣಿದಾರರುಗಳ ಪರಿಶೀಲನೆಯ ಮೇರೆಗೆ | ೩,೫೬,೪೪೬ | ೩,೫೬,೪೪೬ | ೩,೫೬,೪೪೬ | ೩,೫೬,೪೪೬ |
| ಆ) | ಗ್ರಾಮಸಂಬಂಧವಾದ ಕಾಗದ ಪತ್ರಗಳ ಮೇರೆಗೆ | ೩,೫೬,೪೪೬ | ೩,೫೬,೪೪೬ | ೩,೫೬,೪೪೬ | ೩,೫೬,೪೪೬ |
| ೨ | **ಅರಣ್ಯ ಪ್ರದೇಶ** | ೯೯,೪೩೯ | ೯೯,೫೬೯ | ೯೯,೫೬೯ | ೧,೦೦,೧೦೨ |
| ೩ | **ಸಾಗುವಳಿಗೆ ದೊರಕದ ಪ್ರದೇಶ** | | | | |
| ಅ) | ವ್ಯವಸಾಯವನ್ನು ಬಿಟ್ಟು ಇತರ ಉದ್ದೇಶಗಳಿಗೆ ಉಪಯೋಗಿಸಿ ಕೊಂಡಿರುವ ಪ್ರದೇಶ | ೩೮,೩೪೫ | ೩೮,೫೨೬ | ೩೮,೬೧೬ | ೩೮,೬೯೭ |
| ಆ) | ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶ | ೧೧,೯೧೦ | ೧೧,೬೮೯ | ೧೧,೬೭೦ | ೧೧,೬೨೧ |
| ೪ | **ಬೀಳು ರಹಿತ ಉಳುಮೆ ಆಗದ ಜಮೀನು** | | | | |
| ಅ) | ಇತರೆ ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶ | ೩೨,೨೬೭ | ೩೨,೯೨೪ | ೩೩,೦೬೭ | ೩೩,೭೯೮ |
| ಆ) | ಖಾಯಂ ಗೋಮಾಳ ಮತ್ತು ಇತರ ಹುಲ್ಲುಗಾವಲು | ೧೧,೨೩೯ | ೧೦,೬೮೪ | ೧೦,೬೭೮ | ೧೦,೬೪೦ |
| ಇ) | ಬಿತ್ತನೆಯಾಗದಿರುವ ಪ್ರದೇಶದಲ್ಲಿ ನಮೂದಿಸಿಲ್ಲದ ವಿವಿಧ ವೃಕ್ಷ ಮತ್ತು ತೋಪುಗಳಿರುವ ಜಮೀನು | ೪೮,೦೮೪ | ೪೮,೯೦೦ | ೪೮,೫೯೧ | ೪೮,೫೯೧ |
| ೫ | **ಬೀಳು ಜಮೀನು** | | | | |
| ಅ) | ಚಾಲ್ತಿ ಸಾಗುವಳಿಯಲ್ಲಿಲ್ಲದ ಬೀಳು ಬಿಟ್ಟ ಜಮೀನು | ೫,೨೯೭ | ೪,೯೦೩ | ೪,೨೦೨ | ೩,೯೦೩ |
| ಆ) | ಇತರ ಬೀಳು ಜಮೀನು | ೮,೨೦೪ | ೮,೬೩೨ | ೮,೪೧೫ | ೯,೬೮೫ |
| ೬ | **ಬಿತ್ತನೆಯಾಗಿರುವ ನಿವ್ವಳ ಪ್ರದೇಶ** | ೧,೦೧,೬೬೧ | ೧,೦೦,೬೧೯ | ೧,೦೧,೬೩೮ | ೯೯,೪೦೯ |
| ೭ | **ಒಟ್ಟು ಬಿತ್ತನೆಯಾಗಿರುವ ಪ್ರದೇಶ** | ೧,೩೩,೨೬೧ | ೧,೩೦,೫೫೬ | ೧,೨೯,೨೮೫ | ೧,೨೫,೧೩೨ |
| ೮ | **ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶ** | ೩೧,೬೦೦ | ೨೯,೯೩೭ | ೨೭,೬೪೭ | ೨೫,೭೨೩ |

**ಆಧಾರ:** *Report on Area, production and productivity and prices of Agriculture crops in Karnataka 1999-2000 to 2002-2003*

**ಕೊಷ್ಟಕ : ೪.೪ ತಾಲೂಕುವಾರು ಭೂಮಿಯ ಬಳಕೆ ೨೦೦೩ – ೦೪**

(ವಾರ್ಷಿಕ ಋತು ಮತ್ತು ಬೆಳೆಗಳ ವರದಿ ಪ್ರಕಾರ)

(ಹೆಕ್ಟೇರುಗಳಲ್ಲಿ)

| ಕ್ರ.ಸಂ. | ವಿವರ | ಉಡುಪಿ | ಕುಂದಾಪುರ | ಕಾರ್ಕಳ | ಒಟ್ಟು |
|---|---|---|---|---|---|
| ೧ | ಭೌಗೋಳಿಕ ವಿಸ್ತೀರ್ಣ | ೯೨,೭೯೮ | ೧,೫೬,೦೬೨ | ೧,೦೭,೫೮೬ | ೩,೫೬,೪೪೬ |
| ೨ | ಅರಣ್ಯ ಪ್ರದೇಶ | ೪,೬೮೬ | ೬೨,೬೦೫ | ೩೨,೮೧೧ | ೧,೦೦,೧೦೨ |
| ೩ | ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ | | | | |
| | i) ವ್ಯವಸಾಯೇತರ | ೧೬,೨೯೦ | ೧೭,೨೩೪ | ೫,೨೯೫ | ೩೮,೮೧೯ |
| | ii) ಬಂಜರು | ೨,೭೧೬ | ೫,೨೫೭ | ೩,೬೩೯ | ೧೧,೬೧೨ |
| | ಒಟ್ಟು | ೧೯,೦೦೬ | ೨೨,೪೯೧ | ೮,೯೩೪ | ೫೦,೪೩೧ |
| ೪ | ಸಾಗುವಳಿ ಮಾಡದಿರುವ ಇತರ ಭೂಮಿ | | | | |
| | i) ಸಾಗುವಳಿಗೆ ಯೋಗ್ಯವಾದ ಬಂಜರು | ೧೧,೩೪೦ | ೬,೫೯೫ | ೧೭,೧೮೧ | ೩೫,೧೧೬ |
| | ii) ಖಾಯಂ ಗೋಮಾಳ | ೫,೨೨೩ | ೩,೪೯೦ | ೧,೯೨೪ | ೧೦,೬೩೭ |
| | iii) ವೃಕ್ಷ ಮತ್ತು ತೋಪುಗಳು | ೧೨,೬೨೫ | ೧೬,೮೯೨ | ೧೮,೯೧೧ | ೪೮,೪೨೮ |
| | ಒಟ್ಟು | ೨೯,೧೮೮ | ೨೬,೯೭೭ | ೩೮,೦೧೬ | ೯೪,೧೮೧ |
| ೫ | ಬೀಳು ಭೂಮಿ | | | | |
| | ೧. ಚಾಲ್ತಿ | ೩೩೭ | ೧,೪೯೧ | ೪೦೨ | ೨,೨೩೦ |
| | ೨. ಇತರೆ | ೪,೮೫೫ | ೧,೮೫೭ | ೩,೬೫೨ | ೧೦,೩೬೪ |
| | ಒಟ್ಟು | ೫,೧೯೨ | ೩,೩೪೮ | ೪,೦೫೪ | ೧೨,೫೯೪ |
| ೬ | ಬಿತ್ತನೆಯಾಗಿರುವ ಪ್ರದೇಶ | | | | |
| | ೧. ನಿವ್ವಳ | ೩೪,೭೨೬ | ೪೦,೬೪೧ | ೨೩,೭೭೧ | ೯೯,೧೩೮ |
| | ೨. ಒಂದಕ್ಕಿಂತ ಹೆಚ್ಚು | ೧೦,೫೨೦ | ೭,೩೦೬ | ೪,೮೨೦ | ೨೨,೬೪೬ |
| | ಒಟ್ಟು | ೪೫,೨೪೬ | ೪೭,೯೪೭ | ೨೮,೫೯೧ | ೧,೨೧,೭೮೪ |

ಆಧಾರ : ಉಡುಪಿ ಜಿಲ್ಲೆಯ ಅಂಕಿ–ಅಂಶಗಳ ನೋಟ, ೨೦೦೪–೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ

ನೀಡುವುದು, ೩. ಮಣ್ಣನ್ನು ಪರೀಕ್ಷೆ ಮಾಡಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಪ್ರತೀವರ್ಷವೂ ತರಬೇತಿ ನೀಡುವುದು. ಪ್ರಸಕ್ತ ವರ್ಷದಿಂದ ಮಣ್ಣು ಪರೀಕ್ಷಾ ಫಲಿತಾಂಶಗಳನ್ನು ಗಣಕೀಕರಿಸಿ, ಮಣ್ಣು ಆರೋಗ್ಯ ಚೀಟಿಗಳಲ್ಲಿ ಮದ್ರಿಸಿ ರೈತರಿಗೆ ವಿತರಿಸುವುದು ಮತ್ತು ಮಣ್ಣು ಆರೋಗ್ಯ ಚೀಟಿ ಆಧಾರದ ಮೇಲೆ ಗ್ರಾಮವಾರು ಬೆಳೆ ಉತ್ಪಾದನಾ ಯೋಜನೆಯನ್ನು ರೂಪಿಸಿ, ಕ್ಷೇತ್ರಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

## ಬೀಜೋತ್ಪಾದನೆ

ರೈತರಿಗೆ ಗುಣಮಟ್ಟದ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರ ರೂಪಿಸಿದ ಬೀಜ ಅಧಿನಿಯಮ ೧೯೬೬, ಬೀಜ ನಿಯಮಾವಳಿ ೧೯೬೮, ಬೀಜ ನಿಯಂತ್ರಣ ಆದೇಶ ೧೯೮೩ನ್ನು ಜಿಲ್ಲೆಯಲ್ಲೂ ಜಾರಿಗೊಳಿಸಲಾಗುತ್ತಿದೆ. ಸದರಿ ಕಾಯಿದೆಯಡಿಯಲ್ಲಿ ಬೀಜ ಪರಿವೀಕ್ಷಕರುಗಳು ಮಾರಾಟಕ್ಕಿಟ್ಟ ಬೀಜಗಳಿಂದ ಮಾದರಿಗಳನ್ನು ತೆಗೆದು ಬೀಜ ಪರೀಕ್ಷಾಲಯಕ್ಕೆ ಕಳುಹಿಸುತ್ತಾರೆ. ಪರೀಕ್ಷೆಯಲ್ಲಿ ಮೊಳಕೆ ಪ್ರಮಾಣ ಕಡಿಮೆ ಇದ್ದ ಮಾದರಿಗಳಿಗೆ ಸಂಬಂಧಪಟ್ಟ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತಾರೆ. ಜಿಲ್ಲೆಯಲ್ಲಿ ಕಾರ್ಕಳದ ಸಾಣೂರು ಮತ್ತು ಉಡುಪಿಯ ಕೋಟೇಶ್ವರಗಳಲ್ಲಿ ಎರಡು ಬೀಜೋತ್ಪಾದನಾ ಕೇಂದ್ರಗಳಿವೆ. ಈ ಕ್ಷೇತ್ರಗಳಲ್ಲಿ ಮುಖ್ಯವಾಗಿ ಮೂಲ / ಪ್ರಮಾಣಿತ ಬೀಜೋತ್ಪಾದನೆಯನ್ನು ಕೈಗೊಳ್ಳಲಾಗುತ್ತಿದೆ. ಮೂಲ

ಬೀಜೋತ್ಪಾದನೆಗೆ ಬೇಕಿರುವ ತಳಿವರ್ಧಕ ಬೀಜಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳಿಂದ ಮುಂಗಡ ಬೇಡಿಕೆ ಆಧಾರದ ಮೇರೆಗೆ ಪಡೆಯಲಾಗುವುದು.

## ಬೆಳೆ ಪದ್ಧತಿ

ಜಿಲ್ಲೆಯಲ್ಲಿ ೨೦೦೨-೦೩ ನೇ ಸಾಲಿನಲ್ಲಿ ಒಟ್ಟು ಬಿತ್ತನೆಯಾದ ೧,೨೫,೧೩೨ ಹೆಕ್ಟೇರು ಪ್ರದೇಶದಲ್ಲಿ ೧,೦೫,೨೫೮ ಹೆಕ್ಟೇರು ವಿಸ್ತೀರ್ಣದಲ್ಲಿ ಆಹಾರ ಬೆಳೆಗಳನ್ನು ಮತ್ತು ೧೯,೮೭೪ ಹೆಕ್ಟೇರು ಪ್ರದೇಶದಲ್ಲಿ ಆಹಾರೇತರ ಬೆಳೆಗಳನ್ನು ಬೆಳೆಸಲಾಗಿದೆ. ಇದರಲ್ಲಿ ೬೩,೪೮೮ ಹೆಕ್ಟೇರು ಪ್ರದೇಶದಲ್ಲಿ ಏಕದಳ ಧಾನ್ಯಗಳನ್ನು (ಭತ್ತ), ೯,೨೭೯ ಹೆಕ್ಟೇರು ಪ್ರದೇಶದಲ್ಲಿ ದ್ವಿದಳ ಧಾನ್ಯ ಬೆಳೆಗಳನ್ನು ಮತ್ತು ೨,೩೬೫ ಹೆಕ್ಟೇರು ಪ್ರದೇಶದಲ್ಲಿ ಎಣ್ಣೆಕಾಳು ಬೆಳೆಗಳನ್ನು ಬೆಳೆಸಲಾಗಿದೆ. ಜಿಲ್ಲೆಯಲ್ಲಿ ತಾಲೂಕುವಾರು ಏಕದಳ ಮತ್ತು ದ್ವಿದಳ ಧಾನ್ಯ ಬೆಳೆಗಳ ವಿವರವನ್ನು ಕೋಷ್ಟಕ ೪.೫ರಲ್ಲಿ ಮತ್ತು ೧೯೯೯-೨೦೦೦ದಿಂದ ೨೦೦೧-೦೨ ನೇ ಸಾಲಿನವರೆಗೆ ಆಹಾರ ಮತ್ತು ಆಹಾರೇತರ ಬೆಳೆಗಳ ವಿವರಗಳನ್ನು ಕೋಷ್ಟಕ ೪.೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೪.೫ : ತಾಲೂಕುವಾರು ಕೃಷಿಬೆಳೆಗಳ ವಿಸ್ತೀರ್ಣ ಹೆಕ್ಟೇರುಗಳಲ್ಲಿ ೨೦೦೩-೦೪ ವಾರ್ಷಿಕ ಋತು ಮತ್ತು ಬೆಳೆಗಳ ವರದಿ ಪ್ರಕಾರ**

(ವಿಸ್ತೀರ್ಣ ಹೆಕ್ಟೇರುಗಳಲ್ಲಿ)

| ಕ್ರ.ಸಂ. | ಮುಖ್ಯ ಬೆಳೆಗಳ ವಿಸ್ತೀರ್ಣ | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|
| ೧. | **ಏಕದಳ ಧಾನ್ಯಗಳು** | | | | |
| | ಭತ್ತ | ೪೦೯೧ | ೩೬೯೦ | ೪೬೦೨ | ೧೨೩೮೩ |
| | ಅ.ಇ. ಭತ್ತ | ೧೭೮೭೮ | ೧೧೧೬೫ | ೨೦೬೭೭ | ೪೯೭೨೦ |
| | **ಒಟ್ಟು** | ೨೧೯೬೯ | ೧೪೮೫೫ | ೨೫೨೭೯ | ೬೨೧೦೩ |
| ೨. | **ದ್ವಿದಳ ಧಾನ್ಯಗಳು** | | | | |
| | ಉದ್ದು | ೧೨೬೮ | ೨೬೩ | ೪೩೪೫ | ೫೮೭೬ |
| | ಹುರುಳಿ | ೫೭೫ | ೧೬೬ | ೫೫೭ | ೧೨೯೮ |
| | ಹೆಸರು | ೩೧ | ೬೭ | ೭೯ | ೧೭೭ |
| | ಅಲಸಂದೆ | ೫೦ | ೪೬ | ೩೧೦ | ೪೦೬ |
| | **ಒಟ್ಟು** | ೧೯೨೪ | ೫೪೨ | ೫೨೯೧ | ೭೭೫೭ |
| ೩. | **ಒಟ್ಟು ಆಹಾರ ಬೆಳೆಗಳು** | ೨೩೮೯೩ | ೧೫೩೯೭ | ೩೦೫೭೦ | ೬೯೮೬೦ |
| ೪. | **ಎಣ್ಣೆ ಕಾಳುಗಳು** | | | | |
| | ನೆಲಗಡಲೆ | ೧೪೮೮ | – | ೫೧೦ | ೧೯೯೮ |
| | ಎಳ್ಳು | – | ೩೦ | ೭೫ | ೧೦೫ |
| | **ಒಟ್ಟು** | ೧೪೮೮ | ೩೦ | ೫೮೫ | ೨೧೦೩ |

**ಕೋಷ್ಟಕ : ೪.೬ ಆಹಾರ ಮತ್ತು ಆಹಾರೇತರ ಬೆಳೆಗಳು, ಬೆಳೆ ಪದ್ಧತಿ**

| ಕ್ರ.ಸಂ. | ವಿವರ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ |
|---|---|---|---|---|---|
| ೧. | **ಆಹಾರ ಬೆಳೆಗಳು** | | | | |
| i | ವಿಸ್ತೀರ್ಣ | ೧,೧೩,೪೫೦ | ೧,೧೦,೪೮೬ | ೧,೦೯,೩೮೯ | ೧,೦೫,೨೫೮ |
| ii | ಒಟ್ಟು ಬೆಳೆ ಬೆಳೆದ ಪ್ರದೇಶದ ಶೇ. | ೮೫.೧೦ | ೮೪.೬೩ | ೮೪.೬೧ | ೮೪.೧೨ |

| ಕ್ರ.ಸಂ. | | ವಿವರ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ |
|---|---|---|---|---|---|---|
| | iii | ರಾಜ್ಯದ ಒಟ್ಟು ಬೆಳೆ ಬೆಳೆದ ಪ್ರದೇಶದ ಶೇ. | ೧.೩೦ | ೧.೨೩ | ೧.೩೦ | ೧.೨೮ |
| ೨. | **ಆಹಾರೇತರ ಬೆಳೆಗಳು** | | | | | |
| | i | ವಿಸ್ತೀರ್ಣ | ೧೯,೮೧೧ | ೨೦,೦೭೦ | ೧೯,೮೯೬ | ೧೯,೮೭೪ |
| | ii | ಒಟ್ಟು ಬೆಳೆ ಬೆಳೆದ ಪ್ರದೇಶದ ಶೇ. | ೧೪.೯೦ | ೧೫.೩೭ | ೧೫.೩೯ | ೧೫.೮೮ |
| | iii | ರಾಜ್ಯದ ಒಟ್ಟು ಬೆಳೆ ಬೆಳೆದ ಪ್ರದೇಶದ ಶೇ. | ೦.೬೦ | ೦.೬೧ | ೦.೬೨ | ೦.೬೧ |
| ೩. | **ಏಕ ದಳ ಧಾನ್ಯಗಳು** | | | | | |
| | i | ವಿಸ್ತೀರ್ಣ | ೬೯,೮೯೨ | ೬೭,೧೩೬ | ೬೫,೭೨೯ | ೬೩,೪೮೮ |
| | ii | ಉತ್ಪಾದನೆ(ಟನ್‌ಗಳಲ್ಲಿ) | ೧,೨೩,೯೦೮ | ೧,೩೫,೭೯೦ | ೧,೩೯,೬೦೨ | ೧,೩೨,೯೦೧ |
| | iii | ಇಳುವರಿ (ಕಿ.ಗ್ರಾಂ./ಹೆ) | ೧,೮೬೬ | ೨,೧೨೯ | ೨,೨೩೬ | ೨,೨೦೩ |
| ೪. | **ದ್ವಿದಳ ಧಾನ್ಯಗಳು** | | | | | |
| | i | ವಿಸ್ತೀರ್ಣ | ೧೨,೧೬೪ | ೧೧,೩೮೯ | ೧೦,೫೨೦ | ೯,೨೬೯ |
| | ii | ಉತ್ಪಾದನೆ(ಟನ್‌ಗಳಲ್ಲಿ) | ೪,೭೦೮ | ೫,೩೫೦ | ೪,೫೮೯ | ೨,೬೧೯ |
| | iii | ಇಳುವರಿ (ಕಿ.ಗ್ರಾಂ./ಹೆ) | ೪೦೭ | ೪೯೪ | ೪೫೯ | ೨೯೭ |
| ೫. | **ಆಹಾರ ಧಾನ್ಯಗಳು** | | | | | |
| | i | ವಿಸ್ತೀರ್ಣ | ೮೨,೦೫೬ | ೭೮,೫೨೫ | ೭೬,೨೪೯ | ೭೨,೭೫೭ |
| | ii | ಉತ್ಪಾದನೆ(ಟನ್‌ಗಳಲ್ಲಿ) | ೧,೨೮,೬೧೬ | ೧,೪೧,೧೪೦ | ೧,೪೪,೧೯೧ | ೧,೩೫,೫೨೦ |
| | iii | ಇಳುವರಿ(ಕಿ.ಗ್ರಾಂ./ಹೆ) | ೧,೬೫೦ | ೧,೮೯೨ | ೧,೯೯೧ | ೧,೯೬೧ |
| ೬. | **ಎಣ್ಣೆ ಕಾಳುಗಳು** | | | | | |
| | i | ವಿಸ್ತೀರ್ಣ | ೩,೧೧೩ | ೩,೦೪೪ | ೨,೫೭೦ | ೨,೩೬೫ |
| | ii | ಉತ್ಪಾದನೆ (ಟನ್‌ಗಳಲ್ಲಿ) | ೪,೯೧೩ | ೪,೧೦೯ | ೪,೩೪೨ | ೩,೩೬೦ |
| | iii | ಇಳುವರಿ (ಕಿ.ಗ್ರಾಂ. / ಹೆ) | ೧,೫೧೦ | ೧,೪೨೧ | ೧,೭೭೮ | ೧,೪೯೫ |
| ೭. | **ಕಬ್ಬು** | | | | | |
| | i | ವಿಸ್ತೀರ್ಣ | ೧,೬೬೩ | ೧,೩೬೧ | ೯೩೩ | ೩೪೫ |
| | ii | ಉತ್ಪಾದನೆ (ಟನ್‌ಗಳಲ್ಲಿ) | ೧,೬೯,೦೪೪ | ೧,೨೬,೭೦೯ | ೭೫,೩೪೦ | ೨೯,೧೭೦ |
| | iii | ಇಳುವರಿ (ಕಿ.ಗ್ರಾಂ / ಹೆ) | ೧೦೭ | ೯೮ | ೮೫ | ೮೯ |

**ಬೆಳೆಗಳು**

ಕರಾವಳೀ ಪ್ರದೇಶದ ತಗ್ಗು ಭೂಮಿಯಲ್ಲಿ ವರ್ಷದ ಮೂರು ಕಾಲಗಳಲ್ಲಿಯೂ ಭತ್ತವನ್ನು ಬೆಳೆಯುವುದು ರೂಢಿಯಲ್ಲಿದೆ. ಇಲ್ಲಿ ಮುಂಗಾರು ಭತ್ತವನ್ನು ಮಳೆ ಆಶ್ರಯದಲ್ಲಿ ಬೆಳೆದು ಹಿಂಗಾರು ಹಾಗೂ ಬೇಸಿಗೆ ಭತ್ತವನ್ನು ನದಿ ಅಥವಾ ಕೆರೆ ನೀರನ್ನು ಬಳಸಿಕೊಂಡು ಭಾಗಶಃ ಅಥವಾ ಪೂರ್ಣ ನೀರಾವರಿಯಲ್ಲಿ ಬೆಳೆಯಲಾಗುತ್ತದೆ. ನೀರಿನ ಸೌಲಭ್ಯ ಕಡಿಮೆ ಇರುವ ಕಡೆಗಳಲ್ಲಿ ಒಂದು ಅಥವಾ ಎರಡು ಭತ್ತದ ಬೆಳೆಗಳನ್ನು ಬೆಳೆದು ಅನಂತರ ದ್ವಿದಳ ಧಾನ್ಯ, ಎಣ್ಣೆಕಾಳು ಅಥವಾ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಗೋಡು ಮಣ್ಣಿನ ಭಾಗಗಳಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಈ ಪ್ರದೇಶದಲ್ಲಿ ಬೆಳೆಯಲ್ಪಡುವ ಮುಖ್ಯವಾದ ದ್ವಿದಳ ಧಾನ್ಯಗಳೆಂದರೆ ಉದ್ದು, ಹೆಸರು ಮತ್ತು ಅಲಸಂದೆ. ಎಣ್ಣೆಕಾಳು ಬೆಳೆಗಳಲ್ಲಿ ನೆಲಗಡಲೆ ಹಾಗೂ ಎಳ್ಳು ಮುಖ್ಯವಾದವುಗಳು. ಬೆಂಡೆ, ಬದನೆ, ಮೆಣಸಿನಕಾಯಿ, ಕಲ್ಲಂಗಡಿ, ಸೌತೆ, ಮೂಲಂಗಿ ಮುಂತಾದವು ಹಿಂಗಾರು ಅಥವಾ ಬೇಸಿಗೆಯಲ್ಲಿ ಬೆಳೆಯುವ ತರಕಾರಿ ಬೆಳೆಗಳಾಗಿವೆ. ಪೂರ್ವ ಭಾಗದ ಕಣಿವೆಗಳಲ್ಲಿ ಮುಂಗಾರಿನಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ. ಜೊತೆಗೆ ಗೋಡಂಬಿ (ಗೇರು), ಅಡಿಕೆ, ಬಾಳೆ, ಮೆಣಸು, ಕೋಕೋ ಮುಂತಾದ ತೋಟಗಾರಿಕೆ ಬೆಳೆಗಳು ಕಂಡುಬರುತ್ತವೆ. ಮಾವು, ಹಲಸು, ಸಪೋಟ, ಸೀಬೆ, ಅನಾನಸ್, ರಬ್ಬರ್ ಈ ಭಾಗದ ಇತರೆ ತೋಟಗಾರಿಕೆ ಬೆಳೆಗಳಾಗಿವೆ.

**ಭತ್ತ :** ಭತ್ತ ಈ ಪ್ರದೇಶದ ಮುಖ್ಯವಾದ ಆಹಾರ ಬೆಳೆಯಾಗಿದೆ. ಈ ಬೆಳೆಯನ್ನು ನೀರಿನ ಅನುಕೂಲತೆಗನುಗುಣವಾಗಿ ವರ್ಷದ ಮೂರು ಕಾಲಗಳಲ್ಲಿಯೂ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಸುಮಾರು ೬೦ ಸಾವಿರ ಹೆಕ್ಟೇರು ಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗುತ್ತಿದೆ.

**ಮುಖ್ಯವಾದ ಕೀಟಗಳು :** ೧. ಕಣೆ (ಸುಳಿ ಕೊಳವೆಯ ರೂಪದಲ್ಲಿ ಬೆಳೆಯುವುದು. ತೆನೆ ಬರುವುದಿಲ್ಲ), ೨. ಹಿಟ್ಟು ತಿಗಣೆ (ಪೈರು ಹಳದಿ ಬಣ್ಣಕ್ಕೆ ತಿರುಗಿ ಒಣಗುವುದು. ಗರಿಯ ಓರೆಯಲ್ಲಿ ಹಿಟ್ಟು ತಿಗಣೆಯ ಸಮೂಹ ಕಂಡುಬರುವುದು), ೩. ಹಸಿರು ಜಿಗಿ ಹುಳು (ಗರಿಗಳ ಮೇಲೆ ಬಿಳಿ ಮಚ್ಚೆಗಳು), ೪. ಕಾಂಡ ಕೊರೆಯುವ ಹುಳು (ಸುಳಿ ಒಣಗುವುದು, ತೆನೆ ಜೊಳ್ಳಾಗುವುದು), ೫. ಎಲೆ ಸುರುಳಿ ಹುಳು (ಗರಿಗಳು ಒಳಭಾಗಕ್ಕೆ ಸುರುಳಿ ಸುತ್ತಿಕೊಳ್ಳುವುದು), ೬. ಮುಳ್ಳು ಚಿಪ್ಪಿನ ಹುಳು (ಗರಿಯ ಹಸಿರನ್ನು ನೀಳಾಕಾರವಾಗಿ ಕೆರೆದು ತಿನ್ನುವುದು), ೭. ಕೊಳವೆ ಹುಳು (ಗರಿಗಳ ಕೊಳವೆಗಳು ನೀರಿನಲ್ಲಿ ತೇಲುವುದು, ಗರಿಗಳ ಮೇಲೆ ಏಣಿಯಾಕಾರದ ಬಿಳಿ ಮಚ್ಚೆಗಳು), ೮. ನೀಲಿ ಚಿಪ್ಪಿನ ಹುಳು (ಗರಿಯ ಹಸಿರನ್ನು ನೀಳಾಕಾರವಾಗಿ ಕೆರೆದು ತಿನ್ನುವವು), ೯. ಮಿಡತೆ (ಗರಿಗಳ ಅಂಚು ಮತ್ತು ನಡುದಿಂಡನ್ನು ತಿಂದಿರುತ್ತವೆ), ೧೦. ಕಿತ್ತಲೆತಲೆ ಜಿಗಿ ಹುಳು (ಪೈರಿನಲ್ಲಿ ರಸ ಹೀರುವವು, ಪೈರು ಹಳದಿ ಬಣ್ಣಕ್ಕೆ ತಿರುಗುವವು), ೧೧. ಕೊಡಗಿನ ಕಂಬಳಿ ಹುಳು (ಗದ್ದೆಯ ಅಂಚಿನಲ್ಲಿ ಪೈರಿನ ಗರಿಗಳನ್ನು ತಿನ್ನುವವು, ೧೨. ತೆನೆ ತಿಗಣೆ (ಹಾಲು ತುಂಬುವ ಕಾಳುಗಳಿಂದ ರಸವನ್ನು ಹೀರುವುದರಿಂದ ಕಾಳುಗಳು ಜೊಳ್ಳಾಗುವುದು) ಮತ್ತು ಕಂದು ಜಿಗಿ ಹುಳು (ಗರಿಗಳ ಅಂಚು ಹಳದಿ ಬಣ್ಣಕ್ಕೆ ತಿರುಗಿದ ನಂತರ ತೆಂಡೆಗಳು ಸುಟ್ಟಂತೆ ಕಾಣುತ್ತವೆ).

**ರೋಗಗಳು :** ೧. ಬೆಂಕಿ ರೋಗ (ಗರಿಗಳ ಮೇಲೆ ವಜ್ರಾಕಾರದ ಕಂದುಚಿಕ್ಕೆಗಳುಂಟಾಗಿ ಆ ಚುಕ್ಕಿಗಳ ಮಧ್ಯಭಾಗವು ಬೂದಿ ಬಣ್ಣ ಹೊಂದಿರುತ್ತವೆ), ೨. ಕಂದುಚುಕ್ಕೆರೋಗ (ಎಲೆಗಳ ಮೇಲೆ ಮೊಟ್ಟೆಯಾಕಾರದ ಕಂದುಚುಕ್ಕೆ ಮತ್ತು ಕಾಳುಗಳ ಮೇಲೆ ಕಂದುಬಣ್ಣ ಕಂಡುಬರುತ್ತದೆ), ೩. ಊದುಬತ್ತಿ ರೋಗ (ಗರಿಗಳು ಬಿಳಿಯ ಬಣ್ಣದ್ದಾಗಿ ಹೊಳೆಯುತ್ತವೆ ಮತ್ತು ಊದುಬತ್ತಿಯಂತಹ ತೆನೆಗಳು ಕಾಣಿಸುತ್ತವೆ), ೪. ಫಾಲ್ಸ್ ಸ್ಮಟ್ಸ್ (ಕಾಲುಗಳು ಮತ್ತು ತೆನೆಯ ಭಾಗಗಳು ಕೆಂಪುಮಿಶ್ರಿತ ಕಂದುಬಣ್ಣಕ್ಕೆ ತಿರುಗುತ್ತವೆ) ಮತ್ತು ದಂಡಾಣುರೋಗ (ತೆನೆಯ ಅಂಚಿನ ಗರಿಗಳು ಒಣಗಿದಂತಾಗಿ ಬಾಗಿರುತ್ತವೆ).

**ಭತ್ತದ ತಳಿಗಳ ಗುಣಲಕ್ಷಣಗಳು :** ಭತ್ತದ ಬೆಳೆಯನ್ನು ಮೂರೂ ಹಂಗಾಮಿನಲ್ಲಿ ಬೆಳೆಯುತ್ತಿದ್ದು, ಮುಂಗಾರಿನಲ್ಲಿ ಹೇರಳವಾಗಿ ಬೀಳುವ ಮಳೆಯನ್ನು ಉಪಯೋಗಿಸಿಕೊಂಡು ಎಣಿಲಿ / ಕಾರ್ತಿ ಬೆಳೆಯನ್ನು ಮೂರೂ

ಸನ್ನಿವೇಶಗಳಲ್ಲಿ ಬೆಳೆಯುವ ರೂಢಿಯಿದೆ–ಬೆಟ್ಟು (ಎತ್ತರದ ಪ್ರದೇಶ), ಮಜಲು (ಮಧ್ಯಮ) ಹಾಗೂ ಬಯಲು (ತಗ್ಗು ಪ್ರದೇಶ)ಗಳಿಗಾಗಿ ಬೇರೆ ಬೇರೆ ತಳಿಗಳನ್ನು ಶಿಫಾರಸ್ಸು ಮಾಡಲಾಗಿದೆ. ಸುಗ್ಗಿ (ಹಿಂಗಾರು) ಹಾಗೂ ಕೊಳಕೆ (ಬೇಸಿಗೆ) ಬೆಳೆಯನ್ನು ಬಾವಿ / ಕೊಳದ ನೀರಿನ ಆಶ್ರಯದಲ್ಲಿ ಮಜಲು ಮತ್ತು ಬಯಲು ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಈ ಎಲ್ಲಾ ಸನ್ನಿವೇಶ ಹಾಗೂ ಹಂಗಾಮುಗಳಿಗೆ ಶಿಫಾರಸ್ಸು ಮಾಡಿರುವ ತಳಿಗಳ ಗುಣ ವಿಶೇಷತೆಯನ್ನು ಮುಂದೆ ನೀಡಿದೆ.

**ವಿವಿಧ ಸನ್ನಿವೇಶಗಳಲ್ಲಿ ದೊರೆಯುವ ಭತ್ತದ ಇಳುವರಿಯನ್ನು ಈ ಕೆಳಗೆ ಕೊಡಲಾಗಿದೆ**

| ಕಾಲ | ಸನ್ನಿವೇಶ | ಇಳುವರಿ ಹೆಕ್ಟೇರಿಗೆ ಕ್ವಿಂಟಾಲ್‌ಗಳಲ್ಲಿ |
|---|---|---|
| **ಮುಂಗಾರು** | ಬೆಟ್ಟು–ಮಕ್ಕಿ | ೩೦–೩೭ |
| | ಮಜಲು–ಅರೆಮಕ್ಕಿ | ೫೦–೬೨ |
| | ಬೈಲು–ಹೊಂಡ | ೪೫–೫೫ |
| **ಹಿಂಗಾರು** | ಯಡಸುಗ್ಗಿ | ೪೫–೫೫ |
| | ಸುಗ್ಗಿ | ೩೭–೫೦ |
| **ಬೇಸಿಗೆ** | ಯಡ ಕೊಳಕೆ | ೫೦–೬೨ |
| | ಕೊಳಕೆ | ೫೦–೬೨ |

**ಮಹಾವೀರ : (ಐ.ಇ.ಟಿ. ೨೮೮೬ X ಕೆಂಪು ಅನ್ನಪೂರ್ಣ) :** ಈ ತಳಿಯು ಬೆಟ್ಟು ಪ್ರದೇಶಕ್ಕೆ ಸೂಕ್ತವಿದ್ದು, ೧೯೮೫ರಲ್ಲಿ ಬಿಡುಗಡೆಯಾಗಿದೆ. ೧೦೫–೧೧೦ ದಿನಗಳಲ್ಲಿ ಕಟಾವಿಗೆ ಬರುವ ಈ ತಳಿಯು ಎಕರೆಗೆ ೧೨ ರಿಂದ ೧೬ ಕ್ವಿಂಟಾಲ್ ಇಳುವರಿ ಕೊಡುತ್ತದೆ. ಅಕ್ಕಿ ಕೆಂಪಾಗಿದ್ದು, ಮಧ್ಯಮ ಗಾತ್ರದ್ದಾಗಿದ್ದು ಉದ್ದವಾಗಿರುತ್ತದೆ. ಈ ತಳಿಯು ಕಣೆ ನಿರೋಧಕವಾಗಿದ್ದು, ೮೦–೮೫ಸೆಂ.ಮೀ. ಎತ್ತರಕ್ಕೆ ಬೆಳೆಯುತ್ತದೆ. ಪ್ರತಿ ಚ.ಮೀ.ಗೆ ೨೫೦–೨೬೦ ತೆನೆಗಳನ್ನೂ ಕೊಡುವ ಈ ತಳಿಯು ಮಳೆ ಆಶ್ರಯದಲ್ಲಿ ಬೆಳೆಯಲು ಸೂಕ್ತವಾದ ತಳಿ. **ಎಂ. ಓ.–೪ (ಐ.ಆರ್. ೮ X ಪಿ.ಟಿ.ಬಿ.೨೦) :** ಈ ತಳಿಯನ್ನು ಮಜಲು ಪ್ರದೇಶಕ್ಕೆ ಎಣೆಲು ಬೆಳೆಯಾಗಿ ಶಿಫಾರಸ್ಸು ಮಾಡಲಾಗಿದೆ ಹಾಗೂ ಬೈಲು (ತಗ್ಗು) ಪ್ರದೇಶದಲ್ಲಿಯೂ ಕೂಡ ಎಲ್ಲಿ ನೆರೆ ಬರುವುದಿಲ್ಲವೋ ಅಲ್ಲಿಯೂ ಬೆಳೆಯಬಹುದಾಗಿದೆ. ೧೯೯೫ ರಲ್ಲಿ ಬಿಡುಗಡೆಗೊಂಡ ಈ ತಳಿಯು ಪಿ.ಟಿ.ಬಿ. ೨೦ನ್ನು ಪಿತೃ ತಳಿಯಾಗಿ ಹೊಂದಿದೆ. ೧೩೦ ರಿಂದ ೧೩೫ ದಿನಗಳಲ್ಲಿ ಕಟಾವಿಗೆ ಬರುವ ಈ ತಳಿಯು ೧೦೦–೧೦೫ ಸೆಂ.ಮೀ. ಎತ್ತರ ಬೆಳೆಯಲಿದ್ದು, ಪ್ರತಿ ಚ.ಮೀಗೆ ಸರಾಸರಿ ೨೬೦–೨೮೦ ತೆನೆಗಳನ್ನು ಹೊಂದಿರುತ್ತದೆ. ಭದ್ರಾ ಎಂದು ಕರೆಸಿಕೊಳ್ಳುವ ಇದು ಕಣೆ ನಿರೋಧಕ ಶಕ್ತಿ ಹೊಂದಿದ್ದು, ಅಕ್ಕಿಯೂ ಗಿಡ್ಡ ಹಾಗೂ ದಪ್ಪವಿದ್ದು, ಕೆಂಪು ಬಣ್ಣ (ಕಜೆ) ದ್ದಾಗಿರುತ್ತದೆ. ಈ ತಳಿಯಲ್ಲಿ ಅತೀ ಹೆಚ್ಚಿನ ತೆಂಡೆಗಳನ್ನು ಕಾಣಬಹುದಾಗಿದ್ದು, ಎಕರೆಗೆ ೧೮–೨೦ ಕ್ವಿಂಟಾಲ್ ಇಳುವರಿಯನ್ನು ನಿರೀಕ್ಷಿಸಬಹುದು.

**ಲತಾ: (ವಿಕ್ರಂ X ಪಿ.ಟಿ.ಬಿ.೨) :** ಐ.ಇ.ಟಿ. ಸಂಖ್ಯೆ ೭೫೫೬ ಅನ್ನು ಹೊಂದಿರುವ ಈ ತಳಿಯು ೧೯೯೪ರಲ್ಲಿ ಬಿಡುಗಡೆಯಾಗಿದ್ದು, ಮಜಲು ಪ್ರದೇಶಕ್ಕೆ ಎಣೆಲುಗೆ ಶಿಫಾರಸ್ಸು ಮಾಡಲಾಗಿದೆ. ೧೨೦ ರಿಂದ ೧೨೫ ದಿನಗಳಲ್ಲಿ ಕಟಾವಿಗೆ ಬರುವ ಈ ತಳಿಯಿಂದ ಎಕರೆಗೆ ೧೮ ರಿಂದ ೨೦ ಕ್ವಿಂಟಾಲ್ ಇಳುವರಿಯನ್ನು ನಿರೀಕ್ಷಿಸಬಹುದಾಗಿದೆ. ಈ ತಳಿಯೂ ಕೂಡಕಣೆ ನಿರೋಧಕ ಶಕ್ತಿ ಹೊಂದಿದ್ದು, ಭತ್ತವು ಕಂದು ಬಣ್ಣದಿಂದ ಕೂಡಿರುತ್ತದೆ ಹಾಗೂ ಅಕ್ಕಿಯು ಉದ್ದ, ದಪ್ಪವಿದ್ದು ಬಿಳಿ ಬಣ್ಣದ್ದಾಗಿರುತ್ತದೆ.

**ಶಕ್ತಿ : ಐ.ಇ.ಟಿ. ೩೨೫೨ (ಸಿ.ಆರ್. ೫೫–೧೩ X ಐ.ಆರ್.೮) :** ಇದು ಎಣೆಲು, ಸುಗ್ಗಿ ಹಾಗೂ ಕೊಳಕೆ–ಮೂರು ಹಂಗಾಮಿನಲ್ಲಿ ಮಜಲು / ಬಯಲಿನಲ್ಲಿ ಬೆಳೆಯಬಹುದಾದ ತಳಿಯಾಗಿದ್ದು, ೧೯೭೭ರಲ್ಲಿ ಬಿಡುಗಡೆಯಾಗಿರುತ್ತದೆ. ಇದು ಮೊದಲ ಬೆಳೆಯಲ್ಲಿ ೧೨೫ ರಿಂದ ೧೩೦ ದಿನಗಳಲ್ಲಿ ಹಾಗೂ ಎರಡನೆಯ ಬೆಳೆಯಲ್ಲಿ ೧೨೦ ರಿಂದ ೧೨೫ ದಿನಗಳಲ್ಲಿ ಕಟಾವಿಗೆ ಬರುತ್ತದೆ. ೯೦ ರಿಂದ ೯೫ ಸೆಂ.ಮೀ. ಎತ್ತರಕ್ಕೆ ಬೆಳೆಯುವ ಹಾಗೂ ಪ್ರತಿ ಚ. ಮೀ. ಗೆ ೨೨೦ ರಿಂದ ೨೩೦ ತೆನೆಗಳನ್ನು ಕೊಡುವ ಈ ತಳಿಯಲ್ಲಿ

ಅಂದಾಜು ೧೮ ರಿಂದ ೨೦ ಕ್ವಿಂಟಾಲ್ ಇಳುವರಿಯನ್ನು ಪ್ರತಿ ಎಕರೆಗೆ ನಿರೀಕ್ಷಿಸಬಹುದು. ಈ ತಳಿಯು ಕಣೆ ನಿರೋಧಕ ಹಾಗೂ ಸ್ವಲ್ಪ ಮಟ್ಟಿಗೆ ಬೆಂಕಿ ರೋಗ ತಡೆಯುವ ಶಕ್ತಿಯನ್ನು ಹೊಂದಿದ್ದು, ಅಕ್ಕಿಯು ಗಿಡ್ಡವಾಗಿದ್ದು, ಬಿಳಿಯ ಬಣ್ಣದ್ದಾಗಿರುತ್ತದೆ.

**ಫಲ್ಗುಣ (ಐ.ಆರ್. ೮ X ಸಿಯಾಂ. ೨೯)** : ಬಯಲು ಪ್ರದೇಶಕ್ಕೆ ಸೂಕ್ತವಾದ ಈ ತಳಿಯು ಐದು–ಆರು ದಿನಗಳ ಮಟ್ಟಿಗೆ ನೆರೆ ಹಾವಳಿಯನ್ನು ತಡೆದು ಬೆಳೆಯುತ್ತದೆ. ೧೯೭೯ರಲ್ಲಿ ಬಿಡುಗಡೆಯಾದ ಈ ತಳಿಯು ೧೩೫ ರಿಂದ ೧೪೦ ದಿನಗಳಲ್ಲಿ ಕಟಾವಿಗೆ ಬರಲಿದ್ದು, ಎಕರೆಗೆ ಸುಮಾರು ೨೦ ರಿಂದ ೨೫ ಕ್ವಿಂಟಾಲ್ ಇಳುವರಿಯನ್ನು ನಿರೀಕ್ಷಿಸಬಹುದು. ೧೦೩ ರಿಂದ ೧೦೫ ಸೆಂ.ಮೀ. ಎತ್ತರಕ್ಕೆ ಬೆಳೆಯುವ ಇದು ಪ್ರತಿ ಚ.ಮೀ.ಗೆ ೨೨೦–೨೩೦ ತೆನೆಗಳನ್ನು ಹೊಂದಬಲ್ಲುದು. ಈ ತಳಿಯು ಕಣೆ ಬಯೋಟೈಪ್–೨ಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದ್ದು, ಅಕ್ಕಿಯು ಉದ್ದ ಹಾಗೂ ಸಣ್ಣಗಿದ್ದು, ಬಿಳಿ ಬಣ್ಣದ್ದಾಗಿರುತ್ತದೆ. ಕಟಾವು ತಡವಾದಲ್ಲಿ ಕಾಳು ಉದುರುವ ಸಾಧ್ಯತೆಯಿದೆ.

**ನೇತ್ರಾವತಿ : (ಐ.ಇ.ಟಿ. ೨೮೮೬ X ಕೆಂಪು ಅನ್ನಪೂರ್ಣ)** : ಕೆ. ಕೆ. ಪಿ. ೬ ಎಂದೂ ಕರೆಸಿಕೊಳ್ಳುವ ಈ ತಳಿಯು ೧೯೯೦ರಲ್ಲಿ ಬಿಡುಗಡೆಯಾಗಿದ್ದು, ಎಣೆಲಿನಲ್ಲಿ ಬಯಲು ಪ್ರದೇಶಕ್ಕೆ ಶಿಫಾರಸ್ಸು ಮಾಡಲಾಗಿದೆ. ೧೩೫ ರಿಂದ ೧೪೦ ದಿನಗಳಲ್ಲಿ ಕಟಾವಿಗೆ ಬರುವ ಈ ತಳಿಯು ಕಣೆ ನಿರೋಧಕ ಶಕ್ತಿ ಹೊಂದಿದ್ದು ನೆರೆ ಹಾವಳಿಯನ್ನು ಐದು–ಆರು ದಿನಗಳ ಮಟ್ಟಿಗೆ ತಡೆಯುವ ಗುಣ ಹೊಂದಿರುತ್ತದೆ. ಎಕರೆಗೆ ಅಂದಾಜು ೨೦ ರಿಂದ ೨೨ ಕ್ವಿಂಟಾಲ್ ಇಳುವರಿ ಕೊಡುವ ಇದರ ಅಕ್ಕಿಯು ದಪ್ಪ ಹಾಗೂ ಗಿಡ್ಡವಿದ್ದು ಬಿಳಿ ಬಣ್ಣವಾಗಿರುತ್ತದೆ.

**ಸಿ.ಟಿ.ಹೆಚ್.೧ – ಮುಕ್ತಿ : (ಸಿರಿಂಡ ಮಿರ್ಲ್ಲಾ X ಐ.ಆರ್. ೨೧೫೩–೧೫೯/ ೧–೪)** : ಸುಗ್ಗಿ ಮತ್ತು ಕೊಳಕೆ–ಎರಡೂ ಕಾಲಗಳಲ್ಲಿ ಬೆಳಯಬಹುದಾದ ಈ ತಳಿಯನ್ನು ಮಜಲು ಹಾಗೂ ಬಯಲು ಪ್ರದೇಶಕ್ಕೆ ಶಿಫಾರಸ್ಸು ಮಾಡಲಾಗಿದೆ. ಕೆಂಪು ಅಕ್ಕಿಯ ಈ ತಳಿಯು ಬೆಂಕಿರೋಗವನ್ನು ಸ್ವಲ್ಪ ಮಟ್ಟಿಗೆ ತಡೆದುಕೊಳ್ಳುವ ಶಕ್ತಿ ಹೊಂದಿರುತ್ತದೆ. ೧೯೯೨ರಲ್ಲಿ ಬಿಡುಗಡೆಗೊಂಡ ಈ ತಳಿಯು ನೀರಾವರಿ ಪ್ರದೇಶದಲ್ಲಿ ಚಳಿಗಾಲಕ್ಕೆ ಸೂಕ್ತವೆಂದು ಬಿಡುಗಡೆ ಮಾಡಿದ್ದು, ಕರಾವಳಿ ಪ್ರದೇಶದಲ್ಲಿ ಬೇಸಿಗೆಯಲ್ಲೂ ಯಶಸ್ವಿಯಾಗಿ ಬೆಳೆಯಬಹುದಾಗಿದೆ. ದಪ್ಪ ಹಾಗೂ ಉದ್ದ ಅಕ್ಕಿಯ ಈ ತಳಿಯು ೧೨೦–೧೨೫ ದಿನಗಳಲ್ಲಿ ಕಟಾವಿಗೆ ಬರಲಿದ್ದು, ಎಕರೆಗೆ ಅಂದಾಜು ೧೮ ರಿಂದ ೨೦ ಕ್ವಿಂಟಾಲ್ ಇಳುವರಿ ನಿರೀಕ್ಷಿಸಬಹುದು ಹಾಗೂ ಈ ತಳಿಯ ಬೀಜವನ್ನು ಕರಾವಳಿ ಪ್ರದೇಶದಲ್ಲಿ ಹೆಚ್ಚು ಕಾಲ ಬಿತ್ತನೆ ಬೀಜಕ್ಕಾಗಿ ಶೇಖರಿಸಿಡುವುದು ಕಷ್ಟಕರ.

**ಜ್ಯೋತಿ : (ಪಿ.ಟಿ.ಬಿ.೧೦ X ಐ.ಆರ್.೮)** : ಸುಗ್ಗಿ ಬೆಳೆಗೆ ಶಿಫಾರಿಸಲಾದ ಈ ತಳಿಯು ೧೯೭೪ರಲ್ಲೇ ಬಿಡುಗಡೆಗೊಂಡಿದ್ದು, ಮಜಲು ಪ್ರದೇಶಕ್ಕೆ ಸೂಕ್ತವಾಗಿರುತ್ತದೆ. ಬೆಂಕಿರೋಗವನ್ನು ಸ್ವಲ್ಪ ಮಟ್ಟಿಗೆ ತಡೆದುಕೊಳ್ಳುವ ಶಕ್ತಿಯಿರುವ ಈ ತಳಿಯು ೯೦–೧೦೫ ದಿನಗಳಲ್ಲಿ ಕಟಾವಿಗೆ ಬರುತ್ತದೆ. ೮೦–೮೫ ಸೆಂ.ಮೀ ಎತ್ತರಕ್ಕೆ ಬೆಳೆಯುವ ಈ ಗಿಡ್ಡ ತಳಿಯ ಪುಷ್ಪಪಾತ್ರೆಯ ಪುಚ್ಛ (ಗ್ಲೂಮ್) ಕಂದು ಬಣ್ಣವಿದ್ದು, ಎಕರೆಗೆ ೧೫–೧೮ಕ್ವಿಂಟಾಲ್ ಇಳುವರಿಯನ್ನು ನಿರೀಕ್ಷಿಸಬಹುದಾಗಿದೆ. ಅಕ್ಕಿಯು ಕೆಂಪು ಬಣ್ಣ (ಕಜೆ) ವಿದ್ದು, ಮಧ್ಯಮ ಗಾತ್ರದ್ದಾಗಿರುತ್ತದೆ. ಕಟಾವು ತಡವಾದಲ್ಲಿ ಕಾಳು ಉದುರುವ ಸಾಧ್ಯತೆ ಇದೆ.

**ಜಯ : (ಟಿ.ಎನ್.೧ಘಟಿ. ೧೪೧)** : ೧೯೭೦ರಷ್ಟು ಹಿಂದೆಯೇ ಬಿಡುಗಡೆಯಾಗಿದ್ದರೂ ಈಗಲೂ ಅತ್ಯಧಿಕ ಇಳುವರಿ ಕೊಡುವ ತಳಿಯಾಗಿದ್ದು, ಕರಾವಳಿ ಪ್ರದೇಶಕ್ಕೆ ಎಡಕೊಳಕೆ ಹಾಗೂ ಕೊಳಕೆ ಬೆಳೆಗೆ ಶಿಫಾರಸ್ಸು ಮಾಡಲಾಗಿದೆ. ಮಜಲು/ಬಯಲು ಪ್ರದೇಶಕ್ಕೆ ಬೆಳೆಯಬಹುದಾದ ಈ ತಳಿಯು ೧೨೦/೧೨೫ ದಿನಗಳಲ್ಲಿ ಕಟಾವಿಗೆ ಬರಲಿದ್ದು, ಅಂದಾಜು ೨೦–೨೫ ಕ್ವಿಂಟಾಲ್ ಇಳುವರಿ ಪ್ರತಿ ಎಕರೆಗೆ ನಿರೀಕ್ಷಿಸಬಹುದು. ಬಿಳಿಯ ಗಿಡ್ಡ ಹಾಗೂ ದಪ್ಪ ಗಾತ್ರದ ಅಕ್ಕಿ ಹೊಂದಿರುವ ಈ ತಳಿಯು ರಾಷ್ಟ್ರಮಟ್ಟದ ಉತ್ತಮ ತಳಿಯಾಗಿದೆ. ವಿವಿಧ ಸನ್ನಿವೇಶಗಳಲ್ಲಿ ದೊರೆಯುವ ಇಳುವರಿಯನ್ನು ಈ ಕೆಳಗೆ ಕೊಡಲಾಗಿದೆ.

**ಬಹು ಬೆಳೆ ಯೋಜನೆ**

ಈ ಪ್ರದೇಶದಲ್ಲಿ ಅನುಸರಿಸಬೇಕಾದ ಬಹು ಬೆಳೆ ಪದ್ಧತಿಗಳು ಮುಖ್ಯವಾಗಿ ಭೂಮಿಯ ಮೇಲ್ಮೈ ಲಕ್ಷಣ ಹಾಗೂ ಲಭ್ಯವಿರುವ ನೀರಿನ ಸೌಕರ್ಯವನ್ನು ಅವಲಂಬಿಸಿವೆ. ವಿವಿಧ ಸನ್ನಿವೇಶಗಳಿಗೆ ಸೂಕ್ತವಾದ ಕೆಲವು ಮುಖ್ಯವಾದ ಬಹು ಬೆಳೆ ಪದ್ಧತಿಗಳನ್ನು ಈ ಕೆಳಗೆ ಸೂಚಿಸಲಾಗಿದೆ.

| | | |
|---|---|---|
| **೧. ತಗ್ಗು (ಬೈಲು) ಪ್ರದೇಶ**<br>**ಮುಂಗಾರು**<br>ಭತ್ತ<br>ಭತ್ತ<br>ಭತ್ತ<br><br>ಭತ್ತ | <br>**ಹಿಂಗಾರು**<br>ಭತ್ತ<br>ಭತ್ತ<br>ದ್ವಿದಳ ಧಾನ್ಯ/<br>ನೆಲಗಡಲೆ<br>ತರಕಾರಿ ಬೆಳೆಗಳು | <br>**ಬೇಸಿಗೆ**<br>ಭತ್ತ<br>ದ್ವಿದಳ ಧಾನ್ಯ/ ನೆಲಗಡಲೆ |
| **೨. ಸಾಧಾರಣ ಎತ್ತರದ**<br>**(ಮಜಲು)** | **ಭೂಮಿ**<br>ಭತ್ತ<br>ಭತ್ತ<br>ಭತ್ತ | <br>ಭತ್ತ<br>ನೆಲಗಡಲೆ/ ಎಳ್ಳು<br>ತರಕಾರಿ ಬೆಳೆಗಳು |
| **೩. ಎತ್ತರದ (ಬೆಟ್ಟ) ಭೂಮಿ** | <br>ಭತ್ತ<br>ಭತ್ತ | <br>ಹಸಿರೆಲೆ ಗೊಬ್ಬರದ ಬೆಳೆ<br>ಹುರುಳಿ |

**ಪ್ರಾದೇಶಿಕ ಸಂಶೋಧನಾ ಕೇಂದ್ರ, ಬ್ರಹ್ಮಾವರ**

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರಡಿಯಲ್ಲಿ ಬರುವ ಬ್ರಹ್ಮಾವರದ ಪ್ರಾದೇಶಿಕ ಸಂಶೋಧನಾ ಕೇಂದ್ರವು ರಾಜ್ಯ ಕರಾವಳಿ ಪ್ರದೇಶಕ್ಕೆ ಮುಖ್ಯ ಸಂಶೋಧನಾ ಕೇಂದ್ರವಾಗಿ ೧೯೮೨ರಲ್ಲಿ ಪ್ರಾರಂಭವಾಯಿತು. ಕೇಂದ್ರವು ಬ್ರಹ್ಮಾವರ-ಹೆಬ್ರಿ ರಸ್ತೆಯಲ್ಲಿ ಬ್ರಹ್ಮಾವರದಿಂದ ಎರಡು ಕಿ.ಮೀ. ದೂರದಲ್ಲಿದೆ. ಕೇಂದ್ರದ ಒಟ್ಟು ವಿಸ್ತೀರ್ಣ ೧೨೭ ಹೆಕ್ಟೇರುಗಳಾಗಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕರಾವಳಿಯ ಐದು ತಾಲೂಕುಗಳೂ ಈ ಕೇಂದ್ರದ ಕಾರ್ಯವ್ಯಾಪ್ತಿ ಕ್ಷೇತ್ರವಾಗಿದೆ. ವೈಶಿಷ್ಟ್ಯಪೂರ್ಣ ಪ್ರಾದೇಶಿಕ ಸಮಸ್ಯೆಗಳನ್ನು ಗುರುತಿಸಿ, ಪ್ರಾಮುಖ್ಯತೆಗನುಗುಣವಾಗಿ ಪಟ್ಟಿಮಾಡಿ, ಅವಶ್ಯಕತೆಯಾಧಾರದ ಮೇಲೆ ಸಂಶೋಧನೆ ಕೈಗೊಂಡು, ವೈಜ್ಞಾನಿಕ ವಿಧಾನಗಳಲ್ಲಿ ಸಾಂಪ್ರದಾಯಿಕ ತಿಳುವಳಿಕೆಗಳನ್ನೂ, ರೈತರ ಅನುಭವಗಳನ್ನೂ ಪರಿಗಣಿಸಿ, ಲಭ್ಯ ಸಂಪನ್ಮೂಲಗಳನ್ನು ರೂಪಿಸಿ, ಅವುಗಳನ್ನು ಕೃಷಿಕರಿಗೆ ಹಾಗೂ ವಿಸ್ತರಣಾ ಕಾರ್ಯಕರ್ತರಿಗೆ ತಲುಪಿಸುವ ಮೂಲಕ ಕೃಷಿ ವ್ಯವಸ್ಥೆಯನ್ನು ಬಲಗೊಳಿಸುವ ಹೊಣೆಯನ್ನು ಪ್ರಾದೇಶಿಕ ಸಂಶೋಧನಾ ಕೇಂದ್ರವು ಹೊತ್ತಿದೆ.

**ಸಂಶೋಧನಾ ಆದ್ಯತೆಗಳು :** ೧. ಬತ್ತ ಹಾಗೂ ಬತ್ತ ಆಧಾರಿತ ಯೋಜನೆಗಳು : ನೆಲಗಡಲೆ, ಉದ್ದು, ಹೆಸರು, ಅಲಸಂದೆ ಹಾಗೂ ತರಕಾರಿ ಬೆಳೆಗಳು; ೨. ಕರಾವಳಿ ಪ್ರದೇಶದ ತೋಟಗಾರಿಕೆ: ವಿಶೇಷವಾಗಿ ಗೇರು, ಮಾವು, ಸೀಬೆ, ಸಪೋಟಾ ತರಕಾರಿ ಬೆಳೆಗಳು ಮಲ್ಲಿಗೆ ಇತ್ಯಾದಿ ; ೩. ಮಣ್ಣು ಮತ್ತು ನೀರು ನಿರ್ವಹಣೆ: ಮಣ್ಣು ಮತ್ತು ನೀರು ಸಂರಕ್ಷಣೆ ಹನಿ ನೀರಾವರಿ ವಿಧಾನಗಳು; ೪. ಒಳನಾಡು ಮೀನುಗಾರಿಕೆ.

**ಸಂಶೋಧನಾ ಫಲಗಳು :** ೧. ಬತ್ತದ ತಳಿಗಳ ಅಭಿವೃದ್ಧಿ, ಆಯ್ಕೆ ಮತ್ತು ಬಿಡುಗಡೆ-ಅ) ಎಂ. ಓ-೪ (ಭದ್ರ): ಕೆಂಪು ದಪ್ಪ ಅಕ್ಕಿ, ಕಣೆ ತಡೆಯುವುದು, ೧೩೦ ದಿವಸ, ಕಾರ್ತಿಯಲ್ಲಿ ಬಯಲು, ಮಜಲಿಗೆ.

ಆ) ಲತಾ (ಐ. ಇ. ಟಿ–೭೫೬) ದಪ್ಪ ಅಕ್ಕಿ, ಕಣೆ ತಡೆಯುವುದು. ೧೨೫ ದಿವಸ, ಕಾರ್ತಿಯಲ್ಲಿ, ಮಜಲಿಗೆ. ಇ) ಮುಕ್ತಿ (ಸಿ.ಟಿ.ಎಚ್–೧) ಕೆಂಪು ದಪ್ಪ ಅಕ್ಕಿ, ೧೧೫ ದಿವಸ, ಸುಗ್ಗಿ ಬೆಳೆಗೆ; ೨. ಭತ್ತದ ಬೆಳೆ ಉತ್ಪಾದನೆ: ಅ) ಹಸಿರೆಲೆ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರಗಳ ಸಮತೋಲನ ಬಳಕೆಯು ಕೇವಲ ರಸಗೊಬ್ಬರಗಳ ಬಳಕೆಗಿಂತ ಉತ್ತಮ. ಆ) ಪ್ರತಿ ಹೆಕ್ಟೇರಿಗೆ ೬೦:೩೦:೪೫ ಕೆ. ಜಿ. ಸಾರಜನಕ, ರಂಜಕ ಮತ್ತು ಪೊಟ್ಯಾಸಿಯಂ ಪೋಷಕಾಂಶಗಳ ಪೂರೈಕೆ ಸಾಕು. ಇ) ಶಿಲಾರಂಜಕದ ಬಳಕೆಯು ಸೂಪರ್ ಫಾಸ್ಪೇಟ್ ಬಳಕೆಗಿಂತ ಉತ್ತಮ. ಈ) ಬತ್ತದ ಎರಡು ಬೆಳೆಗಳ ಬದಲಿಗೆ, ಬತ್ತ– ನೆಲಗಡಲೆ ಅಥವಾ ಬತ್ತ–ತರಕಾರಿ ಬೆಳೆ ಯೋಜನೆಗಳು ಉತ್ತಮ ; ೩. ನೆಲಗಡಲೆ : ಅ) ಈಗಾಗಲೇ ಇರುವ ಟಿ. ಎಂ. ವಿ–೨ ತಳಿಯೊಡನೆ ಡಿ. ಎಚ್. ೩–೩೦ ಹಾಗೂ ಡಿ.ಎಚ್–೪೦ ಉತ್ತಮ ತಳಿಗಳು.

ಆ) ಬೀಜದ ನೆಲಗಡಲೆ ಕಾಯಿಗಳನ್ನು ಚೆನ್ನಾಗಿ ಒಣಗಿಸಿ, ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿಡುವುದರಿಂದ, ಬೀಜ ಮೊಳೆಯುವ ಶಕ್ತಿಯನ್ನು ಮುಂದಿನ ವರ್ಷದ ಬಿತ್ತನೆಯ ಸಮಯದವರೆಗೂ ಕಾಯ್ದುಕೊಳ್ಳಬಹುದು. ಇ) ಬಿತ್ತನೆಯನ್ನು ನವೆಂಬರ್ ತಿಂಗಳಲ್ಲಿ, ಒಂದು ಅಡಿ ಸಾಲಿನಲ್ಲಿ ಮಾಡುವುದು ಉತ್ತಮ; ೪) ದ್ವಿದಳ ಧಾನ್ಯಗಳು: ಅ) ಉದ್ದು– ಎಲ್.ಬಿ.ಜಿ–೧೭ ಬೂದುರೋಗ ತಡೆಯುವುದು, ಹೊಳಪುಳ್ಳ ಕಾಳು; ಆ) ಹೆಸರು– ಪೂಸಾ–೧೦೩, ಬೂದು ರೋಗ ತಡೆಯುವುದು ಪೂಸಾ ಬೈಸಾಕಿ; ಇ) ಅಲಸಂದೆ– ಟಿ.ವಿ.ಎಕ್ಸ್–೯೪೦–೦೨ ಇ, ಇಲೆತುಕ್ಕು ರೋಗ ತಡೆಯುವುದು, ಅಧಿಕ ಇಳುವರಿ; ೫. ಮಾವು: ರತ್ನ ಹೈಬ್ರಿಡ್– ಪ್ರತಿ ವರ್ಷ ಇಳುವರಿ, ಉತ್ತಮ ಗುಣ ಹೊಂದಿದೆ; ೬. ಬಾಳೆ: ರೋಬಸ್ಟಾ, ತಳಿ ಉತ್ತಮ ಹಾಗೂ ಪ್ರತಿ ಗುಣಿಗೆ ಎರಡು ಗೆಡ್ಡೆಗಳನ್ನು ನೆಡುವುದು ಉತ್ತಮ; ೭. ಪಪ್ಪಾಯಿ: ಕೂರ್ಗ್ ಹನಿಡ್ಯೂ, ಉತ್ತಮ ತಳಿ; ೮. ಗೇರು: ಅ) ಉಳ್ಳಾಲ–೧, ೨, ೩ ಮತ್ತು ೪; ಆ) ವಾರ್ಷಿಕ– ಪ್ರತಿ ಮರಕ್ಕೆ ೫೦೦:೧೨೦:೧೨೦ ಗ್ರಾಂ, ಸಾ:ರಂ:ಪೊ. ರಸಗೊಬ್ಬರಗಳ ಬಳಕೆ; ೯. ಅರಿಶಿಣ: ಸುಗುಣ, ಸುದರ್ಶನ; ೧೦. ಶುಂಠಿ: ಮಾರನ್ ತಳಿ; ೧೧. ಮೆಣಸಿನ ಕಾಯಿ: ಪೂಸಾ ಜ್ವಾಲಾ ಮತ್ತು ಜಿ–೪ ತಳಿಗಳು; ೧೨. ಹರಿವೆ ಸೊಪ್ಪು: ಸಿ. ಓ–೩ ತಳಿ; ೧೩. ಮೂಲಂಗಿ: ಪೂಸಾ ಚೇತಕಿ ತಳಿ; ೧೪. ಟೊಮ್ಯಾಟೋ: ಸ್ಥಳೀಯವಾಗಿ ಸಮಸ್ಯೆಯಾಗಿರುವ ಗಿಡ ಬಾಡುವ ರೋಗವನ್ನು ತಡೆದುಕೊಳ್ಳುವ ಶಕ್ತಿಯುಳ್ಳ 'ಶಕ್ತಿ' ಮತ್ತು 'ಷೆಷರ್ಡ್' ತಳಿಗಳು ಉತ್ತಮ; ೧೫. ಮಲ್ಲಿಗೆ: ಜಾಜಿ ಮತ್ತು ಕಾಕಡ ಅಧಿಕ ಇಳುವರಿ ನೀಡಿದರೆ, ಉಡುಪಿ ಮಲ್ಲಿಗೆ ಅಧಿಕ ಆದಾಯ ನೀಡಿದೆ; ೧೬. ಕನಕಾಂಬರ: ಬ್ರೈಟ್ ಆರೇಂಜ್ ತಳಿ; ೧೭. ಒಳನಾಡು ಮೀನುಗಾರಿಕೆ : ಕೆರೆಗಳಲ್ಲಿ ಸಣ್ಣ ಮರಿಗಳು ಬೆಳೆಯುವವರೆಗೂ ಕೆರೆಯ ಒಂದು ಭಾಗದಲ್ಲಿ ಪ್ರತ್ಯೇಕಿಸಿಡುವುದು ಅನುಕೂಲಕರ.

**ಕೃಷಿಕರಿಗೆ ಲಭ್ಯವಿರುವ ಸವಲತ್ತುಗಳು :** ೧. ಮಾಹಿತಿ ಲಭ್ಯತೆ : ಬೆಳೆ ಉತ್ಪಾದನೆ, ತೋಟಗಾರಿಕೆ, ಮಣ್ಣು ಮತ್ತು ನೀರು ನಿರ್ವಹಣೆ, ಸವಯವ ಕೃಷಿ, ಕೃಷಿಯಾಂತ್ರೀಕರಣ, ಸಸ್ಯ ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ರೈತರಿಗೆ ಅಗತ್ಯವೆನಿಸಿದ ಮಾಹಿತಿಯನ್ನು, ವೈಯಕ್ತಿಕವಾಗಿ, ಪತ್ರಮುಖೇನ ಅಥವಾ ದೂರವಾಣಿಯ ಮೂಲಕ ನೀಡಲಾಗುವುದು; ೨. ಸಮಸ್ಯೆಗೆ ಪರಿಹಾರ: ಸ್ಥಳೀಯ ವಿಸ್ತರಣಾ ಕಾರ್ಯಕರ್ತರು ಬಗೆಹರಿಸಲಾಗದ ತೀವ್ರ ಸಮಸ್ಯಾತ್ಮಕ ತಾಣಗಳಿಗೆ ವಿಜ್ಞಾನಿಗಳ ಭೇಟಿ; ೩. ವಿಚಾರ ವಿನಿಮಯ ವೇದಿಕೆ : ವಿವಿಧ ವಿಷಯಗಳಲ್ಲಿ ಅಗಿಂದಾಗ್ಗೆ ತರಬೇತಿ, ವಿಚಾರ ಸಂಕಿರಣ, ಮುಖಾಮುಖಿ ಚರ್ಚೆ ಮುಂತಾದ ಕಾರ್ಯಕ್ರಮಗಳು; ೪. ಬೀಜಗಳ ಲಭ್ಯತೆ: ಉತ್ತಮ ಗುಣಮಟ್ಟದ ಬತ್ತದ ವಿವಿಧ ತಳಿಗಳ ಬೀಜಗಳನ್ನು ಪೂರೈಸಲಾಗುವುದು; ೫. ಸಸಿಗಳ ಲಭ್ಯತೆ: ಗೇರು, ಮಲ್ಲಿಗೆ, ಚಿಕ್ಕು ಮತ್ತು ಮಾವು ತಳಿಗಳ ಉತ್ತಮ ಕಸಿಗಿಡಗಳು, ಕಾಳು ಮೆಣಸಿನ ಬೇರುಳ್ಳ ತುಂಡುಗಳು ಮುಂತಾದವು.

## ರೈತ ಮಿತ್ರ ಯೋಜನೆ – ರೈತ ಸಂಪರ್ಕ ಕೇಂದ್ರಗಳು

ರೈತರಿಗೆ ಸುಧಾರಿತ ಕೃಷಿ ತಂತ್ರಜ್ಞಾನವನ್ನು ನಿರಂತರವಾಗಿ ತಲುಪಿಸಲು ಕ್ಷೇತ್ರಗಳಲ್ಲಿ ಅಳವಡಿಕೆ ಮಾಡಿಕೊಳ್ಳುವುದಕ್ಕೆ ಪ್ರೇರೇಪಿಸಿ, ತನ್ಮೂಲಕ ಕೃಷಿ ಉತ್ಪಾದನೆ ಹಾಗೂ ರೈತ ವರ್ಗದ ಅಭಿವೃದ್ಧಿ ಸಾಧಿಸಲು

೨೦೦೦-೨೦೦೧ ನೇ ಸಾಲಿನಿಂದ ರೈತಮಿತ್ರ ಎಂಬ ವಿನೂತನ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲೆಯ ಪ್ರತಿಯೊಂದು ಕಂದಾಯ ಹೋಬಳಿ ಕೇಂದ್ರಗಳಲ್ಲಿ ಕಂದಾಯ ನಿರೀಕ್ಷಕ ಕಚೇರಿ ಇರುವ ಸ್ಥಳಗಳಲ್ಲಿ "ರೈತ ಸಂಪರ್ಕ ಕೇಂದ್ರ" ಗಳನ್ನು ಸ್ಥಾಪಿಸಲಾಗಿದೆ. ಆಯಾ ಹೋಬಳಿ ವ್ಯಾಪ್ತಿಯ ರೈತರಿಗೆ ಸುಧಾರಿತ ತಂತ್ರಜ್ಞಾನವನ್ನು ವ್ಯವಸ್ಥಿತವಾಗಿ, ನಿರಂತರವಾಗಿ ಮತ್ತು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸುವುದು ಈ ರೈತ ಸಂಪರ್ಕ ಕೇಂದ್ರಗಳ ಮುಖ್ಯ ಉದ್ದೇಶವಾಗಿದೆ. ರೈತರು ಕ್ಷೇತ್ರಮಟ್ಟದಲ್ಲಿ ಸುಧಾರಿತ ಕೃಷಿ ತಂತ್ರಜ್ಞಾನವನ್ನು ಅಳವಡಿಸುವಾಗ ಎದುರಿಸುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಗುರುತಿಸಿ ಪರಿಹಾರೋಪಾಯಗಳನ್ನು ಸೂಚಿಸುವ ಹಾಗೂ ಈ ಪರಿಹಾರಗಳನ್ನು ಅಳವಡಿಸುವಂತೆ ಮನವರಿಕೆ ಮಾಡುವುದು ಈ ಸಂಪರ್ಕ ಕೇಂದ್ರಗಳ ಮುಖ್ಯ ಚಟುವಟಿಕೆಯಾಗಿರುತ್ತದೆ. ಅಲ್ಲದೆ ಬೀಜ, ಮೊಳಕೆ ಪ್ರಮಾಣ ಪರೀಕ್ಷೆ, ರಾಸಾಯನಿಕ ಗೊಬ್ಬರಗಳ ಭೌತಿಕ ಗುಣ ಧರ್ಮಗಳ ಪರಿಶೀಲನೆ ಮಾಡಿ ಸಲಹೆ ನೀಡುವುದು ಇವೇ ಮುಂತಾದ ಕೆಲವೊಂದು ಮೂಲಭೂತ ತಾಂತ್ರಿಕ ಬೆಂಬಲ ಸೇವೆಯನ್ನು ಸ್ಥಳೀಯವಾಗಿ ರೈತರಿಗೆ ನೀಡಲಾಗುತ್ತದೆ. ರೈತ ಸಂಪರ್ಕ ಕೇಂದ್ರಗಳು ಈ ಕೆಳಕಾಣಿಸಿದ ಉದ್ದೇಶಗಳ ಈಡೇರಿಕೆಗಾಗಿ ಶ್ರಮಿಸುತ್ತವೆ.

- ಇಲಾಖೆಯ ಬೆಳೆ ಸಂಗೋಪನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಪ್ರಾಥಮಿಕ ಘಟಕವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಕ್ಷೇತ್ರಮಟ್ಟದ ಸಮಸ್ಯೆಗಳನ್ನು ಗುರುತಿಸಿ ಪರಿಹಾರೋಪಾಯಗಳನ್ನು ಸೂಚಿಸುವುದು.
- ಕೃಷಿ ಹಾಗೂ ಕೃಷಿಗೆ ಸಂಬಂಧಿತ ಇತರ ಉತ್ಪಾದನಾ ಚಟುವಟಿಕೆಗಳಲ್ಲಿ ಪ್ರಮುಖವಾಗಿ ತೋಟಗಾರಿಕೆ, ಬೆಳೆ ಉತ್ಪಾದನೆ ಬಗ್ಗೆ ವಿಸ್ತರಣಾ ಸೇವೆಯ ಅವಶ್ಯಕತೆಗಳನ್ನು ಪೂರೈಸುವುದು.
- ರೈತರು, ರೈತ ಮಹಿಳೆಯರು ಮತ್ತು ಯುವಕ ರೈತರು, ಎದುರಿಸುತ್ತಿರುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಗುರುತಿಸುವ, ಮಾಹಿತಿ ಒದಗಿಸುವ ಹಾಗೂ ಚರ್ಚಾ ಕೇಂದ್ರಗಳಾಗಿ ನಿರ್ವಹಿಸುವುದು.
- ಕೃಷಿ ಪರಿಕರಗಳ ಸ್ಥಳೀಯ ಬೇಡಿಕೆಗಳನ್ನು ಪೂರೈಸುವುದು.
- ಕೃಷಿ ಪದವೀಧರ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡುವುದು.

## ನೀರಾವರಿ

ನೀರಾವರಿ ಮೂಲಗಳನ್ನು ಅ) ಕಾಲುವೆಗಳು, ಆ) ಕೆರೆಗಳು, ಇ) ಬಾವಿಗಳು ಮತ್ತು ಈ) ಇತರ ಮೂಲಗಳು ಎಂದು ವಿಭಾಗಿಸಬಹುದು. ಉಡುಪಿ ಜಿಲ್ಲೆಯಲ್ಲಿ ಖಾಸಗಿ ಅಥವಾ ಸರ್ಕಾರದ ಒಡೆತನದ ಕಾಲುವೆ ನೀರಾವರಿ ಸೌಲಭ್ಯಗಳಿಲ್ಲ. ಕೆರೆಗಳು, ಬಾವಿಗಳು ಮತ್ತು ಏತ ನೀರಾವರಿ ಸೇರಿದಂತೆ ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.

**ಕೋಷ್ಟಕ ೪.೭ : ತಾಲೂಕುವಾರು ನೀರಾವರಿ ಭೂಮಿಯ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)**

೨೦೦೩-೦೪ರ ವಾರ್ಷಿಕ ಋತು ಮತ್ತು ಬೆಳೆಗಳ ವರದಿ ಪ್ರಕಾರ

| ಕ್ರ.ಸಂ. | ನೀರಾವರಿಯಾದ ನಿವ್ವಳ ಪ್ರದೇಶ | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|
| ೧ | **ಕಾಲುವೆಗಳಿಂದ** | - | - | - | - |
| ೨ | **ಕೆರೆಗಳಿಂದ** | ೧೫೦ | ೧೭೭ | ೧,೫೬೦ | ೧,೮೮೭ |
| ೩ | **ಬಾವಿಗಳಿಂದ** | ೬,೪೭೪ | ೪,೭೮೯ | ೪,೬೨೭ | ೧೫,೮೯೦ |
| ೪ | **ಕೊಳವೆ ಬಾವಿಗಳಿಂದ** | ೬೮ | ೨೧೪ | ೧೭೮ | ೪೬೦ |
| ೫ | **ಏತ ನೀರಾವರಿ** | ೬೬೦ | ೮೨೭ | ೩,೭೭೦ | ೫,೨೫೭ |
| ೬ | **ಇತರೆ ಮೂಲಗಳಿಂದ** | ೫,೦೮೪ | ೨,೫೮೯ | ೧,೨೩೦ | ೮,೯೦೩ |
| ೭ | **ಒಟ್ಟು** | ೧೨,೪೩೬ | ೮,೫೯೬ | ೧೧,೩೬೫ | ೩೨,೩೯೭ |

## ಕೋಷ್ಟಕ ೪.೮ : ಜಿಲ್ಲೆಯಲ್ಲಿ ನೀರಾವರಿಯಾದ ಪ್ರದೇಶದ ವಿವರ

(ಹೆಕ್ಟೇರುಗಳಲ್ಲಿ)

| ಕ್ರ.ಸಂ. | ವಿವರ | | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ |
|---|---|---|---|---|---|---|
| ೧) | ಕಾಲುವೆಗಳಿಂದ | ಒಟ್ಟು | – | – | – | – |
| | | ನಿವ್ವಳ | – | – | – | – |
| ೨) | ಕೆರೆಗಳಿಂದ | ಒಟ್ಟು | ೨,೭೪೭ (೭.೩೦) | ೨,೬೭೭ (೭.೪೦) | ೨,೩೮೧ (೬.೫೦) | ೨,೨೩೬ (೬.೪೯) |
| | | ನಿವ್ವಳ | ೨,೨೬೬ (೬.೩೦) | ೨,೨೦೧ (೬.೪೦) | ೨,೨೭೩ (೬.೬೦) | ೨,೧೭೮ (೬.೪೮) |
| ೩) | ಬಾವಿಗಳಿಂದ | ಒಟ್ಟು | ೧೪,೧೭೪ (೩೭.೫೦) | ೧೩,೫೩೬ (೩೭.೬೦) | ೧೪,೪೬೭ (೩೯.೨೦) | ೧೬,೭೪೧ (೪೮.೬೦) |
| | | ನಿವ್ವಳ | ೧೩,೩೩೫ (೩೭.೨೦) | ೧೨,೮೭೦ (೩೭.೫೦) | ೧೩,೭೨೨ (೪೦.೦೦) | ೧೬,೨೮೫ (೪೮.೪೪) |
| ೪) | ಕೊಳವೆ ಬಾವಿಗಳಿಂದ | ಒಟ್ಟು | ೧೯೬ (೦.೫೦) | ೩೩೩ (೦.೯೦) | ೩೩೮ (೧.೦೦) | ೪೯೩ (೧.೪೩) |
| | | ನಿವ್ವಳ | ೧೯೪ (೦.೫೦) | ೩೩೦ (೧.೦೦) | ೩೩೪ (೧.೦೦) | ೪೯೧ (೧.೧೬) |
| ೫) | ಏತ ನೀರಾವರಿ | ಒಟ್ಟು | ೮೮೩ (೨.೩೦) | ೮೭೫ (೨.೪೦) | ೮೭೨ (೨.೪೦) | ೪,೮೦೩ (೧೩.೯೪) |
| | | ನಿವ್ವಳ | ೮೫೨ (೨.೪೦) | ೮೪೮ (೨.೫೦) | ೮೪೩ (೨.೪೦) | ೪,೫೩೨ (೧೩.೪೮) |
| ೬) | ಇತರೆ ಮೂಲಗಳಿಂದ | ಒಟ್ಟು | ೧೯,೮೨೫ (೫೨.೪೦) | ೧೮,೬೦೭ (೫೧.೬೦) | ೧೮,೧೫೧ (೫೧.೦೦) | ೧೦,೧೭೬ (೨೯.೫೪) |
| | | ನಿವ್ವಳ | ೧೯,೨೧೮ (೫೩.೬೦) | ೧೮,೦೫೪ (೫೨.೬೦) | ೧೭,೮೫೯ (೫೦.೧೦) | ೧೦,೧೩೧ (೩೦.೧೪) |
| ಒಟ್ಟು ಎಲ್ಲಾ ಮೂಲಗಳಿಂದ | | ಒಟ್ಟು | **೩೭,೮೨೫** | **೩೬,೦೨೮** | **೩೬,೨೧೯** | **೩೪,೪೪೯** |
| | | ನಿವ್ವಳ | **೩೫,೮೬೫** | **೩೪,೩೦೩** | **೩೫,೦೩೧** | **೩೩,೬೧೭** |

*ಆವರಣದಲ್ಲಿರುವ ಅಂಕಿಗಳು ಒಟ್ಟು ನೀರಾವರಿಯಾದ ಪ್ರದೇಶದ ಶೇಕಡಾವಾರು ಅಂಶವನ್ನು ಸೂಚಿಸುತ್ತವೆ.*

## ತೋಟಗಾರಿಕೆ

ಪ್ರಾಚೀನ ಕಾಲದಲ್ಲಿ ತೋಟಗಾರಿಕೆ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಶಿಲಾಶಾಸನ, ಸಾಹಿತ್ಯ ಮೂಲ ಮತ್ತು ಪ್ರವಾಸಿ ಕಥನಗಳಿಂದ ತಿಳಿಯಬಹುದು. ಹೂವುಗಳ ಉದ್ಯಾನ ಅಥವಾ ತುಡಿಕೆ, ಅದರಲ್ಲೂ ವಿಶೇಷವಾಗಿ ದೇವಾಲಯಗಳು ಮತ್ತು ಪಟ್ಟಣಗಳಿಗೆ ಸಂಬಂಧಿಸಿದ ಉದ್ಯಾನ ಅಥವಾ ಪುಷ್ಪೋದ್ಯಮ ವಿಷಯದ ಪ್ರಸ್ತಾಪಗಳು ಶಾಸನಗಳಲ್ಲಿವೆ. ಹಣ್ಣಿನ ತೋಟಗಳನ್ನೂ ಬೆಳೆಸಲಾಗುತ್ತಿತ್ತು. ಶಾಸನಗಳಲ್ಲಿ ಇದಕ್ಕೆ ಸಾಕ್ಷ್ಯಾಧಾರಗಳಿವೆ. ವಿಜಯನಗರದ ರಾಜಧಾನಿಯ ಸುತ್ತಮುತ್ತ ಮಾತ್ರವೇ ಅಲ್ಲ ಪಶ್ಚಿಮ ಕರಾವಳಿಯ ಮತ್ತು ರಾಜಧಾನಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಯ ಎರಡೂ ಬದಿಗಳಲ್ಲಿ ಹಣ್ಣಿನ ತೋಟಗಳಿದ್ದವೆಂದು ವಿಜಯನಗರ ರಾಜಧಾನಿಗೆ ಭೇಟಿ ನೀಡಿದ್ದ ಪ್ರವಾಸಿಗರು ಹೇಳಿದ್ದಾರೆ.

## ಕೋಷ್ಟಕ ೪.೯ : ಉಡುಪಿ ಜಿಲ್ಲೆಯ ತೋಟಗಾರಿಕೆ ಬೆಳೆಗಳ ಅಂಕಿ-ಅಂಶಗಳು

| ಕ್ರ.ಸಂ. | ವಿವರ / ವರ್ಷ | ೨೦೦೦-೦೧ | ೨೦೦೧-೦೩ | ೨೦೦೨-೦೩ |
|---|---|---|---|---|
| ೧ | ಭೌಗೋಳಿ ವಿಸ್ತೀರ್ಣ (ಹೆ) | ೩,೫೬,೪೪೬ | ೩,೫೬,೪೪೬ | ೩,೫೬,೪೪೬ |
| ೨ | ಸಾಗುವಳಿ ಪ್ರದೇಶ | ೧,೪೭,೦೭೮ | ೧,೪೭,೩೨೨ | ೧,೪೬,೭೯೫ |
| ೩ | ಭೌಗೋಳಿಕ ವಿಸ್ತೀರ್ಣ ಶೇಕಡಾವಾರು ಸಾಗುವಳಿ ಪ್ರದೇಶ | ೪೧ | ೪೧ | ೪೧ |
| ೪ | ತೋಟಗಾರಿಕೆ ಬೆಳೆಗಳ ವಿಸ್ತೀರ್ಣ | ೫೮,೧೬೦ | ೫೯,೩೯೪ | ೬೧,೪೯೫ |
| ೫ | ಸಾಗುವಳಿ ಪ್ರದೇಶಕ್ಕೆ ಶೇಕಡಾವಾರು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ | ೪೦ | ೪೦ | ೪೨ |
| ೬ | ಹಣ್ಣುಗಳು | | | |
| i | ವಿಸ್ತೀರ್ಣ (ಹೆ) | ೭,೧೨೭ | ೬,೨೮೪ | ೬,೪೮೯ |
| ii | ಉತ್ಪಾದನೆ (ಟನ್) | ೧,೧೦,೨೭೭ | ೧,೦೩,೮೦೭ | ೧,೦೭,೩೧೬ |
| iii | ಇಳುವರಿ (ಟನ್/ ಹೆ) | ೧೫ | ೧೭ | ೧೭ |
| iv | ಮೌಲ್ಯ (ಲಕ್ಷ ರೂ.) | ೪,೪೩೧ | ೨,೮೪೫ | ೩,೭೮೩ |
| ೭ | ತರಕಾರಿಗಳು | | | |
| i | ವಿಸ್ತೀರ್ಣ (ಹೆ) | ೪,೭೪೨ | ೬,೯೭೫ | ೭,೩೨೨ |
| ii | ಉತ್ಪಾದನೆ (ಟನ್) | ೬೭,೭೨೯ | ೮೧,೩೧೫ | ೮೪,೪೬೨ |
| iii | ಇಳುವರಿ (ಟನ್ / ಹೆ) | ೧೪ | ೧೨ | ೧೨ |
| iv | ಮೌಲ್ಯ (ಲಕ್ಷ ರೂ.) | ೨,೯೨೨ | ೧,೭೨೪ | ೨,೩೨೨ |
| ೮ | ಸಾಂಬಾರು ಬೆಳೆಗಳು | | | |
| i | ವಿಸ್ತೀರ್ಣ (ಹೆ) | ೧,೩೯೦ | ೧,೯೦೪ | ೧,೯೦೧ |
| ii | ಉತ್ಪಾದನೆ (ಟನ್) | ೬,೬೬೦ | ೮,೩೪೩ | ೭,೭೪೨ |
| iii | ಇಳುವರಿ (ಟನ್ / ಹೆ) | ೦೫ | ೦೪ | ೦೪ |
| iv | ಮೌಲ್ಯ (ಲಕ್ಷ ರೂ.) | ೧,೫೩೪ | ೧,೨೫೮ | ೩,೦೮೭ |
| ೯ | ತೋಟದ ಬೆಳೆಗಳು | | | |
| i | ವಿಸ್ತೀರ್ಣ (ಹೆ) | ೪೪,೩೯೬ | ೪೩,೮೦೪ | ೫,೪೧೨ |
| ii | ಉತ್ಪಾದನೆ (ಟನ್) | ೫೧,೪೧೩ | ೩೬,೧೦೬ | ೩೨,೭೦೪ |
| iii | ಇಳುವರಿ (ಟನ್/ ಹೆ) | ೦೧ | ೦೧ | ೦೧ |
| iv | ಮೌಲ್ಯ (ಲಕ್ಷ ರೂ.) | ೧೬,೩೯೩ | ೧೪,೦೩೬ | ೧೯,೧೬೮ |
| ೧೦ | ವಾಣಿಜ್ಯ ಪುಷ್ಪಗಳು | | | |
| i | ವಿಸ್ತೀರ್ಣ (ಹೆ) | ೫೦೫ | ೪೨೭ | ೩೭೧ |
| ii | ಉತ್ಪಾದನೆ (ಟನ್) | ೨,೭೩೮ | ೨,೦೪೭ | ೧,೯೭೬ |
| iii | ಇಳುವರಿ (ಟನ್ / ಹೆ) | ೦೫ | ೦೫ | ೦೫ |
| iv | ಮೌಲ್ಯ (ಲಕ್ಷ ರೂ.) | ೩೮೦ | ೬೭೭ | ೨೪೯ |

| ಕ್ರ.ಸಂ. | ವಿವರ / ವರ್ಷ | ೨೦೦೦-೦೧ | ೨೦೦೧-೦೩ | ೨೦೦೨-೦೩ |
|---|---|---|---|---|
| ೧೧ | **ಒಟ್ಟು ತೋಟಗಾರಿಕೆ ಬೆಳೆಗಳು** | | | |
| i | ವಿಸ್ತೀರ್ಣ (ಹೆ) | ೫೮,೧೬೦ | ೫೯,೩೯೪ | ೬೧,೪೯೫ |
| ii | ಉತ್ಪಾದನೆ (ಟನ್) | ೨,೩೮,೮೧೭ | ೨,೩೧,೬೧೮ | ೨,೩೪,೨೦೦ |
| iii | ಇಳುವರಿ (ಟನ್/ ಹೆ) | ೦೪ | ೦೪ | ೦೪ |
| iv | ಮೌಲ್ಯ (ಲಕ್ಷ ರೂ.) | ೨೫,೬೬೧ | ೨೦,೫೪೦ | ೨೯,೨೦೯ |
| ೧೨ | **ಒಟ್ಟು ಜಿಲ್ಲೆಗಳಲ್ಲಿ ತೋಟಗಾರಿಕೆ** | | | |
| i | ವಿಸ್ತೀರ್ಣ (ಹೆ) | ೩.೮೦ | | |
| ii | ಸ್ಥಾನ | ೧೨ | | |
| ೧೩ | **ಹಣ್ಣಿನ ಬೆಳೆಗಳು** | | | |
| ೧ | **ಮಾವು** | | | |
| i | ವಿಸ್ತೀರ್ಣ (ಹೆ) | ೨,೨೩೯ | ೨,೦೯೫ | ೨,೧೪೭ |
| ii | ಉತ್ಪಾದನೆ (ಟನ್) | ೧೫,೬೭೩ | ೧೮,೧೯೮ | ೧೯,೩೨೩ |
| iii | ಇಳುವರಿ (ಟನ್/ ಹೆ) | ೦೭ | ೦೯ | ೦೯ |
| iv | ಮೌಲ್ಯ (ಲಕ್ಷ ರೂ.) | ೬೨೭ | ೫೫೦ | ೯೬೭ |
| ೨ | **ಬಾಳೆ** | | | |
| i | ವಿಸ್ತೀರ್ಣ (ಹೆ) | ೧,೭೦೯ | ೧,೪೭೮ | ೧,೫೩೯ |
| ii | ಉತ್ಪಾದನೆ (ಟನ್) | ೩೪,೮೨೫ | ೨೭,೪೮೫ | ೨೮,೭೧೦ |
| iii | ಇಳುವರಿ (ಟನ್/ ಹೆ) | ೨೦ | ೧೯ | ೧೯ |
| iv | ಮೌಲ್ಯ (ಲಕ್ಷ ರೂ.) | ೧,೭೪೧ | ೯೩೨ | ೧,೨೫೭ |
| ೧೪. | **ತೋಟದ ಬೆಳೆಗಳು** | | | |
| ೧. | **ತೆಂಗು** | | | |
| i | ವಿಸ್ತೀರ್ಣ (ಹೆ) | ೧೪,೮೪೪ | ೧೫,೪೧೫ | ೧೫,೫೦೪ |
| ii | ಉತ್ಪಾದನೆ (ಟನ್) | ೧,೬೩೨ | ೧,೬೬೮ | ೦,೭೦೬ |
| iii | ಇಳುವರಿ (ಟನ್/ ಹೆ) | – | – | – |
| iv | ಮೌಲ್ಯ (ಲಕ್ಷ ರೂ.) | ೪,೦೮೦ | ೫,೫೪೭ | ೫,೬೯೭ |
| ೨. | **ಅಡಿಕೆ** | | | |
| i | ವಿಸ್ತೀರ್ಣ (ಹೆ) | ೮,೪೧೯ | ೫,೧೪೯ | ೫,೧೧೯ |
| ii | ಉತ್ಪಾದನೆ (ಟನ್) | ೮,೪೧೯ | ೭,೭೨೧ | ೭,೬೭೯ |
| iii | ಇಳುವರಿ (ಟನ್ / ಹೆ) | ೦೧ | ೦೧ | ೦೨ |
| iv | ಮೌಲ್ಯ (ಲಕ್ಷ ರೂ.) | ೨,೮೬೨೦ | ೨,೪೪೪ | ೭,೦೫೨ |
| ೩. | **ಗೋಡಂಬಿ** | | | |
| i | ವಿಸ್ತೀರ್ಣ (ಹೆ) | ೨೦,೫೫೭ | ೨೨,೮೬೧ | ೨೪,೪೧೬ |
| ii | ಉತ್ಪಾದನೆ (ಟನ್) | ೪೧,೧೧೪ | ೨೭,೬೨೪ | ೨೪,೨೮೧ |
| iii | ಇಳುವರಿ (ಟನ್/ ಹೆ) | ೦೨ | ೦೧ | ೦೧ |
| iv | ಮೌಲ್ಯ (ಲಕ್ಷ ರೂ.) | ೯,೦೪೫ | ೬,೦೧೩ | ೪,೨೯೬ |

***ಆಧಾರ :*** *ಕರ್ನಾಟಕ ರಾಜ್ಯದ ತೋಟಗಾರಿಕೆ ಬೆಳೆಗಳ ಅಂಕಿ-ಅಂಶಗಳ ನೋಟ, ೨೦೦೦-೦೧, ೨೦೦೧-೦೨ ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್ ಬೆಂಗಳೂರು ೫೬೦ ೦೦೪*

## ಕೋಷ್ಟಕ ೪.೧೦ : ತಾಲೂಕುವಾರು ತೋಟಗಾರಿಕೆ ಬೆಳೆಗಳ ಅಂಕಿ–ಅಂಶಗಳು ೨೦೦೨–೦೩

| ಕ್ರ.ಸಂ. | ವಿವರ | ಕಾರ್ಕಳ | ಕುಂದಾಪುರ | ಉಡುಪಿ | ಒಟ್ಟು |
|---|---|---|---|---|---|
| I. | **ಹಣ್ಣಿನ ಬೆಳೆಗಳು** | | | | |
| i | ವಿಸ್ತೀರ್ಣ (ಹೆ) | ೧,೪೫೬ | ೨,೩೩೩ | ೨,೭೦೦ | ೬,೪೮೯ |
| ii | ಉತ್ಪಾದನೆ (ಟನ್) | ೨೦,೭೬೧ | ೪೧,೦೨೯ | ೪೫,೫೨೬ | ೧,೦೭,೩೧೬ |
| iii | ಇಳುವರಿ (ಟನ್ / ಹೆ) | ೧೪ | ೧೮ | ೧೭ | ೧೭ |
| iv | ಮೌಲ್ಯ (ಲಕ್ಷ ರೂ.) | ೬೦೧ | ೧,೫೬೮ | ೧,೬೧೪ | ೩,೭೮೩ |
| II. | **ತರಕಾರಿ ಬೆಳೆಗಳು** | | | | |
| i | ವಿಸ್ತೀರ್ಣ (ಹೆ) | ೧,೫೨೯ | ೩,೮೧೨ | ೧,೯೮೧ | ೭,೩೨೨ |
| ii | ಉತ್ಪಾದನೆ (ಟನ್) | ೧೮,೧೧೦ | ೪೪,೭೬೫ | ೨೧,೫೮೭ | ೮೪,೪೬೨ |
| iii | ಇಳುವರಿ (ಟನ್/ ಹೆ) | ೧೨ | ೧೨ | ೧೧ | ೧೨ |
| iv | ಮೌಲ್ಯ (ಲಕ್ಷ ರೂ.) | ೪೮೪ | ೧,೨೭೪ | ೫೬೪ | ೨,೩೨೨ |
| III. | **ಸಾಂಬಾರು ಬೆಳೆಗಳು** | | | | |
| i | ವಿಸ್ತೀರ್ಣ (ಹೆ) | ೩೮೨ | ೫೮೨ | ೯೩೭ | ೧,೯೦೧ |
| ii | ಉತ್ಪಾದನೆ (ಟನ್) | ೧,೯೮೪ | ೨,೪೩೯ | ೩,೩೨೦ | ೭,೭೪೨ |
| iii | ಇಳುವರಿ (ಟನ್ / ಹೆ) | ೦೫ | ೦೪ | ೦೪ | ೦೪ |
| iv | ಮೌಲ್ಯ (ಲಕ್ಷ ರೂ.) | ೪೫೪ | ೧,೩೯೬ | ೧,೨೩೮ | ೩,೦೮೭ |
| IV. | **ತೋಟದ ಬೆಳೆಗಳು** | | | | |
| i | ವಿಸ್ತೀರ್ಣ (ಹೆ) | ೧೩,೭೯೭ | ೧೭,೨೬೧ | ೧೪,೩೫೪ | ೪೫,೪೧೨ |
| ii | ಉತ್ಪಾದನೆ (ಟನ್) | ೧೦,೧೭೧ | ೧೧,೩೧೭ | ೧೧,೨೧೭ | ೩೨,೭೦೪ |
| iii | ಇಳುವರಿ (ಟನ್ / ಹೆ) | ೦೧ | ೦೧ | ೦೧ | ೦೧ |
| iv | ಮೌಲ್ಯ (ಲಕ್ಷ ರೂ.) | ೯,೩೧೪ | ೬,೯೪೪ | ೨,೯೧೦ | ೧೯,೧೬೮ |
| V. | **ವಾಣಿಜ್ಯ ಪುಷ್ಪಗಳು** | | | | |
| i | ವಿಸ್ತೀರ್ಣ (ಹೆ) | ೮೩ | ೧೪೪ | ೧೪೪ | ೩೭೧ |
| ii | ಉತ್ಪಾದನೆ (ಟನ್) | ೪೪೮ | ೬೩೨ | ೮೯೬ | ೧,೯೭೬ |
| iii | ಇಳುವರಿ (ಟನ್ / ಹೆ) | ೦೫ | ೦೪ | ೦೬ | ೦೫ |
| iv | ಮೌಲ್ಯ (ಲಕ್ಷ ರೂ.) | ೬೯೦ | ೫೩ | ೧೦೬ | ೮೪೯ |
| VI | **ಒಟ್ಟು ತೋಟಗಾರಿಕೆ ಬೆಳೆಗಳು** | | | | |
| i | ವಿಸ್ತೀರ್ಣ (ಹೆ) | ೧೭,೨೪೭ | ೨೪,೧೩೨ | ೨೦,೧೧೬ | ೬೧,೪೯೫ |
| ii | ಉತ್ಪಾದನೆ (ಟನ್) | ೫೧,೪೭೩ | ೧,೦೦,೧೮೧ | ೮೨,೫೪೬ | ೨,೩೪,೨೦೦ |
| iii | ಇಳುವರಿ (ಟನ್/ ಹೆ) | ೦೩ | ೦೪ | ೦೪ | ೦೪ |
| iv | ಮೌಲ್ಯ (ಲಕ್ಷ ರೂ.) | ೧೧,೫೪೩ | ೧೧,೨೩೪ | ೬,೪೩೨ | ೨೯,೨೦೯ |

**ಆಧಾರ:** *ಕರ್ನಾಟಕ ರಾಜ್ಯದ ತೋಟಗಾರಿಕೆ ಬೆಳೆಗಳ ಅಂಕಿ–ಅಂಶಗಳ ನೋಟ, ೨೦೦೨–೦೩, ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್ ಬೆಂಗಳೂರು ೫೬೦೦೦೪*

"ನೀವು ನಡೆಯುವ ಎರಡು ಅಥವಾ ಮೂರು ಹರದಾರಿಗಳ ಅಂತರದ ಸ್ಥಳಗಳಲ್ಲಿ ಮರಗಳ ತೋಪುಗಳು ಇವೆ. ನಗರ, ಪಟ್ಟಣ ಮತ್ತು ಗ್ರಾಮಗಳ ಹೊರಗಡೆ ಮಾವು ಹಲಸು, ಹುಣಸೆ ಹಾಗೂ ಇನ್ನಿತರ ದೊಡ್ಡ ವೃಕ್ಷಗಳ ತೋಪುಗಳಿವೆ. ವರ್ತಕರು ತಮ್ಮ ಸರಕುಗಳ ಸಹಿತ ಇಳಿದುಕೊಳ್ಳಲು ಇವು ಆಶ್ರಯತಾಣಗಳಾಗಿವೆ" ಎಂದು ಇಂತಹ ರಸ್ತೆಯೊಂದರಲ್ಲಿ ಓಡಾಡಿದ ಪ್ರವಾಸಿಗ ಡೊಮಿಂಗೊ ಪಾಯಿಸ್ ತಿಳಿಸಿದ್ದಾನೆ. ತೋಟಗಳಲ್ಲಿ ಅಡಿಕೆ, ತೆಂಗು ಮತ್ತು ವೀಳೆಯದೆಲೆಯನ್ನು ಬೆಳೆಯಲಾಗುತ್ತಿತ್ತು. ಶಾಸನಗಳು ಮತ್ತು ಸಾಹಿತ್ಯ ವಿಷಯಗಳು 'ಪೊಗವನ' ಅಥವಾ ಅಡಿಕೆ ತೋಟಗಳ ಬಗ್ಗೆ ತಿಳಿಸುತ್ತವೆ. "ತೆಂಗಿನಷ್ಟು ಹೆಚ್ಚು ಲಾಭದಾಯಕವಾದ ಹಾಗೂ ಅತ್ಯಂತ ಪರೋಪಕಾರಿಯಾದ ಮರ ಬೇರೊಂದಿಲ್ಲ" ಎಂದು ಇಟಲಿಯ ಪ್ರವಾಸಿಗ ಸೀಜರ್ ಫ್ರೆಡರಿಕ್ (೧೫೬೭) ಹೇಳಿದ್ದಾನೆ. ಬಾರ್ಕೂರು ಸೇರಿದಂತೆ ಪಶ್ಚಿಮ ಕರಾವಳಿ ಯುದ್ದಕ್ಕೂ ಕಬ್ಬಿನ ತೋಟಗಳಿದ್ದವೆಂದು ಇಬ್ನಬತೂತ ಹೇಳಿದ್ದಾನೆ.

ತರಕಾರಿಗಳನ್ನು ಕೈತೋಟ ಹಾಗೂ ಗದ್ದೆಗಳಲ್ಲಿ ಬೆಳೆಯಲಾಗುತ್ತಿತ್ತು. ಪಶ್ಚಿಮ ಕರಾವಳಿಯಲ್ಲಿ ಪ್ರತೀ ಮನೆಯಲ್ಲೂ ಕೈತೋಟಗಳಿದ್ದು, ತರಕಾರಿ ಬೆಳೆಯಲಾಗುತ್ತಿತ್ತೆಂದು ಇಬ್ನ್‌ಬತೂತ ಹೇಳಿದ್ದಾನೆ. ಕರಾವಳಿ ವಿಭಾಗದಲ್ಲಿ ಮುಖ್ಯವಾದ ಮಸಾಲೆ ಪದಾರ್ಥಗಳಾದ ಏಲಕ್ಕಿ ಮತ್ತು (ಕಾಳು) ಮೆಣಸು ಬೆಳೆಗಳನ್ನು ಅಧಿಕವಾಗಿ ಬೆಳೆಸುತ್ತಿದ್ದರು. ಮಲಬಾರಿಗಿಂತ ಕನ್ನಡ ಕರಾವಳಿಯ ಮೆಣಸು ಉತ್ಕೃಷ್ಟವಾದುದು ಎಂದು ಪೋರ್ಚುಗೀಸರು ತಿಳಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರ ಕಚೇರಿಯಿದೆ. ತೋಟಗಾರಿಕೆ ಬೆಳೆಗಳ ಉತ್ಪಾದನೆ ಹಾಗೂ ಸಂರಕ್ಷಣೆ ಬಗ್ಗೆ ತಾಲೂಕು ಮಟ್ಟದಲ್ಲಿ ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕಾಲಕಾಲಕ್ಕೆ ರೈತ ಸಮುದಾಯಕ್ಕೆ ತಾಂತ್ರಿಕ ಸಲಹೆ ನೀಡುತ್ತಾರೆ. ಜಿಲ್ಲೆಯ ವಿವಿಧ ತಾಲೂಕುಗಳ ಭೂ ಹವಾಗುಣಗಳಿಗೆ ಸೂಕ್ತವಾದ ತೋಟಗಾರಿಕೆ ಬೆಳೆಗಳಾದ ಹಣ್ಣಿನ ತೋಟದ ಸಾಂಬಾರು, ತರಕಾರಿಗಳ ಸಸ್ಯ ಹಾಗೂ ಬೀಜಗಳನ್ನು ಅವಶ್ಯಕತೆಗಳಿಗೆ ಅನುಗುಣವಾಗಿ ಉತ್ಪಾದಿಸಿ ರೈತರಿಗೆ ವಿತರಿಸಲಾಗುತ್ತದೆ. ತೋಟಗಾರಿಕೆ ಪ್ರದರ್ಶನ, ಕ್ಷೇತ್ರೋತ್ಸವ ಮತ್ತು ವಿಚಾರ ಸಂಕಿರಣಗಳನ್ನು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ರೈತರಿಗೆ ಅವಶ್ಯಕವಾದ ಉತ್ತಮ ಗುಣಮಟ್ಟದ ಸಸಿ ಬೀಜ, ಗೊಬ್ಬರ ಮತ್ತು ಸಸ್ಯ ಸಂರಕ್ಷಣಾ ಔಷಧಿಗಳನ್ನು ತಾಲೂಕು ಕಚೇರಿಗಳ ಮುಖಾಂತರ ವಿತರಿಸಲಾಗುವುದು. ತೋಟಗಾರಿಕೆ ಕ್ಷೇತ್ರಗಳು ನರ್ಸರಿಗಳು ಮತ್ತು ಉದ್ಯಾನವನಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಕೆಳಕಂಡಂತಿವೆ.

**ರಾಜ್ಯ ವಲಯ ಯೋಜನೆಗಳು :** ೧) ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ, ೨) ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ಸಮಗ್ರ ಕೀಟ ನಿರ್ವಹಣೆ, ೩) ಸಮಗ್ರ ತರಕಾರಿ ಬೆಳೆಗಳ ಅಭಿವೃದ್ಧಿ ಯೋಜನೆ, ೪) ಕೊಕೊ ಅಭಿವೃದ್ಧಿ ಯೋಜನೆ, ೫) ಸಮಗ್ರ ಗೇರು ಅಭಿವೃದ್ಧಿ ಯೋಜನೆ, ೬) ಸಮಗ್ರ ಕೀಟ ಮತ್ತು ರೋಗಗಳ ನಿಯಂತ್ರಣ ಯೋಜನೆ, ೭) ವಿಸ್ತರಣೆ ಮತ್ತು ತರಬೇತಿ ಮತ್ತು ೮) ತೋಟಗಾರಿಕೆ ಉದ್ಯಾನವನಗಳ ಯೋಜನೆ.

**ಕೇಂದ್ರ ಪುರಸ್ಕೃತ ಯೋಜನೆಗಳು** ೧) ನೂತನ ವಿಸ್ತೃತ ತರಕಾರಿ ಅಭಿವೃದ್ಧಿ ಯೋಜನೆ ೨) ನೂತನ ವಿಸ್ತೃತ ಮಾದರಿ ಕೋಕೋ ಅಭಿವೃದ್ಧಿ ಯೋಜನೆ, ೩) ನೂತನ ವಿಸ್ತೃತ ಮಾದರಿ ಔಷಧಿ ಮತ್ತು ಡೈ ಗಿಡಗಳ ಅಭಿವೃದ್ಧಿ ಯೋಜನೆ, ೪) ನೂತನ ವಿಸ್ತೃತ ಮಾದರಿ ಕ್ಷೇತ್ರ ಮತ್ತು ನರ್ಸರಿ ಅಭಿವೃದ್ಧಿ ಯೋಜನೆ, ೫) ನೂತನ ವಿಸ್ತೃತ ಮಾದರಿ ಸಮಗ್ರ ಸಾಂಬಾರು ಬೆಳೆ ಅಭಿವೃದ್ಧಿ ಯೋಜನೆ, ೬) ನೂತನ ವಿಸ್ತೃತ ಮಾದರಿ ಸಮಗ್ರ ಗೇರು ಅಭಿವೃದ್ಧಿ ಯೋಜನೆ.

**ಜಿಲ್ಲಾ ಪಂಚಾಯತ್ ಯೋಜನೆಗಳು** – ೧) ಹನಿ ನೀರಾವರಿ ಕೇಂದ್ರ ವಲಯ ಯೋಜನೆ, ೨) ಪ್ರಚಾರ ಮತ್ತು ಸಾಹಿತ್ಯ ಯೋಜನೆ, ೩) ತೋಟಗಾರಿಕಾ ಕ್ಷೇತ್ರಗಳ ನಿರ್ವಹಣೆ, ೪) ತೋಟಗಾರಿಕೆ ಕಟ್ಟಡಗಳು, ೫) ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ.

ಜಿಲ್ಲೆಯ ಹವಾಗುಣ ಮತ್ತು ಮಣ್ಣು ವಿವಿಧ ಜಾತಿಯ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಅತ್ಯುತ್ತಮವಾಗಿದೆ. ತೋಟಗಾರಿಕೆ ಬೆಳೆಗಳು ಜಿಲ್ಲೆಯಲ್ಲಿ ರೈತರ ಮುಖ್ಯ ಆರ್ಥಿಕ ಮೂಲಗಳಾಗಿರುತ್ತವೆ. ಬಹಳ ಹಿಂದಿನಿಂದಲೂ ಜಿಲ್ಲೆಯಲ್ಲಿ ತೋಟದ ಬೆಳೆಗಳಾದ ತೆಂಗು, ಅಡಿಕೆ, ಗೋಡಂಬಿ, ಸಾಂಬಾರು ಬೆಳೆಗಳಾದ ಕರಿಮೆಣಸು, ಶುಂಠಿ, ಅರಿಶಿನ, ಹಣ್ಣಿನ ಬೆಳೆಗಳಾದ ಮಾವು, ಚಿಕ್ಕು,ಬಾಳೆ, ತರಕಾರಿ ಬೆಳೆಗಳನ್ನು ಬೆಳೆಸುತ್ತಿದ್ದಾರೆ. ಪ್ರಸ್ತುತ ಜಿಲ್ಲೆಯ ಅಂದಾಜು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ೬೧,೪೯೫ ಹೆಕ್ಟೇರಿನಲ್ಲಿ ತೋಟದ ಮತ್ತು ಸಾಂಬಾರು ಬೆಳೆಗಳ ವಿಸ್ತೀರ್ಣ ೪೭,೩೧೩ ಹೆ., ಹಣ್ಣಿನ ಬೆಳೆಗಳು ೬,೪೮೯ ಹೆ., ತರಕಾರಿ ಬೆಳೆಗಳು ೭,೩೨೨ ಹೆ. ಮತ್ತು ಹೂವಿನ ಬೆಳೆಗಳು ೩೭೧ ಹೆ. ಪ್ರದೇಶದಲ್ಲಿ ಇರುತ್ತವೆ. ಜಿಲ್ಲೆಯ ಬ್ರಹ್ಮಾವರ ಕೃಷಿ ಸಂಶೋಧನಾ ಕೇಂದ್ರವು ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಅಗತ್ಯ ಸಂಶೋಧನೆ ಮತ್ತು ಕಾರ್ಯಕ್ರಮ ರೂಪಿಸುತ್ತಿದೆ. ಜಿಲ್ಲೆಯ ತೋಟಗಾರಿಕೆ ಬೆಳೆಯ ಅಂಕಿಅಂಶಗಳನ್ನು ಹಿಂದಿನ ಕೋಷ್ಟಕ ೪.೯ ಮತ್ತು ೪.೧೦ ರಲ್ಲಿ ನೀಡಲಾಗಿದೆ.

## ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆ

ಜಾನುವಾರುಗಳಿಗೆ ಚಿಕಿತ್ಸೆಯನ್ನು ನೀಡುವುದು, ಸಾಂಕ್ರಾಮಿಕ ರೋಗ ಸೋಂಕದಂತೆ ಚುಚ್ಚುಮದ್ದು ನೀಡಿ ಮುಂಜಾಗ್ರತಾ ಕ್ರಮ ವಹಿಸುವುದು, ಸ್ಥಳೀಯ ಮತ್ತು ಮಲೆನಾಡಿನ ಗಿಡ್ಡ ತಳಿಯ ಬದಲು ಹೆಚ್ಚು ಹಾಲು ಕೊಡುವ ಉತ್ತಮ ಜಾತಿಯ ಮಿಶ್ರ ತಳಿಯ ಜಾನುವಾರುಗಳನ್ನು ಅಭಿವೃದ್ಧಿ ಪಡಿಸಲು ಉತ್ತಮ ತಳಿಯ ವೀರ್ಯ ಉಪಯೋಗಿಸಿ ಕೃತಕ ಗರ್ಭಧಾರಣೆ ಕೈಗೊಳ್ಳುವುದು, ಪ್ರತೀ ಹೈನುಪ್ರಾಣಿಯಿಂದ ದೊರೆಯುತ್ತಿರುವ ಹಾಲಿನ ಪ್ರಮಾಣವನ್ನು ಹೆಚ್ಚಿಸುವುದು, ಜಾನುವಾರುಗಳಿಗೆ ಬೇಕಾದ ಹಸಿರು ಮೇವು ಬೆಳೆಸಲು ರೈತರಿಗೆ ಪ್ರೋತ್ಸಾಹ ನೀಡಿ ತಾಂತ್ರಿಕ ಸಲಹೆಗಳನ್ನು ನೀಡುವುದು, ಮಿಶ್ರ ತಳಿ ಹಂದಿ ಸಾಕಾಣಿಕೆ, ಗಿರಿರಾಜ ಕೋಳಿ ಸರಬರಾಜು, ಪ್ರತೀ ಕೋಳಿಯ ಮೊಟ್ಟೆ ಒದಗಿಸುವಿಕೆಯ ಪ್ರಮಾಣವನ್ನು ಹೆಚ್ಚಿಸುವುದು, ವಿವಿಧ ಯೋಜನೆ ಕಾರ್ಯಕ್ರಮಗಳನ್ವಯ ಫಲಾನುಭವಿಗಳಿಗೆ ಸಹಾಯಧನ ಕೊಟ್ಟು ತಾಂತ್ರಿಕ ವಿಷಯಗಳಲ್ಲಿ ಮಾರ್ಗದರ್ಶನ ನೀಡಿ ಜಾನುವಾರು ಸಾಕಾಣಿಕೆಗೆ ಪ್ರೋತ್ಸಾಹ ನೀಡುವುದು, ಇತ್ಯಾದಿಗಳು ಇಲಾಖೆಯ ಮುಖ್ಯ ಉದ್ದೇಶಗಳಾಗಿವೆ. ದನಕರುಗಳ ಅಭಿವೃದ್ಧಿಯು ವ್ಯವಸಾಯದ ಅವಿಚ್ಛನ್ನ ಭಾಗವಾಗಿದೆ. ವ್ಯವಸಾಯದ ಜೊತೆಗೆ ಪಶುಸಂಗೋಪನೆಯನ್ನು ಒಂದುಗೂಡಿಸುವುದರ ಅನುಕೂಲವೆಂದರೆ ವ್ಯವಸಾಯದ ಉಪ ಉತ್ಪತ್ತಿಗಳನ್ನು ಉತ್ತಮವಾಗಿ ಬಳಸಿಕೊಳ್ಳುವುದು, ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳುವುದು ಮತ್ತು ಇದರಿಂದ ಗ್ರಾಮೀಣ ಜನತೆಯ ಆದಾಯ ಹೆಚ್ಚಿಸುವುದಾಗಿದೆ.

ಪಶುವೈದ್ಯಕೀಯ ಆಸ್ಪತ್ರೆ, ಪಶುಚಿಕಿತ್ಸಾಲಯ ಮತ್ತು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಲ್ಲಿ ಶುಶ್ರೂಷೆ ನೀಡಲಾದ ವಿವರ:– ೧. ಕೃತಕ ಗರ್ಭಧಾರಣೆಗೆ ಒಳಪಟ್ಟ ರಾಸುಗಳ ಸಂಖ್ಯೆ ೪೮,೦೬೩; ೨. ಕೃತಕ ಗರ್ಭಧಾರಣೆಯಿಂದ ಸಂದಾಯವಾದ ಮೊತ್ತ ೨,೬೫,೭೭೦; ೩. ಗರ್ಭತಪಾಸಣೆಗೆ ಒಳಪಟ್ಟ ರಾಸುಗಳ ಸಂಖ್ಯೆ ೩೧,೨೭೪; ೪. ಕಾಲು–ಬಾಯಿ ಜ್ವರದ ಲಸಿಕೆ ಹಾಕಿದ್ದು ೩೮,೯೯೫; ಕಾಲು–ಬಾಯಿ ಜ್ವರದ ಲಸಿಕೆಯಿಂದ ಸಂದಾಯವಾದ ಮೊತ್ತ ೧,೧೫,೫೮೪; ಕೊಕ್ಕತೆ ರೋಗ ಲಸಿಕೆ ಹಾಕಿದ್ದು ೪೩,೫೮೧; ಹಳ್ಳಿಗಳಲ್ಲಿ ದೊಡ್ಡರೋಗ ಪತ್ತೆ ೨,೪೫೧; ಹೆದ್ದಾರಿಯಲ್ಲಿ ಬರುವ ಹಳ್ಳಿಗಳಲ್ಲಿ ದೊಡ್ಡರೋಗ ಪತ್ತೆ ೧,೦೬೨; ದೈನಂದಿನ ಪುಸ್ತಕದಲ್ಲಿ ದೊಡ್ಡರೋಗ ಪತ್ತೆ ೧೮೧; ಕಿರುಪೊಟ್ಟಣಗಳ ವಿತರಣೆ ೨,೬೫೦; ಮೇವು ಅಭಿವೃದ್ಧಿಪಡಿಸಿದ ಪ್ರದೇಶ ಹೆಕ್ಟೇರ್ ೪೦೭.೬೪; ವಿಸ್ತರಣಾ ಪ್ರವಚನ ನೀಡುವುದು ೯೯; ತಾತ್ಕಾಲಿಕ ಬಂಜೆತನ ಶಿಬಿರಗಳ ಆಯೋಜನೆ ೩೬; ಮಿಶ್ರತಳಿ ಹಸು, ಕರು ಹಾಗೂ ಕುಕ್ಕುಟ ಪ್ರದರ್ಶನ ೬; ಅಧೀನ ಸಂಸ್ಥೆಗಳ ತಾಂತ್ರಿಕ ಪರಿಶೋಧನೆ ೬೧.

**ಕುಕ್ಕುಟ ಅಭಿವೃದ್ಧಿ :** ಜಿಲ್ಲೆಯಲ್ಲಿ ಕುಂದಾಪುರದ ಪಶುವೈದ್ಯಕೀಯ ಆಸ್ಪತ್ರೆಯ ಆವರಣದಲ್ಲಿ ಒಂದು ಕುಕ್ಕುಟ ವಿಸ್ತರಣಾ ಕೇಂದ್ರ ಹಾಗೂ ಉಡುಪಿ, ಕಾರ್ಕಳ ಮತ್ತು ಹೆಬ್ರಿಗಳಲ್ಲಿನ ಪಶುವೈದ್ಯಕೀಯ ಆಸ್ಪತ್ರೆಯ

**ಕೋಷ್ಟಕ – ೪.೧೧ ಜಾನುವಾರು ಗಣತಿ ೨೦೦೨ – ಉಡುಪಿ ಜಿಲ್ಲೆ**

| ಕ್ರ.ಸಂ. | ವಿವರ | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು |
|---|---|---|---|---|---|
| ೧ | ದನಕರುಗಳು | | | | |
| | i ಸ್ಥಳೀಯ | ೧,೦೯,೪೨೪ | ೬೭,೦೬೧ | ೭೦,೩೭೭ | ೨,೪೬,೮೬೨ |
| | ii ವಿದೇಶಿ ತಳಿ | ೦ | ೦೬ | ೦ | ೦೬ |
| | iii ಮಿಶ್ರ ತಳಿ | ೨೬,೮೪೩ | ೧೫,೪೬೦ | ೪೯,೩೩೨ | ೯೧,೬೩೫ |
| | iv ಒಟ್ಟು | ೧,೩೬,೨೬೭ | ೮೨,೫೨೭ | ೧,೧೯,೭೦೯ | ೩,೩೮,೫೦೩ |
| ೨ | ಎಮ್ಮೆಗಳು | ೨೨,೫೯೬ | ೧೨,೮೪೭ | ೧೩,೬೯೪ | ೪೯,೧೩೭ |
| ೩ | ಕುರಿಗಳು | | | | |
| | i ಸ್ಥಳೀಯ | ೦೪ | ೦೧ | ೦೫ | ೧೦ |
| | ii ವಿದೇಶಿ ತಳಿ | ೦ | ೦ | ೦ | ೦ |
| | iii ಮಿಶ್ರ ತಳಿ | ೦ | ೦ | ೦ | ೦ |
| | iv ಒಟ್ಟು | ೦೪ | ೦೧ | ೦೫ | ೧೦ |
| ೪ | **ಮೇಕೆಗಳು** | ೪೫೦ | ೨೮೦ | ೧,೩೧೯ | ೨,೦೪೯ |
| ೫ | **ಹಂದಿಗಳು** | | | | |
| | i ಸ್ಥಳೀಯ | ೨೯೯ | ೧೮೨ | ೬೦೦ | ೧,೦೮೧ |
| | ii ವಿದೇಶಿ ತಳಿ | ೦ | ೦ | ೦ | ೦ |
| | iii ಮಿಶ್ರ ತಳಿ | ೨೪ | ೧೦ | ೦ | ೩೪ |
| | iv ಒಟ್ಟು | ೩೨೩ | ೧೯೨ | ೬೦೦ | ೧,೧೧೫ |
| ೬ | **ಮೊಲಗಳು** | ೧೩೯ | ೦೨ | ೧೯ | ೧೬೦ |
| ೭ | **ನಾಯಿಗಳು** | ೩೭,೫೧೫ | ೨೯,೦೭೯ | ೫೪,೧೪೨ | ೧,೨೦,೭೩೬ |
| ೮ | **ಇತರೆ ಜಾನುವಾರುಗಳು** | ೧೦೬ | ೦೨ | ೨೧ | ೧೨೯ |
| ೯ | **ಒಟ್ಟು ಜಾನುವಾರುಗಳು** | ೧,೯೭,೪೦೦ | ೧,೨೪,೯೩೦ | ೧,೮೯,೫೦೯ | ೫,೧೧,೮೩೯ |
| ೧೦ | **ಕೋಳಿಗಳು** | ೨,೮೮,೮೧೯ | ೧,೧೬,೭೫೩ | ೩,೪೩,೧೨೭ | ೭,೪೮,೬೯೯ |

ಆವರಣಗಳಲ್ಲಿ ತಲಾ ಒಂದು ಗಿರಿರಾಜ ಕೋಳಿ ಸಾಕಾಣಿಕೆ ಕೇಂದ್ರಗಳಿವೆ. ೨೦೦೪–೦೫ನೇ ಸಾಲಿನಲ್ಲಿ ಕೆಳಕಂಡಂತೆ ಒಂದು ದಿನದ ಗಿರಿರಾಜ ಕೋಳಿ ಮರಿಗಳನ್ನು ಮಳವಳ್ಳಿಯ ಪ್ರಾದೇಶಿಕ ಕುಕ್ಕುಟ ಕೇಂದ್ರದಿಂದ ಪಡೆದು ಎಂಟು ವಾರಗಳವರೆಗೆ ಸಾಕಾಣಿಕೆ ಮಾಡಿ ಆಸಕ್ತ ರೈತರಿಗೆ ಮತ್ತು ಸಾಮಾಜಿಕ ಆರ್ಥಿಕ ಕಾರ್ಯಕ್ರಮದ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.

| ಕ್ರಸಂ. | ತಾಲೂಕು | ಸಾಧನೆ | |
|---|---|---|---|
| | | ಆರ್ಥಿಕ | ಭೌತಿಕ |
| ೧ | ಉಡುಪಿ | ೩೬,೨೩೬ | ೮೦೦ |
| ೨ | ಕಾರ್ಕಳ | ೪೪,೧೨೨ | ೯೦೦ |
| ೩ | ಹೆಬ್ರಿ | ೧೭,೪೮೯ | ೨೦೦ |
| ೪ | ಕುಂದಾಪುರ | ೪೫,೩೪೨ | ೧,೪೦೦ |
| | ಒಟ್ಟು | ೧,೪೩,೧೮೯ | ೩,೩೦೦ |

**ಮೇವು ಅಭಿವೃದ್ಧಿ :** ಮೇವು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಹೈನುಗಾರರಿಗೆ ತಮ್ಮ ಜಮೀನಿನಲ್ಲಿ ಮೇವು ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸುವುದೊಂದಿಗೆ ವಿವಿಧ ಮೂಲಗಳಿಂದ ಮೇವು ಬೆಳೆ ಬಿತ್ತನೆ ಬೀಜಗಳನ್ನು ಉಚಿತವಾಗಿ ರೈತರಿಗೆ ನೀಡಲಾಗಿದೆ. ಜಿಲ್ಲೆಯಲ್ಲಿ ೪೦೭.೬೪ ಹೆಕ್ಟೇರ್ ಜಮೀನಿನಲ್ಲಿ ಮೇವು ಅಭಿವೃದ್ಧಿಪಡಿಸಿ ಪ್ರಗತಿ ಸಾಧಿಸಲಾಗಿದೆ. ಈ ದಿಸೆಯಲ್ಲಿ ವಿವಿಧ ಫಲಾನುಭವಿಗಳಿಗೆ ೨,೭೫೦ ಮಿನಿಕಿಟ್‌ಗಳನ್ನು ವಿತರಣೆ ಮಾಡಿ ಸುಮಾರು ೧೬,೯೫೦ ಟನ್ ಮೇವು ಉತ್ಪಾದನೆ ಮಾಡಲಾಗಿದೆ.

**ಗೊಡ್ಡುರಾಸು ಶಿಬಿರ :** ೨೦೦೪-೦೫ನೇ ಸಾಲಿನಲ್ಲಿ ಜಿಲ್ಲಾಯಾದ್ಯಂತ ೨೧ ಗೊಡ್ಡುರಾಸು ಶಿಬಿರಗಳನ್ನು ಏರ್ಪಡಿಸಿ ಬಂಜೆ ಜಾನುವಾರುಗಳಿಗೆ ಶುಶ್ರೂಷೆ ಮಾಡಲಾಗಿದೆ. ಸದರಿ ಶಿಬಿರಗಳನ್ನು ಏರ್ಪಡಿಸಲು ತಾಲೂಕು ಪಂಜಾಯಿತಿ ವಂಟನದಿಂದ ರೂ. ೧.೦೦ಲಕ್ಷ ವೆಚ್ಚದಲ್ಲಿ ಔಷಧಿ, ರಾಸಾಯನಿಕಗಳನ್ನು ಖರೀದಿಸಲಾಗಿದೆ. ಇದಲ್ಲದೆ ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ ವತಿಯಿಂದ ರೂ. ೧.೫೦ ಲಕ್ಷ ವೆಚ್ಚದಲ್ಲಿ ಔಷಧಿ, ರಾಸಾಯನಿಕಗಳು ಸರಬರಾಜಾಗಿದ್ದು, ಇದರಲ್ಲಿ ೧೫ ಗೊಡ್ಡುರಾಸು ಶಿಬಿರಗಳನ್ನು ಏರ್ಪಡಿಸಲಾಯಿತು. ಈ ೧೫ ಚಿಕಿತ್ಸಾ ಶಿಬಿರಗಳೊಂದಿಗೆ ಹೈನುಗಾರರಿಗೆ ಆಧುನಿಕ ಹೈನುಗಾರಿಕೆ ಬಗೆಗೆ ಮಾಹಿತಿ ಶಿಬಿರಗಳನ್ನು ಏರ್ಪಡಿಸಲಾಗಿತ್ತು.

**ದ್ರವಸಾರಜನಕ ಮತ್ತು ಕೃತಕ ಗರ್ಭಧಾರಣ ಸಾಮಗ್ರಿ ಸರಬರಾಜು :** ೨೦೦೪-೦೫ನೇ ಸಾಲಿನಲ್ಲಿ ಪಶುವೈದ್ಯಕೀಯ ಸಂಸ್ಥೆಗಳಿಗೆ ೨೬,೮೧೧ ಲಿ. ದ್ರವಸಾರಜನಕವನ್ನು ಹಾಸನ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ. ಹಾಸನದಿಂದ ಖರೀದಿಸಿ ವಿತರಿಸಲಾಗಿದೆ. ದ್ರವಸಾರಜನಕ ಖರೀದಿಗೆ ಬಳಸಿ ಈ ಲೆಕ್ಕಶೀರ್ಷಿಕೆಯಲ್ಲಿ ಉಳಿದಿದ್ದ ಅನುದಾನದಿಂದ ಕೃತಕ ಗರ್ಭಧಾರಣ ಸಾಮಾಗ್ರಿಗಳನ್ನು ಖರೀದಿಸಿ ಜಿಲ್ಲೆಯ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಿಗೆ ವಿತರಿಸಲಾಗಿದೆ. ಇದರಿಂದಾಗಿ ಜಿಲ್ಲೆಯ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣಾ ಕಾರ್ಯಕ್ರಮಕ್ಕೆ ಏಕರೂಪತೆ ಒದಗಿಸಿದಂತಾಗಿದೆ.

**ಮುಧೋಳ್ ಶ್ವಾನಗಳ ಸಂರಕ್ಷಣೆ ಮತ್ತು ತಳಿ ಅಭಿವೃದ್ಧಿ :** ರಾಜ್ಯದ ಪ್ರತಿಷ್ಠಿತ ಶ್ವಾನ ತಳಿ ಮುಧೋಳ್ ಶ್ವಾನಗಳ ಸಂರಕ್ಷಣ ಮತ್ತು ಅಭಿವೃದ್ಧಿ ತಾಲೂಕು ಕಾಪು ಪಶುವೈದ್ಯಕೀಯ ಆಸ್ಪತ್ರೆಯಲ್ಲಿದ್ದು, ಇಲ್ಲಿ ಐದು ಮಾತೃ ನಾಯಿಗಳನ್ನು ಪಾಲಿಸಲಾಗುತ್ತಿದೆ. ೨೦೦೪-೦೫ನೇ ಸಾಲಿನಲ್ಲಿ ರೂ. ೯೧,೩೭೯.೦೦ಗಳ ವೆಚ್ಚ ಮಾತೃ ನಾಯಿಗಳ ಪಾಲನೆ ಮಾಡಿ ಪಡೆದ ನಾಯಿಮರಿಗಳ ಮಾರಾಟದಿಂದ ರೂ. ೬೦,೦೦೦.೦೦ ಬಂದಿರುತ್ತದೆ.

**ರಾಷ್ಟ್ರೀಯ ದೊಡ್ಡ ರೋಗ ನಿವಾರಣಾ ಯೋಜನೆ :** ದೊಡ್ಡ ರೋಗವು ಜಾನುವಾರುಗಳ ಒಂದು ಮಾರಕ ರೋಗವಾಗಿದ್ದು, ನಿರಂತರ ಮುಂಜಾಗ್ರತಾ ಲಸಿಕಾ ಕಾರ್ಯಕ್ರಮದಿಂದ ರಾಜ್ಯವು ದೊಡ್ಡ ರೋಗದಿಂದ ಮುಕ್ತಗೊಂಡಿದೆ. ಜಿಲ್ಲೆಯ ೨,೪೫೧ ಹಳ್ಳಿಗಳ ಪತ್ತೆ ವರದಿಯಂತೆ ಈ ಜಿಲ್ಲೆಯಲ್ಲಿ ದೊಡ್ಡರೋಗದ ಯಾವ ಕುರುಹು ಇಲ್ಲದಿರುವುದು ದೃಢಪಟ್ಟಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಒಂದು ಕಿ.ಮೀ.

ಅಕ್ಕಪಕ್ಕದ ೯೩ ಹಳ್ಳಿಗಳ ಪ್ರತೀ ಮಾಹೆಯ ಪತ್ತೆ ವರದಿಯಂತೆ ಈ ಜಿಲ್ಲೆಯಲ್ಲಿ ದೊಡ್ಡರೋಗದ ಯಾವ ಕುರುಹು ಇಲ್ಲದಿರುವುದು ದೃಢಪಟ್ಟಿದೆ. ಜಿಲ್ಲೆಯ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕಾಪಾಡಲಾಗಿರುವ ದೈನಂದಿನ ಪುಸ್ತಕಗಳಲ್ಲಿ ವರ್ಷದ ೧೨ ತಿಂಗಳುಗಳಲ್ಲಿ ಮಾದರಿಯ ಮೇರೆಗೆ ೧೮೧ ಪುಸ್ತಕಗಳನ್ನು ದೊಡ್ಡರೋಗದ ಲಕ್ಷಣಗಳಿಗಾಗಿ ಪರಿಶೀಲಿಸಿದಾಗ ದೊಡ್ಡರೋಗದ ಯಾವ ಲಕ್ಷಣಗಳು ಕಂಡು ಬಂದಿರುವುದಿಲ್ಲ.

## ಮೀನುಗಾರಿಕೆ

ಪುರಾತನ ಕಾಲದಿಂದಲೂ ರಾಜ್ಯವು ಮೀನುಗಾರಿಕೆಯನ್ನು ನಡೆಸುತ್ತಾ ಬಂದಿದೆಯೆಂದು ಬ್ರಹ್ಮಗಿರಿಯ ಭೂ ಶೋಧನೆಯಲ್ಲಿ ಕಂಡು ಬಂದ ತಾಮ್ರದ ಗಾಳದಿಂದ ಊಹಿಸಬಹುದು. ಬಸವೇಶ್ವರರ ಸಮಕಾಲೀನನಾದ ಗಾಳದ ಕಣ್ಣಪ್ಪನೆಂಬ ವಚನಕಾರನು ಇದ್ದನೆಂದು ತಿಳಿದುಬಂದಿದೆ. ಬೆಸ್ತರು, ಮೊಗವೀರರು, ಖಾರ್ವಿಗಳು ಮೊದಲಾದ ವರ್ಗದವರು ರಾಜ್ಯದ ಪರಂಪರಾಗ ಮೀನುಗಾರರಾಗಿದ್ದರೆ. ಒಂದು ಕ್ರೀಡೆಯಾಗಿ ಮೀನು ಹಿಡಿಯುವುದನ್ನು ರಾಜಮನೆತನಗಳು ನಡೆಸುತ್ತಿದ್ದರೆಂದು 'ಮಾನಸೋಲ್ಲಾಸ'ದಲ್ಲಿ ಹೇಳಿದೆ. ರಾಜನಾದ ಅದರ ಲೇಖಕ ತಿಳಿಸುವಂತೆ ಬಿಲ್ಲಿನ ದಾರಕ್ಕೆ ಉಪಯೋಗಿಸುವಂತಹ ಮುರ್ವ ಎಂಬ ನಾರಿನಿಂದ ಬಲೆಗಳನ್ನು ತಯಾರಿಸಲಾಗುತ್ತಿದ್ದರೆಂದು ಹೇಳಲಾಗಿದೆಯಲ್ಲದೆ ವಿವಿಧ ಬಗೆಯ ಮೀನಿನ ಗಾಳಗಳನ್ನು ಅದರಲ್ಲಿ ಬಣ್ಣಿಸಿದೆ. ಮೀನಿನ ಗಾಳದ ಕೋಲನ್ನು 'ಮಾಡ' ಎಂಬ ಹೆಸರಿನ ಮರದಿಂದಲೂ, ಬಿದಿರಿನಿಂದಲೂ ತಯಾರಿಸುತ್ತಿದ್ದುದು ದಾಖಲಾಗಿದೆ. ಡಾ. ಜಿ. ಆರ್. ಕುಪ್ಪಸ್ವಾಮಿಯವರು ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವನ್ನು ಅಧ್ಯಯನ ಮಾಡಿ ಮೀನುಗಾರಿಕೆಗೆ ಉಪಯೋಗಿಸುತ್ತಿದ್ದ ವಿವಿಧ ಬಲೆಗಳಾದ ತಡಿಕೆ, ವಲೆ ಅಥವಾ ತಟ್ಟಿವಲೆ (ಬುಟ್ಟಿಯ ಬಲೆ), ಹಾಸುವಲೆ, ಬೀಸುವಲೆ, ಬಳ್ಳಿವಲೆ, ತೊಡಕುವಲೆ, ಕಣ್ಣಿವಲೆ ಮತ್ತು ಬೇರೆ ಪ್ರಕಾರದ ಬಲೆಗಳಾದ ಕೊಡತಿವಲೆ, ಕೋಡುವಲೆ, ತಳ್ಳಿವಲೆ, ಬಳ್ಳಿವರೆ, ಜಾರುವಲೆ, ತೋರುವಲೆ, ತೊಟ್ಟಿವಲೆ, ಕಾಲುವಲೆ, ಸಿಡಿವಲೆ ಮತ್ತು ಗೊಟವಲೆ ಇದನ್ನೆಲ್ಲಾ ಪಟ್ಟಿ ಮಾಡಿದ್ದಾರೆ. ರಾಘವಾಂಕನು ಬೆಸ್ತರ ಜಾತಿಗಳಲ್ಲಿ ಜಲಗಾರ ಬೆಸ್ತ ಮತ್ತು ಮೀನುಗಾರ ಎಂಬ ಎರಡು ವಿಭಾಗಗಳನ್ನು ವರ್ಣಿಸಿದ್ದಾನೆ.

ರಾಘವಾಂಕ ಮತ್ತು ಸೋಮೇಶ್ವರ ಇವರಿಬ್ಬರೂ ಸಮುದ್ರ, ನದಿ, ಕೊಲ್ಲಿ, ಹೊಂಡ, ಸರೋವರಗಳಲ್ಲಿ ದೊರೆಯಬಹುದಾದ ವಿವಿಧ ಬಗೆಯ ಮೀನುಗಳನ್ನು ಮತ್ತು ಸಮುದ್ರ ಮತ್ತು ನದಿ ಇವೆರಡರಲ್ಲಿ ಜೀವಿಸುವ ಮೀನುಗಳನ್ನು ವಿವರಿಸಿದ್ದಾರೆ. ರಾಘವಾಂಕನು ಕೆಮ್ಮೀನು, ಬಂಗಡೆ, ಹೆಮ್ಮುಲುಗು, ಮಲುಗು, ಜಲಬಲೆ ಅಥವಾ ಹಾರುವ ಮೀನು, ಕುರಿದಲಗ, ಮಳಲಿ, ಕಾಗೆಂಡೆ, ಬಿಳಿಚ, ಕುಳಿಚು, ಬೊಂಪು, ಇಳ್ಳಿಯಂಬು, ನಾಗಲು ಹಾಗೂ ಇನ್ನು ಇತರ ಜಾತಿಯ ಮೀನುಗಳನ್ನು ವಿವರಿಸಿದ್ದಾನೆ. ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಮೀನುಗಳಿಂದ ತಯಾರಿಸಲ್ಪಡಬಹುದಾದ ಬೇರೆ ಬೇರೆ ಖಾದ್ಯಗಳ ವಿವರವಿದೆ. ಅಲ್ಲದೆ, ಮೀನನ್ನು ಆಹಾರ ಮೂಲವಾಗಿಯೂ, ಸಸಿಗಳಿಗೆ ಉಪಯೋಗಿಸುವ ಗೊಬ್ಬರ ಮೂಲವಾಗಿಯೂ ಬಳಸುತ್ತಿದ್ದ ಬಗ್ಗೆ ಹೇಳಿದೆ.

ರಾಜ್ಯದ ೨೭ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮಾತ್ರ ಕಡಲ ತೀರವನ್ನು ಹೊಂದಿವೆ. ಒಟ್ಟು ೩೦೦ ಕಿ.ಮೀ. ಕರಾವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೨ ಕಿ.ಮೀ., ಉಡುಪಿ ಜಿಲ್ಲೆಯಲ್ಲಿ ೯೮ ಕಿ.ಮೀ. ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ೧೬೦ ಕಿ.ಮೀ. ಕರಾವಳಿ ತೀರವಿದೆ. ರಾಜ್ಯವು ವಿಶಾಲ ಅರಬೀ ಸಮುದ್ರ ಜಲಸಾಗರದಲ್ಲಿ ೨೭,೦೦೦ ಚ.ಕಿ.ಮೀ. ವಿಸ್ತಾರದ ಖಂಡಾವರಣ ವಲಯ (Continental Shelf) ಮತ್ತು ೮೭,೦೦೦ ಚ.ಕಿ.ಮೀ. ವಿಸ್ತಾರದ ಪ್ರತ್ಯೇಕತಾ ಆರ್ಥಿಕ ವಲಯ (Exclusive Economic Zone) ನ್ನು ಹೊಂದಿದೆ. ಈ ಪ್ರದೇಶವು ಮೀನುಗಾರಿಕೆ ಹಾಗೂ ಇತರೆ ಸಾಗರ ಸಂಬಂಧಿತ ಆರ್ಥಿಕ ಚಟುವಟಿಕೆಗಳಿಗೆ ಲಭ್ಯವಿದೆ.

ನೈಋತ್ಯ ಮಾನ್ಸೂನ್ ಕಾಲದಲ್ಲಿ ಸಾಮಾನ್ಯವಾಗಿ ಮೀನುಗಾರಿಕೆಗಾಗಿ ಸಾಂಪ್ರದಾಯಿಕ ದೋಣಿಗಳಾಗಲೀ ಅಥವಾ ಯಾಂತ್ರೀಕೃತ ದೋಣಿಗಳಾಗಲೀ ಸಮುದ್ರಕ್ಕೆ ಹೋಗುವುದಿಲ್ಲ. ಮುಂಗಾರು ತಿಂಗಳುಗಳು ಸಮುದ್ರ ಮೀನುಗಾರಿಕೆ ತಕ್ಕ ಸಮಯವಾಗಿರುವುದಿಲ್ಲ. ಮುಂಗಾರಿನಲ್ಲಿ ನದಿಗಳು ತುಂಬಿ ಹರಿದು ಬರುವ ಹೊಸ ನೀರು ಸಮುದ್ರಕ್ಕೆ ಸೇರಿ ಉಪ್ಪು ಮತ್ತು ಉಷ್ಣಾಂಶಗಳನ್ನು ಕಡಿಮೆಗೊಳಿಸುತ್ತದೆ. ಇಂತಹ ತಂಪು ನೀರು ಹೆಚ್ಚು ಪೌಷ್ಟಿಕಾಂಶವನ್ನು ಹೊಂದಿದ್ದರೂ ಕೂಡ ಆಮ್ಲಜನಕದ ಕೊರತೆಯನ್ನು ಹೊಂದಿರುತ್ತದೆ. ಸ್ವಾಭಾವಿಕವಾಗಿ ಮುಂಗಾರಿನಿಂದಲೂ ಬಲವಾಗಿ ಬೀಸುವ ಗಾಳಿ ಮತ್ತು ಅಲೆಗಳ ಒತ್ತಡದಿಂದ ತಂಪುನೀರು ಮತ್ತು ಬೆಚ್ಚಗಿನ ನೀರು ಮಿಶ್ರಣವಾಗಿ ಅಂತಹ ನೀರಿನಲ್ಲಿ ಮೀನಿನ ಆಹಾರ ಪದಾರ್ಥಗಳು ಹೆಚ್ಚು ಪ್ರಮಾಣದಲ್ಲಿ ಶೇಖರಣೆಗೊಂಡು ಮೀನುಗಳ ಬೆಳವಣಿಗೆಗೆ ಸಹಾಯಕವಾಗುತ್ತವೆ. ಈ ಪ್ರದೇಶದಲ್ಲಿ ಮೀನಿನ ತಂಡಗಳು ಸದಾ ಕಾಲದಲ್ಲಿ ಹೆಚ್ಚು ಹೆಚ್ಚಾಗಿ ಆಹಾರಕ್ಕಾಗಿ ಆಕರ್ಷಿಸಲ್ಪಡುತ್ತವೆ.

ಕರಾವಳಿ ಮೀನುಗಾರಿಕೆಯ ಬೆನ್ನೆಲುಬು ಎನಿಸಿರುವ ಬಂಗುಡೆ (Mackerel) ಮತ್ತು ಭೂತಾಯಿ (Oil Sardine) ಮೀನುಗಳು ಜಿಲ್ಲೆಯಲ್ಲಿ ವಿಪುಲವಾಗಿ ದೊರೆಯುತ್ತವೆ. ಬಂಗುಡೆಯ ಉತ್ಪನ್ನ ಕೆಲವು ವರ್ಷಗಳಲ್ಲಿ ಅತ್ಯಧಿಕವಾಗಿದ್ದು, ರಾಜ್ಯದ ಕರಾವಳಿಗೆ ಬಂಗುಡೆ ತೀರ (Mackerel Coast) ಎಂತಲೂ ಹೆಸರಿದೆ. ಈ ಮೀನು ಮಹಾರಾಷ್ಟ್ರದ ರತ್ನಗಿರಿಯಿಂದ ಕೇರಳದ ಕ್ವಿಲಾನ್‌ವರೆಗೂ ಕರಾವಳಿಯಲ್ಲಿ ಹೇರಳವಾಗಿ ಲಭ್ಯವಿದೆ. ತನ್ನ ದೇಹದ ಶೇ. ೬೩ ಭಾಗ ಮಾಂಸದಿಂದ ಕೂಡಿರುವ ಬಂಗುಡೆಯು ಕರಾವಳಿ ಪ್ರದೇಶದ ಜನರಲ್ಲಿ ಅತ್ಯಂತ ಜನಪ್ರಿಯ ಮೀನೆನಿಸಿದೆ. ದೇಶದ ಮೀನುಗಾರಿಕೆಯಲ್ಲಿ ಬುಂಗುಡೆಯ ಮಹತ್ವವನ್ನು ಪರಿಗಣಿಸಿ ಭಾರತ ಸರ್ಕಾರ ಅದನ್ನು ರಾಷ್ಟ್ರೀಯ ಮೀನು (National Fish) ಎಂದು ಘೋಷಿಸಿದೆ. ರಾಜ್ಯದ ಕಡಲಿನಲ್ಲಿ ಆರ್ಥಿಕವಾಗಿ ಪ್ರಾಮುಖ್ಯತೆಯುಳ್ಳ ಸುಮಾರು ೫೦ ಜಾತಿಯ ಮೀನುಗಳನ್ನು ಗುರುತಿಸಲಾಗಿದೆ. ಅವುಗಳ ಪೈಕಿ ಬುಂಗುಡೆ ಭೂತಾಯಿಗಳಷ್ಟೇ ಅಲ್ಲದೆ ಕರಾವಳಿಯಲ್ಲಿ ಹಿಡಿಯಲ್ಪಡುವ ಇತರೆ ಪ್ರಮುಖ ಮತ್ಸ್ಯ ಸಂಪನ್ಮೂಲಗಳೆಂದರೆ ಸಿಗಡಿ (Prawn), ಭೂತಾಯಿ ಜಾತಿಯ ಇತರೆ ಮೀನುಗಳು (Other Oil Sardines), ಕೊಲ್ಲತರು (Anchoviella), ಕಲ್ಲೂರ (Sciaenids), ಅಂಜಲ್ (Seer fish) ಬೊಂಡಾಸು (Cuttle fish) ಮುಂತಾದವು. ಕಡಲಿನ ಚಿನ್ನದ ಗಣಿ ಎಂದೇ ಕರೆಸಿಕೊಳ್ಳುವ 'ಸಿಗಡಿ' ಸಂಪನ್ಮೂಲ ಕರಾವಳಿಯಲ್ಲಿ ವಿಪುಲವಾಗಿ ದೊರೆಯುತ್ತದೆ. ಈ ಕರಾವಳಿ ಸಂಪನ್ಮೂಲಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಶೇಷ ಬೇಡಿಕೆಯಿದೆ. ಸಿಗಡಿಯ ಉತ್ಪನ್ನವನ್ನು ಹೆಚ್ಚಿಸುವ ಉದ್ದೇಶದಿಂದ ಕರಾವಳಿಯುದ್ದಕ್ಕೂ ತೀವ್ರತಮ ಸಿಗಡಿ ಸಾಕಣೆ ಪ್ರಚಲಿತಗೊಂಡಿತು. ಅವೈಜ್ಞಾನಿಕವಾಗಿ ಕೈಗೊಂಡಿದುದರ ಪರಿಣಾಮವಾಗಿ ವಾತಾವರಣದ ಮಲೀನತೆ ಹಾಗೂ ಜಲ ಗುಣಮಟ್ಟ ಕೆಡುವಿಕೆ ಮತ್ತು ಇತರೆ ಸಾಮಾಜಿಕ ಸಮಸ್ಯೆಗಳು ಉದ್ಭವಿಸಿದ ಕಾರಣ ಸರ್ವೋಚ್ಚ ನ್ಯಾಯಾಲಯವು ಸಮುದ್ರ ತೀರದಿಂದ ೫೦೦ ಮೀ. ದೂರದವರೆಗೆ ತಲೆ ಎತ್ತಿರುವ ಎಲ್ಲಾ ಆಧುನಿಕ ಸಿಗಡಿ ಕೃಷಿ ಕೊಳಗಳನ್ನು ನಾಶಪಡಿಸಬೇಕೆಂದು ತೀರ್ಪಿತ್ತಿದೆ. ಈ ಸಂಬಂಧ ಸಲ್ಲಿಸಲಾಗಿರುವ ಅಪೀಲಿನ ಮೇರೆಗೆ ಮರುಪರಿಶೀಲನೆಗೆ ನ್ಯಾಯಾಲಯ ಒಪ್ಪಿದ್ದು, ಪರಿಸರ ಪ್ರಿಯ ತಂತ್ರಜ್ಞಾನದ ಬಳಕೆಗೆ ಅವಕಾಶ ನೀಡುವ ಸೂಕ್ತ ಮಾರ್ಗಸೂಚಿಗಳನ್ನು ನಿರ್ದೇಶಿಸುವ ಸಾಧ್ಯತೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಸಿಗಡಿ ಸಾಕಣೆ ಕೆಲವು ಪ್ರದೇಶದಲ್ಲಿ ಮಾತ್ರ ನಡೆಯುತ್ತಿವೆ.

ಕಡಲ ಮೀನುಗಾರಿಕೆಯು ರಾಜ್ಯದಲ್ಲಿ ಶತಮಾನಗಳಿಂದಲೂ ಪರಿಪೂರ್ಣತೆ ಹೊಂದಿದೆ. ಇದರಲ್ಲಿ ಬಹು ಮುಖ್ಯವಾದುದೆಂದರೆ ಕಡಲ ತೀರದಲ್ಲಿ ಬಳಸುವ ಅತಿದೊಡ್ಡ ಬಲೆಯಾದ 'ರಂಪಣಿ' ಎನ್ನುವ ಬಲೆಯಿಂದ ಮೀನು ಹಿಡಿಯುವುದು. ರಂಪಣಿ ಬಲೆಯು ಭಾರಿ ಮೀನು ಹಿಡಿಯುವ ಶಕ್ತಿ ಹೊಂದಿದ್ದು, ಬಲೆಯ ಆವರಣದಲ್ಲಿ ಇರತಕ್ಕ ವಿವಿಧ ಮೀನುಗಳನ್ನು ಹಿಡಿಯಬಹುದು. ಮುಖ್ಯವಾಗಿ ಬಂಗಡೆ, ಬೈಗೆ ಮೊದಲಾದ ತೆಪ್ಪದ (Shoal) ಮೀನುಗಳನ್ನು ಈ ಬಲೆಯಲ್ಲಿ ಹಿಡಿಯಲಾಗುತ್ತದೆ. ಒಂದು ಕಾಲದಲ್ಲಿ ನೂರಾರು ಸಂಖ್ಯೆಯಲ್ಲಿ ಬಳಕೆಯಲ್ಲಿದ್ದ ರಂಪಣಿ ಬಲೆಗಳು ಕರಾವಳಿಯ ಸಾವಿರಾರು ಮೀನುಗಾರರಿಗೆ ಆಶ್ರಯದಾಯಕವಾಗಿದ್ದವು. ಪ್ರತಿ ಬಲೆಯಲ್ಲಿ ಸುಮಾರು ೧೦೦ ಜನ ಮೀನುಗಾರರು ಸಹಕಾರದ

ನೆಲೆಯಲ್ಲಿ ತೆಪ್ಪದ ಮೀನುಗಳನ್ನು ಹಿಡಿಯುತ್ತಿದ್ದರು. ಆದರೆ ಪರ್ಸ್‌ಸೀನ್ ದೋಣಿ ಚಾಲ್ತಿಗೆ ಬಂದ ನಂತರ ರಂಪಣಿ ಬಲೆಗಳ ಮಹತ್ವ ಕಡಿಮೆಯಾಗುತ್ತಾ ಬಂದಿತು. ರಂಪಣಿ ಮಾದರಿಯ ಚಿಕ್ಕ ಬಲೆಯೊಂದನ್ನು ಕೈರಂಪಣಿ ಅಥವಾ 'ಪಯೋಧ' ಎನ್ನುತ್ತಾರೆ. ಇದು ಚಿಕ್ಕದಾಗಿರುವ ದೋಣಿಯೊಡನೆ ನಡೆಸಲ್ಪಡುತ್ತದೆ. ಇದರ ಪ್ರಯೋಗಕ್ಕೆ ಕೆಲವೇ ಕೆಲವು ಜನರು ಬೇಕಾಗುತ್ತಾರೆ. ಕೈರಂಪಣಿಯನ್ನು ಆಗಾಗ್ಗೆ ಮುಂಗಾರು ಮಾಹೆಗಳಲ್ಲಿ ಹಾಗೂ ದೊಡ್ಡ ರಂಪಣಿಯ ಪ್ರಯೋಗ ಸಾಧ್ಯವಿಲ್ಲದ ಸ್ಥಳಗಳಲ್ಲಿ ಬಳಸಲಾಗುತ್ತದೆ.

ರಾಜ್ಯದ ಕರಾವಳಿಯಲ್ಲಿ ಮಳೆಗಾಲದ ಋತುವಿನಲ್ಲಿ ಯಾಂತ್ರೀಕೃತ ಮೀನುಗಾರಿಕೆ ನಿಷೇಧವಿದೆಯಾದರೂ ನಾಡ ದೋಣಿಗಳು ಈ ನಿರ್ಬಂಧದಿಂದ ಮುಕ್ತವಾಗಿವೆ. ಸಾಂಪ್ರದಾಯಿಕ ಮೀನುಗಾರರು ಔಟ್‌ಬೋರ್ಡ್ ಇಂಜಿನ್‌ಗಳನ್ನು ಬಳಸಿ ಮೀನು ಹಿಡಿಯಬಹುದಾದ್ದರಿಂದ, ಇತ್ತೀಚಿನ ವರ್ಷಗಳಲ್ಲಿ ಇಂತಹ ದೋಣಿಗಳ ಸಂಖ್ಯೆ ಜಾಸ್ತಿಯಾಗಿದ್ದು, ಸಂಪನ್ಮೂಲದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಗಳಿವೆ. ಬಡ ಮೀನುಗಾರರ ಆರ್ಥಿಕ ಸಾಮಾಜಿಕ ಉನ್ನತಿಯ ದೃಷ್ಟಿಯಿಂದ ಮಳೆಗಾಲದಲ್ಲಿ ನಡೆಸುವ ಈ ಕೈರಂಪಣಿ ಮೀನುಗಾರಿಕೆಯ ದುಷ್ಪರಿಣಾಮಗಳ ಕುರಿತು ವೈಜ್ಞಾನಿಕ ಅಧ್ಯಯನದ ಅವಶ್ಯಕತೆಯಿದೆ.

ತೀರ ಪ್ರದೇಶದಲ್ಲಿ ಬಳಕೆಯಲ್ಲಿರುವ ಸಾಂಪ್ರದಾಯಿಕ ಹಾಗೂ ಅತಿ ಸಾಮಾನ್ಯವಾಗಿರುವ ದೋಣಿ ಎಂದರೆ ನಾಲ್ಕು ಮೀಟರ್‌ನಿಂದ ಸುಮಾರು ೧೧ ಮೀಟರ್‌ವರೆಗಿನ ಮರದ ಕಾಂಡದಿಂದ ಮಾಡಿದ ದೋಣಿಗಳು ಒಂದೊಂದು ದೋಣಿಯು ಒಂದೊಂದೇ ಮರದ ಮೋಪನ್ನು ಕೊರೆದು ತಯಾರಿಸುವುದರಿಂದ ಈ ದೋಣಿಗಳಿಗೆ ತೋಡು ದೋಣಿ (Dug-out)ಗಳೆಂದು ಹೆಸರು ಬಂದಿದೆ. ಈ ದೋಣಿಗಳು ಹುಟ್ಟು ಅಥವಾ ಹಾಯಿಯಿಂದ ಚಲಿಸಲ್ಪಡುತ್ತವೆ. ನಾಡ ದೋಣಿಗಳನ್ನು ಯಾಂತ್ರೀಕೃತಗೊಳಿಸುವ ಯೋಜನೆಯು ೧೯೮೦ರ ದಶಕದಲ್ಲಿ ಆರಂಭವಾಗಿ ಕಡಲ ಮೀನುಗಾರಿಕೆ ಚಟುವಟಿಕೆಯ ವಿಸ್ತಾರ ಮತ್ತು ವೈಶಾಲ್ಯತೆ ಹೆಚ್ಚಲು ಕಾರಣವಾಯಿತು. ರಾಜ್ಯದಲ್ಲಿ ೧೯೭೬ರಲ್ಲಿ ಮೊತ್ತ ಮೊದಲ ಬಾರಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ಪರಿಚಯಿಸಲಾದ ಪರ್ಸ್‌ಸೀನ್ ದೋಣಿಗಳು ಬಹುಬೇಗ ಬಂಗುಡೆ ಮತ್ತು ಭೂತಾಯಿಗಳನ್ನು ಹಿಡಿಯಬಲ್ಲ ಅತ್ಯಂತ ಯಶಸ್ವೀ ದೋಣಿಗಳಾಗಿ ಸ್ವೀಕೃತಗೊಂಡವು. ಅತ್ಯಾಧುನಿಕ ತಂತ್ರಜ್ಞಾನದ ಪ್ರತಿ ಪರ್ಸ್‌ಸೀನ್ ದೋಣಿಯ ಬೆಲೆ ಪ್ರಸ್ತುತ ಸುಮಾರು ೨೦ ಲಕ್ಷ ರೂ.ಗಳಾಗುತ್ತವೆ. ಅವುಗಳ ಸಂಖ್ಯೆ ಕ್ರಮೇಣ ವೃದ್ಧಿಗೊಂಡಿತು ಮತ್ತು ಮೀನುಗಾರರು ಅವುಗಳ ಬಳಕೆಯಿಂದ ಸಾಕಷ್ಟು ಲಾಭ ಗಳಿಸಿದರು. ಅವುಗಳ ಸಂಖ್ಯೆ ಹೆಚ್ಚಿದಂತೆ, ಅವುಗಳಿಗೆ ದೊರಕುತ್ತಿದ್ದ ಮೀನಿನ ಪ್ರಮಾಣವೂ (ಹೆಚ್ಚಾಗಿ ಬಂಗುಡೆ, ಭೂ ತಾಯಿ, ಶೇಡೆ, ಕೊಲ್ಲತರು ಮೀನುಗಳು) ಕಡಿಮೆಯಾಗುತ್ತಾ ಬಂದಿತು. ಪ್ರತಿ ಪರ್ಸ್‌ಸೀನ್ ದೋಣಿಯ ಬಲೆಯ ಉದ್ದ ಸುಮಾರು ೫೦೦ ರಿಂದ ೮೦೦ ಮೀ ಮತ್ತು ಅದರ ಆಲ ಸುಮಾರು ೫೦ ರಿಂದ ೭೦ ಮೀ. ಇರುವುದರಿಂದ ಅವುಗಳು ಹಿಡಿಯಬಲ್ಲ ಮೀನಿನ ಪ್ರಮಾಣ ಸಹಜವಾಗಿಯೇ ಅಧಿಕವಾಗಿದೆ. ಪ್ರತಿ ಪರ್ಸ್‌ಸೀನ್ ದೋಣಿಯು ೩ ರಿಂದ ೭ ಟನ್‌ಗಳಷ್ಟು ಮೀನನ್ನು ದಿನವೊಂದಕ್ಕೆ ಹಿಡಿಯಬಲ್ಲ ಸಾಮರ್ಥ್ಯ ಹೊಂದಿದೆ.

ಟ್ರಾಲ್‌ಗಳು, ಪರ್ಸ್‌ಸೀನ್ ದೋಣಿಗಳು ಮತ್ತು ಯಂತ್ರಚಾಲಕ ಗಿಲ್‌ನೆಟ್ ದೋಣಿಗಳು ಮತ್ತಿತರ ಯಾಂತ್ರೀಕೃತ ದೋಣಿಗಳ ಮೀನುಗಾರಿಕೆಗೆ ಮಳೆಗಾಲದ ಅವಧಿಯಲ್ಲಿ (ಜೂನ್ ೧ರಿಂದ ಆಗಸ್ಟ್ ೩೧ರ ವರೆಗೆ) ಸಂಪೂರ್ಣ ನಿಷೇಧವಿದ್ದು ಇದನ್ನು ಮೀನುಗಾರರು ಚಾಚೂ ತಪ್ಪದೇ ಪಾಲಿಸುತ್ತಾ ಬಂದಿದ್ದಾರೆ. ಆ ಅವಧಿಯಲ್ಲಿ ಹೆಚ್ಚಿನ ಜಾರಿಯ ಮೀನುಗಳು ಮರಿ ಮಾಡುವ ಋತುಕಾಲವಾಗಿರುವುದರಿಂದ ಗರ್ಭ ಧರಿಸಿದ ಮೀನುಗಳು ಜೀವಿತದಲ್ಲಿ ಒಮ್ಮೆಯಾದರೂ ತಮ್ಮ ಸಂತಾನವನ್ನು ವೃದ್ಧಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಆರಂಭದಲ್ಲಿ ಎಲ್ಲಾ ಟ್ರಾಲ್ ದೋಣಿಗಳು ಏಕ ದಿನ ಟ್ರಾಲ್ ಮೀನುಗಾರಿಕಾ ದೋಣಿಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಒಂದು ದಿನ ಮಾತ್ರ ಮೀನುಗಾರಿಕೆ ನಡೆಸಿ, ಹಿಡಿದ ಸಿಗಡಿಯನ್ನು ಅದೇ ತಂಗುದಾಣಕ್ಕೆ ತರುವುದು ಸಾಮಾನ್ಯವಾಗಿ ರೂಢಿಯಲ್ಲಿತ್ತು. ಆದರೆ ಸಿಗಡಿಯ ಲಭ್ಯತೆ ಕಡಿಮೆಯಾದಂತೆಲ್ಲಾ ಡಿಸೆಲ್ ಖರ್ಚೂ ಪೂರೈಸದೇ ನಷ್ಟದ ಮೀನುಗಾರಿಕೆಯಾಗಿ ಪರಿಣಮಿಸಿತು. ನಷ್ಟವನ್ನು ತುಂಬಿಕೊಂಡು

ಮೀನುಗಾರಿಕೆ ನಡೆಸುವ ಸಲುವಾಗಿ ಬಹು ದಿನ ಟ್ರಾಲ್ ಮೀನುಗಾರಿಕೆಯನ್ನು ಬಳಕೆಗೆ ತರಲಾಯಿತು. ಅಂದರೆ ೩–೪ ದಿವಸಗಳವರೆಗೆ ಸತತವಾಗಿ ಸಮುದ್ರದಲ್ಲೇ ಉಳಿದು ಸಾಕಷ್ಟು ಮಂಜುಗಡ್ಡೆಯನ್ನು ಜೊತೆಗೆ ಒಯ್ಯಲಾಗುತ್ತದೆ. ಜೊತೆಗೆ ಈ ಬಹುದಿನ ಟ್ರಾಲ್ ಮೀನುಗಾರಿಕಾ ದೋಣಿಗಳು ದೂರ ಸಮುದ್ರದವರೆಗೂ ಹೋಗಿ ಮೀನು ಹಿಡಿಯುವುದು ಸಾಧ್ಯವಾಗಿದೆ. ಲಾಭದಾಯಕವಲ್ಲದ ಪರ್ಸ್‌ಸೀನ್ ದೋಣಿಗಳನ್ನು ಇಂತಹ ಟ್ರಾಲ್ ಮೀನುಗಾರಿಕಾ ದೋಣಿಗಳಾಗಿ ಬದಲಾಯಿಸಿ/ಪರಿವರ್ತಿಸಿ ಮೀನುಗಾರಿಕೆಗೆ ಅಳವಡಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಗೆ ಆದ್ಯಂತೆ ದೊರೆಯುತ್ತಿದೆ. ಜಿಲ್ಲೆಯಲ್ಲಿ ಮೀನುಗಾರಿಕೆಗೆ ಅನುಕೂಲತೆಗಳಿರುವ ೧೦೮ ಸಣ್ಣ ಕೆರೆಗಳಿದ್ದು, ಅವುಗಳ ಜಲ ವಿಸ್ತೀರ್ಣ ೩೪.೭೪ ಹೆ. ಗಳಷ್ಟಿದೆ. ಇಲ್ಲಿನ ಕೊಳಗಳಲ್ಲಿ ಆರ್ಥಿಕವಾಗಿ ಪ್ರಾಮುಖ್ಯತೆಯುಳ್ಳ ಮೀನುಗಳ ಸಂಪನ್ಮೂಲ ಹೆಚ್ಚಿಸಲು ಮೀನುಗಾರಿಕಾ ಇಲಾಖೆಯು ಕೃತಕವಾಗಿ ಉತ್ಪಾದಿಸಿದ ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯ ಗೆಂಡೆ, ಬೆಳ್ಳಿಗೆಂಡೆ ಮತ್ತು ಹುಲ್ಲುಗೆಂಡೆ ಮುಂತಾದ ಮೀನುಮರಿಗಳನ್ನು ತರಿಸಿ ಆಸಕ್ತ ಮೀನು ಕೃಷಿಕರಿಗೆ ಹಂಚುತ್ತದೆ.

## ಕರಾವಳಿ ಪ್ರದೇಶದಲ್ಲಿ ಸಿಹಿನೀರು ಮೀನು ಸಾಕಣೆ

ಮೀನು ಪೌಷ್ಠಿಕಾಂಶಗಳ ಕಣಜವೆನಿಸಿದ್ದು, ಇತರೆ ಪ್ರಾಣಿಗಳ ಆಹಾರಕ್ಕೆ ಹೋಲಿಸಿದಾಗ ಕಡಿಮೆ ದರದಲ್ಲಿ ದೊರೆಯುತ್ತದೆ. ಅನಾದಿ ಕಾಲದಿಂದಲೂ ಕರಾವಳಿ ಪ್ರದೇಶದ ಜನರು ತಮ್ಮ ದಿನನಿತ್ಯದ ಆಹಾರದಲ್ಲಿ ಕಡಲ ಮೀನನ್ನು ಉಪಯೋಗಿಸುತ್ತಾ ಬಂದಿದ್ದಾರೆ. ಆದರೆ ಪ್ರಸ್ತುತ ಕಡಲ ಮೀನಿನ ಉತ್ಪಾದನೆ ಈಗಾಗಲೇ ಗರಿಷ್ಠ ಮಿತಿಯನ್ನು ತಲುಪಿದ್ದು, ಅಭಿವೃದ್ಧಿಗೆ ಹೆಚ್ಚು ಅವಕಾಶಗಳಿರುವುದಿಲ್ಲ ಎಂದು ಸಮೀಕ್ಷೆಯ ಪ್ರಕಾರ ತಿಳಿದು ಬಂದಿದೆ. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಸಿಹಿನೀರು ಮೀನು ಸಾಕಣೆ ಕೈಗೊಳ್ಳುವುದು ಈ ಸಮಸ್ಯೆಗೆ ಒಂದು ಪರಿಹಾರವೆನಿಸಿದೆ. ಸಿಹಿನೀರು ಮೀನು ಸಾಕಣೆ ಇತರೆ ಕೃಷಿ ಪದ್ಧತಿಗಳಂತೆ ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಕೈಗೊಂಡು ಅಧಿಕ ಲಾಭಗಳಿಸಬಹುದಾದ ಉದ್ಯಮ. ಕರಾವಳಿಯಲ್ಲಿ ಸಿಹಿನೀರು ಮೀನಿಗೆ ಅಪಾರ ಬೇಡಿಕೆ ಇದ್ದು, ಪ್ರಸ್ತುತ ಉಪಯೋಗವಾಗದೇ ಇರುವ ಜನಸಂಪನ್ಮೂಲವನ್ನು (ಮದಗ, ಕೆರೆ, ಕೊಳ, ಕೊಜೆ ಭೂಮಿ) ಸಮರ್ಪಕವಾಗಿ ಒಳನಾಡು ಮೀನುಗಾರಿಕಾ ಅಭಿವೃದ್ಧಿಗೆ ಬಳಸಿಕೊಳ್ಳಬೇಕಾಗಿದೆ.

**ಕೊಳದ ಸ್ಥಳ ಆಯ್ಕೆ ಮತ್ತು ನಿರ್ಮಾಣ :** ಮೀನಿಗೆ ಉತ್ತಮ ಬೇಡಿಕೆ, ಜಿಗುಟು ಮಣ್ಣಿನಿಂದ ಕೂಡಿದ ಸಾಕಷ್ಟು ನೀರಿನ ಆಶ್ರಯವಿರುವ, ಪ್ರವಾಹಕ್ಕೊಳಗಾಗದ, ರಸ್ತೆ ಸಮೀಪದ ಮತ್ತು ಇಳಿಜಾರಾದ ತಗ್ಗು ಪ್ರದೇಶವನ್ನು ಮೀನು ಸಾಕಣೆಗೆ ಆರಿಸುವುದು ಯೋಗ್ಯ. ಉತ್ತಮ ನಿರ್ವಹಣೆ ದೃಷ್ಟಿಯಿಂದ ಆಯತಾಕಾರದ ೦.೨೫ ರಿಂದ ಐದು ಎಕರೆ ವಿಸ್ತೀರ್ಣದ ೨೦ಮೀ. ಅಗಲದೊಳಗಿನ ಕೊಳ ಮೀನು ಸಾಕಣೆಗೆ ಯೋಗ್ಯವಾದುದು. ಆಯ್ಕೆ ಮಾಡಿದ ಸ್ಥಳದ ಸ್ವಲ್ಪ ಭಾಗವನ್ನು ಆಳಕ್ಕೆ ಅಗೆದು ಕೊಳ ನಿರ್ಮಾಣ ಮಾಡುವುದು ಕಡಿಮೆ ಖರ್ಚಿನ (ಶೇ. ೩೦ ರಿಂದ ೪೦ರಷ್ಟು ಕಡಿತ) ಸುಲಭ ವಿಧಾನವಾಗಿದೆ. ಇಂತಹ ಪದ್ಧತಿ ಆಂಧ್ರಪ್ರದೇಶದಲ್ಲಿ ಹೆಚ್ಚು ಪ್ರಚಲಿತವಾಗಿದೆ. ನಿರ್ಮಾಣ ಮಾಡಿದ ಕೊಳದಲ್ಲಿ ಐದರಿಂದ ಆರು ಅಡಿ (ಕನಿಷ್ಠ ಪಕ್ಷ ೩ ರಿಂದ ೪ ಅಡಿ) ನೀರು ಸದಾ ನಿಲ್ಲುವಂತಿರಬೇಕು. ಕೊಳದ ಬದುವಿನ ಮೇಲ್ಭಾಗ ಒಂದು ಮೀಟರ್ ಅಗಲವಿದ್ದರೆ ಒಳ ಇಳಿಜಾರಿನ ಉದ್ದ ೧.೫ ಮೀ. ಉದ್ದವಿರಬೇಕು. ಕೊಳಕ್ಕೆ ನೀರು ತುಂಬಿಸುವ ಒಳ ತೂಬು ನೀರಿನ ಗರಿಷ್ಠ ಮಟ್ಟದಿಂದ ೦.೫ ಅಡಿ ಎತ್ತರದಲ್ಲಿರಬೇಕು. ಕೊಳದಿಂದ ನೀರು ಹೊರಹಾಕುವ ತೂಬು ತಳಭಾಗದಿಂದ ಒಂದು ಅಡಿ ಎತ್ತರದಲ್ಲಿರಬೇಕು.

ಕರಾವಳಿ ಪ್ರದೇಶದಲ್ಲಿ ನಿರ್ಮಾಣ ಮಾಡಿದ ಕೊಳದಲ್ಲಿ ನೀರು ಬಸಿದು ಹೋಗುವ ಸಾಧ್ಯತೆ ಹೆಚ್ಚಿರುವುದರಿಂದ ಕೊಳದ ತಳಭಾಗ ಹಾಗೂ ಒಳ ಬದುವಿಗೆ ಮದಗ ಅಥವಾ ಕೆರೆಯ ಕೆಸರು ಮಣ್ಣನ್ನು ಹಾಕುವುದು ಸೂಕ್ತ. ಬದುವಿನ ಮೇಲೆ ಹುಲ್ಲನ್ನು ಬೆಳೆಸುವುದರಿಂದ ಬದುವಿನ ಮಣ್ಣು ಬಿಗಿಯಾಗಿರುವುದಲ್ಲದೆ

## ಕೋಷ್ಟಕ ೪.೧೨ : ಮೀನುಗಾರಿಕಾ ದೋಣಿಗಳು ೨೦೦೪-೦೫

### ೧) ಯಾಂತ್ರೀಕೃತ ಮೀನುಗಾರಿಕಾ ದೋಣಿಗಳ ವಿವರ ೨೦೦೪-೦೫

| ಕ್ರ.ಸಂ. | ಲ್ಯಾಂಡಿಂಗ್ ಕೇಂದ್ರಗಳು | ಪರ್ಸೀನ್ | ಟ್ರಾಲರ್ಸ್ | ಗಿಲ್ ನೆಟ್ಟರ್ಸ್ | ಲಾಗ್ ಲೈನರ್ | ಇತರ ಯಾಂತ್ರೀಕೃತ ದೋಣಿಗಳು | ಒಟ್ಟು |
|---|---|---|---|---|---|---|---|
| | **ಉಡುಪಿ ತಾಲೂಕು** | | | | | | |
| ೧ | ಹೆಜಮಾಡಿ | ೦೩ | ೨೪ | ೧೨೨ | – | – | ೧೪೯ |
| ೨ | ಪೊಲಿಪ್ಪು | – | – | ೧೭೭ | – | – | ೧೭೭ |
| ೩ | ಉದ್ಯಾವರ | – | – | ೬೯ | – | – | ೬೯ |
| ೪ | ಮಲ್ಪೆ | ೧೦೪ | ೬೩೬ | ೪೮೫ | – | – | ೧೨೩೩ |
| ೫ | ಹಂಗರಕಟ್ಟೆ | – | ೧೨೫ | ೭೫ | – | – | ೧೯೫ |
| | **ಕುಂದಾಪುರ ತಾಲೂಕು** | | | | | | |
| ೬ | ಬಿಜಾಡಿ | – | – | ೭೭ | – | – | ೭೭ |
| ೭ | ಗಂಗೊಳ್ಳಿ | ೩೫ | ೨೧೦ | ೪೯೯ | ೨೯ | – | ೭೭೩ |
| ೮ | ನಾವುಂದ | – | – | ೨೫೦ | – | – | ೨೫೦ |
| ೯ | ತರಪತಿ | – | – | ೨೫೦ | – | – | ೨೫೦ |
| ೧೦ | ಶಿರೂರು | – | – | ೨೬೦ | – | – | ೨೬೦ |
| | ಒಟ್ಟು | ೧೪೨ | ೯೫ | ೨೨೬೪ | ೨೯ | – | ೩೪೩೦ |

### ೨) ಯಾಂತ್ರೀಕೃತವಲ್ಲದ ದೋಣಿಗಳು

| ಕ್ರ.ಸಂ. | ಲ್ಯಾಂಡಿಂಗ್ ಕೇಂದ್ರಗಳು | ಕೈರಂಪಣಿ / ಶೋರ್ ಸೀನ್ಸ್ | ಪಟ್ಟೆ ಬಲೆ ಘಟಕಗಳು | ಇತರೆ | ಒಟ್ಟು |
|---|---|---|---|---|---|
| | **ಉಡುಪಿ ತಾಲೂಕು** | | | | |
| ೧ | ಹೆಜಮಾಡಿ | ೦೨ | – | ೫೪ | ೫೬ |
| ೨ | ಪೊಲಿಪ್ಪು | ೦೮ | – | ೭೪ | ೮೨ |
| ೩ | ಉದ್ಯಾವರ | ೦೧ | – | ೨೬೮ | ೨೬೯ |
| ೪ | ಮಲ್ಪೆ | ೨೫ | – | ೬೫೫ | ೬೮೦ |
| ೫ | ಹಂಗರಕಟ್ಟೆ | ೦೪ | – | ೨೨೫ | ೨೨೯ |
| | **ಕುಂದಾಪುರ ತಾಲೂಕು** | | | | |
| ೬ | ಬಿಜಾಡಿ | ೦೮ | – | ೧೨ | ೨೦ |
| ೭ | ಗಂಗೊಳ್ಳಿ | ೧೦ | ೪೨ | ೨೧೩ | ೨೬೫ |
| ೮ | ನಾವುಂದ | ೦೩ | ೨೨ | ೩೫ | ೬೦ |
| ೯ | ತರಪತಿ | ೦೫ | ೩೬ | ೬೬ | ೧೦೭ |
| ೧೦ | ಶಿರೂರು | – | – | ೨೯೦ | ೨೯೦ |
| | ಒಟ್ಟು | ೬೬ | ೧೦೦ | ೧೮೯ | ೨೦೫೮ |

## ಕೋಷ್ಟಕ ೪.೧೩ : ಮೀನುಗಾರಿಕಾ ಬಲೆಗಳು – ಉಡುಪಿ ಜಿಲ್ಲೆ ೨೦೦೪–೦೫

| ಕ್ರ.ಸಂ. | ಲ್ಯಾಂಡಿಂಗ್ ಕೇಂದ್ರಗಳು | ಡ್ರಾಗ್‌ನೆಟ್ಸ್ | ಗಿಲ್‌ನೆಟ್ಸ್ | ಟ್ರಾಲ್‌ನೆಟ್ಸ್ | ಕ್ಯಾಸ್ಟ್‌ನೆಟ್ಸ್ |
|---|---|---|---|---|---|
| ೧ | ಹೆಜಮಾಡಿ | ೧೫ | ೭೫ | ೭೫ | ೧೦೩ |
| ೨ | ಪೊಲಿಪ್ಪು | ೨೭ | ೧೭೦ | – | ೯೪ |
| ೩ | ಉದ್ಯಾವರ | – | ೭೩ | – | ೬೩ |
| ೪ | ಮಲ್ಪೆ | ೩೫ | ೧೧೦ | ೨೫೬೫ | ೪೦೦ |
| ೫ | ಹಂಗರಕಟ್ಟೆ | ೧೪ | ೮೧ | ೧೩೦ | ೧೪೦ |
| ೬ | ಬಿಜಾಡಿ | ೦೬ | – | – | ೧೮ |
| ೭ | ಗಂಗೊಳ್ಳಿ | ೫೮ | ೨೦೦ | ೬೦೦ | ೮೫ |
| ೮ | ನಾವುಂದ | ೫೫ | ೭೦ | – | ೧೦ |
| ೯ | ತರಪತಿ | ೧೫೦ | ೮೦ | – | ೬೦ |
| ೧೦ | ಶಿರೂರು | ೧೨ | ೧೦೪೦ | – | ೩೦ |
| | ಒಟ್ಟು | ೩೭೨ | ೧೮೯೯ | ೩೩೭೦ | ೧೦೦೩ |

| ಕ್ರ.ಸಂ. | ಲ್ಯಾಂಡಿಂಗ್ ಕೇಂದ್ರಗಳು | ಶೋರ್‌ಸೀನ್ಸ್ | ಇತರೆ | ಡಿಸ್ಕೋ ನೆಟ್ಸ್ | ಪರ್ಸೀನ್ಸ್ | ಒಟ್ಟು |
|---|---|---|---|---|---|---|
| ೧ | ಹೆಜಮಾಡಿ | – | ೦೩ | ೬೦ | ೨೦ | ೩೫೧ |
| ೨ | ಪೊಲಿಪ್ಪು | – | – | ೧೨೭ | ೩೨ | ೪೫೦ |
| ೩ | ಉದ್ಯಾವರ | ೭೭ | – | ೨೬ | ೧೩ | ೨೫೨ |
| ೪ | ಮಲ್ಪೆ | – | ೯೫ | ೩೬೦ | ೬೮ | ೩೬೩೩ |
| ೫ | ಹಂಗರಕಟ್ಟೆ | – | – | ೯೫ | – | ೪೬೦ |
| ೬ | ಬಿಜಾಡಿ | – | – | ೭೫ | ೪೦ | ೧೩೯ |
| ೭ | ಗಂಗೊಳ್ಳಿ | ೦೫ | ೭೫ | ೬೧೬ | ೩೩೦ | ೧೯೬೯ |
| ೮ | ನಾವುಂದ | ೦೮ | – | ೧೬೫ | ೩೦ | ೩೩೮ |
| ೯ | ತರಪತಿ | ೦೯ | – | ೫೮೦ | ೭೦ | ೬೪೯ |
| ೧೦ | ಶಿರೂರು | – | – | – | – | ೧೦೮೨ |
| | ಒಟ್ಟು | ೯೯ | ೧೭೩ | ೧೮೦೪ | ೬೦೩ | ೯೩೨೩ |

## ಕೋಷ್ಟಕ ೪.೧೪ : ಜಿಲ್ಲೆಯಲ್ಲಿ ಮೀನು ಜಾತಿಗಳ ಪ್ರಕಾರದ ಕಡಲ ಮೀನು ಉತ್ಪಾದನಾ ಪ್ರಮಾಣ

ಮೆಟ್ರಿಕ್ ಟನ್ನುಗಳಲ್ಲಿ ಮೌಲ್ಯ ಲಕ್ಷ ರೂ.ಗಳಲ್ಲಿ.

| ಕ್ರ. ಸಂ. | Name of the Species / fish | ೨೦೦೦–೦೧ | | ೨೦೦೧–೦೨ | | ೨೦೦೪–೦೫ | |
|---|---|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೧ | Sharks | ೪೯೩.೯೮ | ೧೮೬.೪೨ | ೫೨೪.೬೦ | ೨೦೫.೯೯ | ೩೩೫.೪೭ | ೧೮೭.೬೩ |
| ೨ | Rays and Skates | ೬೮.೬೦ | ೧೧.೭೩ | ೧೧೬.೦೮ | ೨೪.೯೨ | ೧೭೨.೫೩ | ೫೭.೪೯ |
| ೩ | Oil Sardines | ೯೯೩೨.೯೮ | ೧೦೪೩.೯೭ | ೯೭೮೯.೩೮ | ೭೬೬.೭೨ | ೧೨೧೬೮.೮೨ | ೮೬೦.೬೮ |
| ೪ | White Sardine | ೧೨೯.೭೦ | ೨೯.೭೦ | ೧೦೦.೮೫ | ೨೫.೮೪ | ೫೦೪.೩೯ | ೮೦.೯೦ |
| ೫ | Other Sardine | ೧೩೦೪.೦೦ | ೧೦೦.೩೭ | ೧೦೦೮.೮೨ | ೮೯.೮೧ | ೨೪೬೮.೭೩ | ೨೧೩.೪೮ |

| ಕ್ರ. ಸಂ. | Name of the Species / fish | ೨೦೦೦–೦೧ | | ೨೦೦೧–೦೨ | | ೨೦೦೨–೦೩ | |
|---|---|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೬ | **Other Clupedis** | ೧೫೪೬.೬೧ | ೮೨.೮೧ | ೧೫೪೬.೨೩ | ೧೧೨.೭೪ | ೧೧೨೭.೧೨ | ೮೫.೦೭ |
| ೭ | **Silver Bar** | ೬೩.೫೦ | ೮.೯೧ | ೭೧.೧೭ | ೧೧.೫೬ | ೧೯೧.೭೫ | ೨೩.೨೧ |
| ೮ | **Mackerel** | ೬೪೨೮.೧೬ | ೧೩೩೫.೨೧ | ೨೫೫೭.೦೭ | ೬೦೨.೮೦ | ೩೩೭೫.೪೫ | ೯೩೩.೬೭ |
| ೯ | **Seer fish** | ೧೪೬೬.೧೧ | ೭೯೫.೦೧ | ೮೫೬.೬೯ | ೫೦೦.೮೩ | ೧೩೨೧.೬೭ | ೮೮೫.೪೮ |
| ೧೦ | **Tuna** | ೨೪೩೪.೩೭ | ೧೭೩.೮೩ | ೯೦೬.೦೬ | ೭೭.೪೭ | ೧೦೫೪.೧೯ | ೧೦೨.೧೦ |
| ೧೧ | **Lacrarius** | ೫೫೨.೯೦ | ೮೧.೨೬ | ೫೬೩.೬೨ | ೭೫.೩೯ | ೫೨೫.೧೯ | ೮೯.೩೮ |
| ೧೨ | **Lady fish** | ೧೦೦.೦೫ | ೭೫.೧೮ | ೪೮.೪೫ | ೪೪.೧೮ | ೧೭.೦೦ | ೧೨.೦೨ |
| ೧೩ | **Mallets** | ೧೦೯.೫೦ | ೨೬.೫೯ | ೮೪.೧೨ | ೨೨.೫೨ | ೧೭.೦೦ | ೭.೨೧ |
| ೧೪ | **Carangids** | ೧೫೮೦.೦೦ | ೬೬.೩೬ | ೨೪೬೭.೨೪ | ೧೧೦.೪೨ | ೨೪೧೦.೪೦ | ೨೪೩.೭೨ |
| ೧೫ | **Promfrets** | ೩೩೮.೩೫ | ೨೧೭.೧೩ | ೨೫೩.೨೮ | ೧೮೪.೯೨ | ೨೪೦.೦೦ | ೨೦೯.೭೫ |
| ೧೬ | **Silver Bellie** | ೧೯೬೧.೭೦ | ೬೭.೦೮ | ೧೨೭೦.೪೮ | ೮೭.೫೮ | ೧೫೩೬.೮೯ | ೧೧೦.೩೬ |
| ೧೭ | **Gerres** | ೩೧.೬೨ | ೮.೯೩ | ೧೫.೫೧ | ೬.೯೧ | ೨.೦೦ | ೦.೭೨ |
| ೧೮ | **Sciaenids** | ೧೮೬೦.೨೦ | ೧೭೧.೫೩ | ೧೭೫೭.೮೯ | ೨೧೪.೨೬ | ೯೯೫.೮೦ | ೧೧೧.೮೯ |
| ೧೯ | **Ribbon fish** | ೪೧೯೫.೧೫ | ೨೬೧.೩೬ | ೯೪೪.೯೫ | ೪೭.೪೪ | ೩೨೨೬.೯೬೪ | ೦೯.೩೭ |
| ೨೦ | **Flat fish** | ೧೦೮.೪೦ | ೧೭.೦೪ | ೧೨೧.೬೦ | ೨೦.೮೮ | ೮೪.೩೪ | ೧೩.೭೭ |
| ೨೧ | **Anchoviella** | ೪೭೧.೩೦ | ೫೧.೯೧ | ೩೭೫.೮೮ | ೨೭.೦೩ | ೫೧೩.೦೦ | ೬೯.೨೫ |
| ೨೨ | **Big eye** | – | – | – | – | ೧೩೩೫.೦೦ | ೧೨೦.೭೬ |
| ೨೩ | **Cat fish** | ೩೫೩.೭೦ | ೪೬.೦೩ | ೨೯೧.೦೯ | ೪೧.೬೬ | ೨೭೮.೫೦ | ೪೩.೮೬ |
| ೨೪ | **Eels** | ೦.೦೦ | ೦.೦೦ | ೦.೦೦ | ೦.೦೦ | ೧.೦೦ | ೦.೦೫ |
| ೨೫ | **Soles** | ೩೪೧೩.೨೯ | ೧೭೧.೪೩ | ೨೧೩೦.೪೫ | ೧೩೩.೭೫ | ೯೮೦.೨೫ | ೧೨೧.೩೨ |
| ೨೬ | **Jew fish** | ೧೬೨.೦೪ | ೨೫.೫೨ | ೩೦೧.೦೦ | ೫೨.೬೨ | ೫೪೦.೬೮ | ೯೩.೮೦ |
| ೨೭ | **Lizard Fish** | – | – | – | – | ೧೨೦೪.೯೭ | ೧೧೦.೦೯ |
| ೨೮ | **Pink Perch** | – | – | – | – | ೩೭೫೭ | ೩೦೮.೬೪ |
| ೨೯ | **Prowns** | ೧೭೭೧.೬೦ | ೧೪೯೬.೬೭ | ೨೫೩೨.೨೨ | ೨೩೩೯.೬೪ | ೩೫೩೦.೪೧ | ೫೦೨೨.೪೮ |
| ೩೦ | **Rock Cob** | – | – | – | – | ೯೫೨.೧೫ | ೧೧೪.೧೮ |
| ೩೧ | **Crobs** | ೮೪೮.೨೫ | ೭೯.೯೭ | ೭೮೯.೧೦ | ೫೭.೫೭ | ೬೯೧.೯೨ | ೮೯.೦೫ |
| ೩೨ | **Shell fish** | ೪೮.೫೦ | ೧.೩೪ | ೧೧೫.೦೦ | ೬.೨೯ | – | – |
| ೩೩ | **Squids** | ೨೧೪೬.೨೪ | ೮೫೮.೮೦ | ೧೮೩೮.೬೭ | ೬೯೯.೧೪ | ೨೯೧೨.೧೩ | ೧೨೬೩.೭೮ |
| ೩೪ | **Squilla** | ೬೨೮೯.೬೪ | ೬೫.೯೮ | ೫೫೮೫.೬೩ | ೫೭.೩೬ | ೩೭೫೭.೩೨ | ೮೦.೫೮ |
| ೩೫ | **Miscellaneous** | ೧೭೬೦೩.೭೭ | ೧೦೧೦.೭೮ | ೧೩೪೯೨.೭೯ | ೭೩೯.೬೫ | ೬೭೭೫.೨೦ | ೩೮೯.೦೭ |
| | **Grand Total** | ೬೭೫೧೪.೨೧ | ೮೫೬೮.೯೪ | ೫೨೪೫೫.೯೨ | ೭೩೮೭.೮೯ | ೫೯೦೦೫.೩೯ | ೧೨೪೩೪.೮೧ |

ನೀರಿನ ಅಲೆಗಳಿಂದ ಹಾಗೂ ಮೀನಿನ ಚಲನವಲನದಿಂದ (ಸಾಮಾನ್ಯ ಗೆಂಡೆ)ಕುಸಿಯುವ ಮಣ್ಣನ್ನು ತಡೆಗಟ್ಟಬಹುದು. ಕೊಳದ ಮೀನು ಹೊರ ಹೋಗದಂತೆ ಹಾಗೂ ಹೊರಗಡೆಯಿಂದ ಕೊಳದ ಒಳಕ್ಕೆ ಬರದಂತೆ ಕೊಳದ ಒಳಭಾಗಕ್ಕಿರುವ ತೂಬಿನ ಬಾಯಿಯನ್ನು ಸಣ್ಣ ಕಣ್ಣಿನ ಬಲೆಯಿಂದ ಕಟ್ಟುವುದು.

**ಕೊಳದ ತಯಾರಿ :** ಕೊಳದ ನೀರು ಮತ್ತು ಮಣ್ಣು ಆಮ್ಲೀಯವಾಗಿರದೆ ರಸಸಾರ (ಪಿ.ಹೆಚ್) ೬.೫ ರಿಂದ ೯ರ ಮಟ್ಟದಲ್ಲಿರಬೇಕು. ಒಂದು ವೇಳೆ ಮಣ್ಣು ಆಮ್ಲೀಯವಾಗಿದ್ದರೆ ಎಕರೆಗೆ ೮೦ ರಿಂದ ೧೦೦ ಕಿ.ಗ್ರಾಂ. ಸುಣ್ಣ ಹಾಕು ಏಳರಿಂದ ಹತ್ತು ದಿವಸಗಳ ಕಾಲ ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಬೇಕು. ಈ ರೀತಿ ಮಾಡುವುದರಿಂದ ಮಣ್ಣಿನಲ್ಲಿರುವ ಹಾನಿಕಾರಕ ಅನಿಲ ಆವಿಯಾಗಿ ಸೂಕ್ಷ್ಮಾಣು ಜೀವಿಗಳು ಸಾಯುತ್ತವೆ ಹಾಗೂ ಮಣ್ಣಿನ ರಸಸಾರ ಹೆಚ್ಚುತ್ತದೆ.

**ಕೋಷ್ಟಕ ೪.೧೫ : ಮಾಹೆವಾರು ಕಡಲ ಮೀನು ಉತ್ಪಾದನಾ ಪ್ರಮಾಣ**

ಮೆಟ್ರಿಕ್ ಟನ್ನುಗಳಲ್ಲಿ, ಮೌಲ್ಯ–ಲಕ್ಷ ರೂ.ಗಳಲ್ಲಿ

| ಕ್ರ ಸಂ. | ತಿಂಗಳು | ೨೦೦೦–೦೧ | | ೨೦೦೧–೦೨ | | ೨೦೦೨–೦೩ | |
|---|---|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೧ | ಏಪ್ರಿಲ್ | ೫೫೦೯.೨೫ | ೬೯೫.೩೭ | ೪೭೪೧.೬೫ | ೪೯೩.೨೦ | ೬೭೭೫.೯೨ | ೮೫೦.೦೯ |
| ೨ | ಮೇ | ೫೩೨೬.೪೬ | ೬೪೯.೪೦ | ೩೭೭೬.೯೩ | ೪೧೩.೪೯ | ೬೮೨೫.೯೦ | ೭೧೯.೪೪೨ |
| ೩ | ಜೂನ್ | ೧೪೩೪.೮೫ | ೪೭೭.೩೫ | ೯೧೯.೦೦ | ೩೨೬.೬೮ | ೧೯೧೨.೪೮ | ೩೭೦.೩೩ |
| ೪ | ಜುಲೈ | ೨೦೩೮.೮೧ | ೬೨೨.೮೫ | ೨೨೦೪.೦೩ | ೧೦೫೮.೩೩ | ೨೯೦೮.೦೬ | ೧೧೫೬.೧೨ |
| ೫ | ಆಗಸ್ಟ್ | ೨೨೬೮.೦೦ | ೪೫೩.೭೫ | ೪೦೬೪.೪೯ | ೮೪೭.೦೩ | ೩೩೦೦.೧೭ | ೬೧೮.೦೫ |
| ೬ | ಸೆಪ್ಟೆಂಬರ್ | ೧೧೫೮೦.೪೮ | ೧೩೮೮.೨೭ | ೮೧೪೧.೩೨ | ೮೨೨.೪೬ | ೯೭೫೩.೧೫ | ೧೧೫೬.೬೨ |
| ೭ | ಅಕ್ಟೋಬರ್ | ೧೧೮೧೦.೮೯ | ೧೦೯೩.೯೧ | ೭೦೭೮.೩೮ | ೬೫೩.೩೧ | ೭೫೦೨.೫೬ | ೧೧೬೪.೮೮ |
| ೮ | ನವೆಂಬರ್ | ೭೦೩೫.೮೧ | ೭೬೪.೩೭ | ೨೧೭೮.೭೪ | ೪೨೬.೯೭ | ೫೨೩೪.೯೩ | ೭೭೩.೩೭ |
| ೯ | ಡಿಸೆಂಬರ್ | ೫೬೫೨.೬೧ | ೬೪೦.೬೧ | ೩೪೩೭.೧೨ | ೪೧೬.೨೮ | ೬೨೭೨.೯೮ | ೯೯೬.೯೬ |
| ೧೦ | ಜನವರಿ | ೫೯೭೩.೧೦ | ೭೫೦.೪೨ | ೩೮೯೩.೦೦ | ೪೩೬.೦೮ | ೫೯೮೬.೬೧ | ೧೦೩೫.೨೯ |
| ೧೧ | ಫೆಬ್ರವರಿ | ೪೦೧೨.೨೦ | ೫೧೫.೨೦ | ೫೫೮೬.೪೧ | ೬೩೧.೮೨ | ೩೮೬೫.೫೮ | ೭೯೨.೯೧ |
| ೧೨ | ಮಾರ್ಚ್ | ೪೮೭೧.೭೫ | ೫೧೭.೪೪ | ೬೪೩೪.೮೫ | ೮೬೨.೨೪ | ೪೮೭೧.೮೦ | ೯೬೩.೦೪ |
| | ಒಟ್ಟು | **೬೭೫೧೪.೨೧** | **೮೫೬೮.೯೪** | **೫೨೪೫೫.೯೨** | **೭೩೮೭.೮೯** | **೬೫೨೧೦.೧೪** | **೧೦೫೯೭.೧೦** |

| ಕ್ರ.ಸಂ. | ತಿಂಗಳು | ೨೦೦೩–೨೦೦೪ | | ೨೦೦೪–೨೦೦೫ | |
|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೧ | ಏಪ್ರಿಲ್ | ೫೯೯೫.೧೫ | ೧೨೦೯.೮೪ | ೪೫೯೨.೯೯ | ೭೩೧.೬೬ |
| ೨ | ಮೇ | ೭೮೭೩.೧೪ | ೧೬೫೨.೧೯ | ೩೪೦೬.೯೦ | ೭೯೫.೭೯ |
| ೩ | ಜೂನ್ | ೨೮೩೧.೯೯ | ೬೬೭.೭೨ | ೧೮೦೬.೩೦ | ೫೨೧.೧೪ |
| ೪ | ಜುಲೈ | ೧೩೨೮.೬೦ | ೧೦೬೦.೬೫ | ೧೬೫೯.೪೦ | ೯೪೯.೧೬ |
| ೫ | ಆಗಸ್ಟ್ | ೪೭೨೫.೫೫ | ೧೦೯೬.೮೧ | ೩೪೬೪.೭೦ | ೧೯೦೫.೪೮ |
| ೬ | ಸೆಪ್ಟೆಂಬರ್ | ೧೧೫೦೩.೨೦ | ೧೭೪೦.೧೪ | ೮೪೫೧.೪೫ | ೧೪೫೧.೬೭ |
| ೭ | ಅಕ್ಟೋಬರ್ | ೭೫೩೦.೧೯ | ೧೧೮೪.೮೩ | ೮೮೪೬.೨೫ | ೧೧೦೮.೩೫ |
| ೮ | ನವೆಂಬರ್ | ೫೭೮೦.೮೦ | ೭೬೬.೫೪ | ೪೭೨೧.೪೬ | ೭೩೪.೮೨ |
| ೯ | ಡಿಸೆಂಬರ್ | ೪೩೩೫.೪೦ | ೫೮೧.೯೧ | ೪೧೭೯.೫೬ | ೯೨೬.೬೪ |
| ೧೦ | ಜನವರಿ | ೩೧೦೦.೫೩ | ೬೯೦.೫೭ | ೫೯೬೬.೮೪ | ೧೨೯೪.೮೬ |
| ೧೧ | ಫೆಬ್ರವರಿ | ೪೧೨೬.೧೫ | ೭೦೮.೦೮ | ೬೦೭೯.೯೩ | ೧೦೨೦.೧೪ |
| ೧೨ | ಮಾರ್ಚ್ | ೪೬೫೮.೭೨ | ೧೦೨೨.೮೪ | ೫೮೨೯.೬೧ | ೧೦೦೪.೧೦ |
| | ಒಟ್ಟು | **೬೩೭೮೯.೪೨** | **೧೨೩೮೨.೧೨** | **೫೯೦೦೫.೩೯** | **೧೨೪೩೪.೮೧** |

ಕೊಳದಲ್ಲಿ ಉತ್ಪತ್ತಿಯಾಗುವ ನೈಸರ್ಗಿಕ ಆಹಾರ ಮೀನಿಗೆ ಸಾಕಾಗುವುದಿಲ್ಲ. ಆದುದರಿಂದ ಹೆಚ್ಚಿನ ಆಹಾರ ಉತ್ಪಾದನೆಗೆ ಕೊಟ್ಟಿಗೆ ಗೊಬ್ಬರ ಹಾಗೂ ರಸಗೊಬ್ಬರಗಳನ್ನು ಪ್ರಾರಂಭದಲ್ಲಿ ಮತ್ತು ಪ್ರತೀ ತಿಂಗಳು ಕೊಳಕ್ಕೆ ಹಾಕಬೇಕು. ಕೊಟ್ಟಿಗೆ ಗೊಬ್ಬರವನ್ನು ಮೂಲೆಗಳಲ್ಲಿ ಹಾಕಿದ ೧೫ ದಿವಸಗಳ ನಂತರ ರಸಗೊಬ್ಬರಗಳನ್ನು ಕೊಳದ ಎಲ್ಲಾ ಭಾಗಕ್ಕೆ ಪ್ರತೀ ತಿಂಗಳು ಹಾಕಬೇಕು. ಮೊದಲನೆ ಕಂತಿನ ಗೊಬ್ಬರವನ್ನು

ಮೀನು ಮರಿ ಬಿತ್ತನೆ ಮಾಡುವ ೧೫ ದಿವಸಗಳ ಮುಂಚಿತವಾಗಿ ಹಾಕಬೇಕು. ಕೋಳಿ ಗೊಬ್ಬರವನ್ನು ಉಪಯೋಗಿಸುವುದಾದರೆ ದನದ ಸಗಣಿಯ ಪ್ರಮಾಣದ ಕಾಲುಭಾಗದಷ್ಟು ಉಪಯೋಗಿಸುವುದು ಸೂಕ್ತ.

**ಮೀನಿನ ತಳಿಗಳು :** ಕೊಳದ ನೀರಿನ ಬಣ್ಣ ಹಸುರಾದಾಗ (ಅಂದರೆ ಸಾಕಷ್ಟು ಸೂಕ್ಷ್ಮಾಣು ಜೀವಿಗಳು ಉತ್ಪಾದನೆಯಾಗಿದೆ ಎಂದರ್ಥ) ಮೀನು ಮರಿ ಬಿತ್ತನೆ ಮಾಡುವುದು ಸೂಕ್ತ. ಮೀನು ಮರಿ ಬಿತ್ತನೆಯ ಪ್ರಮಾಣ ಆಯಾ ಸಮಯದಲ್ಲಿ ದೊರಕುವ ತಳಿಗಳ ಮೇಲೆ ನಿರ್ಧಾರವಾಗುತ್ತದೆ. ಬೆರಳುದ್ದ ಗಾತ್ರದ (೪ ರಿಂದ ೬ ಸೆಂ.ಮೀ) ಉತ್ತಮ ತಳಿಗಳಾದ ಕಾಟ್ಲ, ರೋಹು, ಮೃಗಾಲ್, ಬೆಳ್ಳಿ ಗೆಂಡೆ, ಹುಲ್ಲು ಗೆಂಡೆ ಮತ್ತು ಸಾಮಾನ್ಯ ಗೆಂಡೆ ಮೀನು ಮರಿಗಳನ್ನು ಮಳೆಗಾಲದಲ್ಲಿ (ಜೂನ್‌ನಿಂದ ಸೆಪ್ಟೆಂಬರ್ ತಿಂಗಳಲ್ಲಿ) ಬಿತ್ತನೆ ಮಾಡಬೇಕು. ಕೊಳವನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವುದಾದರೆ ೧೦೦ ಸೆಂಟ್ಸ್ ವಿಸ್ತೀರ್ಣದ ಪ್ರದೇಶದಲ್ಲಿ ೪೦೦೦ವರೆಗೆ ಮೀನು ಮರಿಗಳನ್ನು ವಿವಿಧ ಪ್ರಮಾಣದಲ್ಲಿ ಬಿತ್ತನೆ ಮಾಡಬಹುದು.

**ಆಹಾರ ಪೂರೈಕೆ :** ಗೊಬ್ಬರದ ಬಳಕೆ ನೈಸರ್ಗಿಕ ಆಹಾರದ ಉತ್ಪಾದನೆಯನ್ನು ಪ್ರಚೋದಿಸುವುದರಿಂದ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ. ಮೀನಿನ ಶೀಘ್ರ ಬೆಳವಣಿಗೆಗೆ ಪ್ರತೀ ದಿನ ಕೃತಕ ಆಹಾರ ನೀಡುವುದು ಅತ್ಯಗತ್ಯ. ಸಾಮಾನ್ಯವಾಗಿ ಕಡ್ಲೆಕಾಯಿ ಹಿಂಡಿ ಮತ್ತು ಅಕ್ಕಿಯ ತೌಡಿ (೧:೧ರ ಪ್ರಮಾಣ) ನ ಮಿಶ್ರಣವನ್ನು ಮುದ್ದೆ ಮಾಡಿ ತಟ್ಟೆಯಲ್ಲಿಟ್ಟು ಮೂರರಿಂದ ನಾಲ್ಕು ಸ್ಥಳಗಳಲ್ಲಿ ನೀರಿನಲ್ಲಿ ತೂಗಿ ಬಿಡುವುದು ಅಥವಾ ಮೊಣಕಾಲು ಆಳದ ನೀರಿನಲ್ಲೂ ಮುದ್ದೆಗಳನ್ನು ಇಡಬಹುದು.

ಪ್ರಸ್ತುತ ಆಹಾರ ನೀಡುವ ಸುಧಾರಿತ ಪದ್ಧತಿ ಚಾಲ್ತಿಯಲ್ಲಿದೆ. ರಸಗೊಬ್ಬರದ ಖಾಲಿ ಚೀಲಗಳಿಗೆ (ಪ್ಲಾಸ್ಟಿಕ್) ತಳಭಾಗದಲ್ಲಿ ಒಂದು ಇಂಚು ಅಗಲದ ರಂಧ್ರಗಳನ್ನು ಮಾಡಿ ಅದರಲ್ಲಿ ಆಹಾರವನ್ನು ತುಂಬಿ ಬಿದಿರು ಕೋಲುಗಳಿಗೆ ಕಟ್ಟಿ ಕೊಳದ ಅನೇಕ ಕಡೆ ಮುಳುಗಿಸಿಡುವುದು. ಈ ವಿಧಾನದಲ್ಲಿ ರಂಧ್ರಗಳಿಂದ ಹೊರ ಬರುವ ಆಹಾರವನ್ನು ಮೀನುಗಳು ತಿನ್ನುವುದರಿಂದ ಆಹಾರ ಪೋಲಾಗುವುದು ತುಂಬಾ ಕಡಿಮೆ ಹಾಗೂ ನೀರಿನ ಗುಣಮಟ್ಟ ಉತ್ತಮ ರೀತಿಯಲ್ಲಿ ನಿರ್ವಹಣೆಯಾಗಿ ರೋಗ ತಗಲುವ ಸಂಭವವೂ ಕಡಿಮೆಯಿರುತ್ತದೆ. ಈ ಆಹಾರ ನೀಡುವ ಪದ್ಧತಿ ಆಂಧ್ರದೇಶದಲ್ಲಿ ಹೆಚ್ಚು ಪ್ರಚಲಿತವಾಗಿದೆ. ಮೊದಲನೇ ಮೂರು ತಿಂಗಳಲ್ಲಿ ಬಿತ್ತನೆ ಮಾಡಿದ ಮೀನು ಮರಿಗಳಿಗೆ ದಿನಕ್ಕೆ ೮೦೦ ಗ್ರಾಂ., ಎರಡನೇ ಮೂರು ತಿಂಗಳಲ್ಲಿ ೧.೬ಕಿ.ಗ್ರಾಂ., ಮೂರನೇ ಮೂರು ತಿಂಗಳಲ್ಲಿ ೩.೨ ಕಿ.ಗ್ರಾಂ. ಮತ್ತು ನಾಲ್ಕನೇ ಮೂರು ತಿಂಗಳಲ್ಲಿ ೬.೪ ಕಿ.ಗ್ರಾಂ. ನಂತೆಯೂ ಆಹಾರ ನೀಡಬೇಕು. ಕೊಳದ ನೀರು ಹೆಚ್ಚು ಹಸುರಾದಾಗ ಆಹಾರ ನೀಡುವುದನ್ನು ಸ್ವಲ್ಪ ದಿವಸದ ಮಟ್ಟಿಗೆ ನಿಲ್ಲಿಸಬೇಕು.

**ಮೀನಿಗೆ ತಗಲುವ ರೋಗಗಳು ಮತ್ತು ಹತೋಟಿ :** ಮೀನು ಸಾಕಣೆ ಕೊಳದ ನೀರು ಕೆಡದಂತೆ ಎಚ್ಚರಿಕೆ ವಹಿಸುವುದು ಬಹಳ ಪ್ರಮುಖವಾದ ಅಂಶ. ಬೇಸಿಗೆಯಲ್ಲಿ ನೀರಿನ ಮಟ್ಟ ಕಡಿಮೆಯಾಗಿ ಗೊಬ್ಬರದ ಹಾಗೂ ಕೃತಕ ಆಹಾರದ ಬಳಕೆ ಹೆಚ್ಚಾಗಿ ನೀರಿನ ಗುಣಮಟ್ಟ ಕೆಡುವ ಸಾಧ್ಯತೆ ಹೆಚ್ಚು. ಮೀನುಗಳಿಗೆ ಈಜು ರೆಕ್ಕೆ ಮತ್ತು ಬಾಲದ ರೆಕ್ಕೆ ಕೊಳೆಯುವಿಕೆ, ದೇಹದ ಮೇಲೆ ಕೆಂಪು ಮಚ್ಚೆಗಳು. ಗಾಯಗಳು, ಬಿಳಿ ಚುಕ್ಕೆ ರೋಗ ಮುಂತಾದವು ಬರುತ್ತವೆ. ವಲ್ಕವಂತ ಪ್ರಾಣಿಗಳ ಗುಂಪಿಗೆ ಸೇರಿದ ಪರೋಪ ಜೀವಿಗಳಿಂದಲೂ ರೋಗ ಬರುತ್ತದೆ. ರೋಗ ತಗುಲಿದ ಮೀನುಗಳ ಹೊಟ್ಟೆಯು ಉಬ್ಬಿಕೊಂಡಿದ್ದು, ಚಲನವಲನ ಅಸ್ತ ವ್ಯಸ್ತಗೊಂಡಿರುತ್ತದೆ. ಇಂತಹ ಮೀನುಗಳನ್ನು ಕೊಳದಿಂದ ಬೇರ್ಪಡಿಸಿ ಸಾಮೂಹಿಕವಾಗಿ ಅವುಗಳಿಗೆ ಶೇ. ಮೂರರ ಉಪ್ಪಿನ ದ್ರಾವಣ ಅಥವಾ ಶೇ. ೦.೦೦೪೫ರ ಪೊಟಾಷಿಯಂ ಪರಮಾಂಗನೇಟ್ ದ್ರಾವಣ ಅಥವಾ ಶೇ.೦.೦೫ರ ಮೈಲು ತುತ್ತದ ದ್ರಾವಣದಲ್ಲಿ ೧೦ ರಿಂದ ೧೫ ನಿಮಿಷಗಳ ಕಾಲ ಅದ್ದಿ ಚಿಕಿತ್ಸೆ ನೀಡಬೇಕು. ಕೊಳದ ನೀರು ಹೆಚ್ಚು ಹಸಿರಾದಾಗ ಅರ್ಧದಷ್ಟು ನೀರನ್ನು ಹೊರತೆಗೆದು ಹೊಸ ನೀರನ್ನು ಹಾಕಬೇಕು.

**ಮೀನು ಉತ್ಪಾದನೆ ಮತ್ತು ಆರ್ಥಿಕತೆ :** ಸುಮಾರು ೧೦ ರಿಂದ ೧೨ ತಿಂಗಳಲ್ಲಿ ವಿವಿಧ ತಳಿಗಳ ಒಂದೊಂದು ಮೀನು ೦.೭೫ ರಿಂದ ೧.೦ ಕಿ.ಗ್ರಾಂ ತೂಕ ಬೆಳೆಯುತ್ತವೆ. ಈ ರೀತಿಯಾಗಿ ಬೆಳೆದ ಮೀನುಗಳನ್ನು ಆಗಿಂದಾಗ್ಗೆ ಹಿಡಿದು ಮಾರಾಟ ಮಾಡುವುದರಿಂದ ಕೊಳದಲ್ಲಿ ಉಳಿದಿರುವ ಮೀನುಗಳು ಚೆನ್ನಾಗಿ ಬೆಳೆಯುತ್ತವೆ. ಮಿಶ್ರ ಮೀನು ಸಾಕಣೆಯಿಂದ ವರ್ಷಕ್ಕೆ ೧೦೦ ಸೆಂಟ್ಸ್ ವಿಸ್ತೀರ್ಣದ ಕೊಳದಲ್ಲಿ ೧೫೦೦ ರಿಂದ ೨೦೦೦ ಕಿ.ಗ್ರಾಂ. ಮೀನಿನ ಇಳುವರಿ ಪಡೆಯಬಹುದು.

ಒಳನಾಡು ಮೀನುಗಾರಿಕೆ ಉತ್ಪಾದನೆ ೨೦೦೧ ರಿಂದ ೨೦೦೪-೦೫ರ ವರೆಗೆ ಹೀಗಿದೆ.

| ಕ್ರ. ಸಂ. | ಲ್ಯಾಂಡಿಂಗ್ ಕೇಂದ್ರಗಳು | ೧೯೯೯-೨೦೦೦ | | ೨೦೦೦-೨೦೦೧ | | ೨೦೦೧-೨೦೦೨ | |
|---|---|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೧ | ಮೂಲ್ಕಿ | ೯೨೩.೬೬ | ೨೯೦.೮೨ | – | – | – | – |
| ೨ | ಹೆಜಮಾಡಿ | – | – | ೧೨೭೮.೨೭ | ೨೨೦.೯೩ | ೭೫೭.೬೩ | ೧೧೩.೪೯ |
| ೩ | ಪೊಲಿಪ್ಪು | ೩೨೭೧.೬೭ | ೫೩೦.೦೧ | ೭೭೭.೮ | ೧೩೭.೮೭ | ೫೦೪.೧೪ | ೧೧೬.೩೬ |
| ೪ | ಉದ್ಯಾವರ | ೧೨೫೦.೭೨ | ೧೫೨.೯೨ | ೧೪೭೦.೯ | ೧೧೭.೪೮ | ೧೮೭.೨೩ | ೨೦.೮೭ |
| ೫ | ಮಲ್ಪೆ | ೪೧೧೫೬ | ೪೨೫೮ | ೪೦೬೫೩.೫ | ೪೧೧೭.೫೮ | ೩೩೦೩೪ | ೩೨೬೦.೪೪ |
| ೬ | ಹಂಗರಕಟ್ಟೆ | ೧೪೭೯.೬ | ೨೩೪.೭೪ | ೩೨೭೯.೬೨ | ೪೨೦.೬೧ | ೨೮೯೯.೯ | ೨೯೯.೯ |
| ೭ | ಬಿಜಾಡಿ | ೩೦೬ | ೨೮.೮೯ | ೨೪೮.೫೩ | ೩೧.೮೨ | ೫೭೯.೪೪ | ೨೧೧.೦೫ |
| ೮ | ಗಂಗೋಳ್ಳಿ | ೧೩೨೮೩.೨೮ | ೧೭೮೬.೭೬ | ೧೩೭೭೪.೧ | ೨೨೫೯.೨೯ | ೮೮೭೯.೫೧ | ೯೫೮.೨೪ |
| ೯ | ನಾವುಂದ | ೧೮೦೨ | ೨೭೨.೫೯ | ೨೩೮೩.೩೫ | ೪೪೫.೬೪ | ೨೨೪೩.೭೪ | ೫೧೪.೧೪ |
| ೧೦ | ತರಪತಿ | ೨೯೩೧ | ೫೩೩.೬ | ೩೩೩೫ | ೬೫೩.೭೨ | ೨೮೦೧.೫ | ೭೨೦.೪೪ |
| ೧೧ | ಶಿರೂರು | ೪೪೭೯ | ೮೯.೬೫ | ೩೧೩.೧೪ | ೧೬೩.೯೯ | ೫೬೮.೮೩ | ೧೭೨.೯೫ |
| ೧೨ | ತಪತಿ | ೦.೦೦ | ೦.೦೦ | ೦.೦೦ | ೦.೦೦ | ೦.೦೦ | ೦.೦೦ |

| ಕ್ರ. ಸಂ. | ಲ್ಯಾಂಡಿಂಗ್ ಕೇಂದ್ರಗಳು | ೨೦೦೨-೨೦೦೩ | | ೨೦೦೩-೨೦೦೪ | | ೨೦೦೪-೨೦೦೫ | |
|---|---|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೧ | ಮೂಲ್ಕಿ | - | - | - | - | - | - |
| ೨ | ಹೆಜಮಾಡಿ | ೫೭೧.೪೩ | ೧೦೪.೭೧ | ೫೩೦.೮೦ | ೧೩೨.೫೫ | ೨೪೨.೦೬ | ೧೦೯.೬೪ |
| ೩ | ಪೊಲಿಪ್ಪು | ೪೭೩.೬೨ | ೧೦೧.೮೪ | ೩೮೬.೦೬ | ೧೦೩.೮೭ | ೫೬೪.೦೪ | ೧೧೭.೫೨ |
| ೪ | ಉದ್ಯಾವರ | ೧೮೩.೭೧ | ೨೫.೧೧ | ೧೭೩.೭೦ | ೩೨.೮೯ | ೧೪೭.೫೩ | ೨೩.೭೪ |
| ೫ | ಮಲ್ಪೆ | ೩೭೪೩೦ | ೪೧೭೮.೮೩ | ೪೫೩೩೬.೬೦ | ೭೬೬೨.೮೦ | ೪೨೫೯.೪೦ | ೭೩೨೪.೦೫ |
| ೬ | ಹಂಗರಕಟ್ಟೆ | ೨೮೨೮.೫ | ೪೨೮.೭೭ | ೯೦೪.೦೧ | ೪೫೧.೪೪ | ೯೩೮.೫೬ | ೨೯೭.೨೫ |
| ೭ | ಬಿಜಾಡಿ | ೪೨.೬೧ | ೪.೮ | ೬೨.೯೦ | ೬.೦೯ | ೧೩೫.೦೦ | ೪೦.೯೯ |
| ೮ | ಗಂಗೋಳ್ಳಿ | ೧೬೯೭೮.೫೩ | ೩೯೦೯.೦೮ | ೧೦೨೬೯.೦೦ | ೨೮೯೨.೯೦ | ೧೧೦೭೯.೦೦ | ೪೦೦೧.೯೧ |
| ೯ | ನಾವುಂದ | ೨೫೯೨ | ೬೬೮.೭ | ೧೪೬೮.೦೦ | ೩೦೬.೪೮ | ೬೧೧.೦೦ | ೪೩.೩೬ |
| ೧೦ | ತರಪತಿ | ೩೩೫೮ | ೯೦೯.೩೨ | ೫೬೮.೦೦ | ೩೦.೯೧ | ೧೯೪೩.೦೦ | ೧೫೪.೫೦ |
| ೧೧ | ಶಿರೂರು | ೭೫೧.೭೪ | ೨೬೫.೯೪ | ೯೩೬.೩೫ | ೨೯೦.೯೬ | ೯೪೫.೮೦ | ೩೨೧.೮೫ |
| ೧೨ | ತಪತಿ | ೦.೦೦ | ೦.೦೦ | ೨೧೫೪.೦೦ | ೪೭೩.೦೫ | ೦.೦೦ | ೦.೦೦ |

ಮೆಟ್ರಿಕ್ ಟನ್ನುಗಳಲ್ಲಿ

| ಕ್ರಮ ಸಂಖ್ಯೆ/ವರ್ಷ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ |
|---|---|---|---|---|---|
| ಉತ್ಪಾದನೆ | ೧,೭೧೩.೨೯ | ೧,೭೩೧.೨೯ | ೧,೬೩೭.೫೮ | ೨,೨೨೧.೨೧ | ೧,೮೬೪.೧೮ |

## ಮೀನು ತಳಿಗಳು

| ಕ್ರ.ಸಂ. | ಸಾಮಾನ್ಯ ಹೆಸರು | ವೈಜ್ಞಾನಿಕ ಹೆಸರು | ಸ್ಥಳೀಯ ಭಾಷೆಯ ಹೆಸರು |
|---|---|---|---|
| **a)** | **Marine** | | |
| 1 | Sharks | *Chiloscyllium* sp. *Stegostoma,Scoliodon, Rhizoprionodon Galeocerdo, Carchar hinus, Sphyrna* | ತಾಟೆ, ಚಾಟೆ, ಬಲ್ಲಾರ್ |
| 2 | Skates and Rays | Skates: *Rhynchobatus, Rhinibatus,* Rays: *Dasyatis, Aetobatus, Aetomylaeus, Rhinoptera,* | ಸ್ಕೊರಕೆ, ತೊರಕೆ, ಎಟ್ಟೆ, ಬಲ್ಲಿಯಾರ್, ಗರಗಸ |
| 3 | Oil Sardine | *Sardinella longiceps.* | ಭೂತಾಯಿ, ಬೈಗೆ |
| 4 | White Sardine | *Escuolosa thoracata (Kowala coval)* | ಬೊಳಂಜೀರ್ |
| 5 | Other Sardine | *Sardinella* | ಇತರೆ ಭೂತಾಯಿ, ಎರಬೈ, ಸುವಾಡಿ, |
| 6 | Anchovies | *Stolephorus, Thryssa, Coilia, Setipinna* | ಕೊಲ್ಲತರ |
| 7 | Other Clupeiods | *Ilisha,Opisthopterus, Nemastolosa, nodonoto stoma, Chirocentrus* | ಮಣಂಗು |
| 8 | Indian Mackerel | *Rastrelliger kanagurta* | ಬಂಗುಡೆ |
| 9 | Seer | *Scomberomorus sp.* | ಅಂಜಲ್ |
| 10 | Tuna | *Thunnus* sp. *(Albacora, Yellowfin tuna,* Big eye tuna, Blue fin tuna) *Katsuwonus* (Skip jack tuna); *Ethynnus* (Little tuna) | ಕೇದಾರ್ |

| ಕ್ರ.ಸಂ. | ಸಾಮಾನ್ಯ ಹೆಸರು | ವೈಜ್ಞಾನಿಕ ಹೆಸರು | ಸ್ಥಳೀಯ ಭಾಷೆಯ ಹೆಸರು |
|---|---|---|---|
| 11 | Pomfrets | *Pampus Apolectes, Parastromatous.* -*Niger* sp | ಮಾಂಜಿ, ಬಿಳಿ ಮಾಂಜಿ, ಕಪ್ಪು ಮಾಂಜಿ |
| 12 | Lactarius | *Lactrius lactarius* | ಅಡೆ, ಅಡವು |
| 13 | Carangids | *Megalopsis cordyla, Selaroides sp., Trachinotus, Caranx, Selar, Carangoides* | ಗೋಂಡ್ಲು, ಕೋಡಂಡೆ, ಬೋಂಕೆ ಕಡ್ವಾಯಿ |
| 14 | Silver Bellies | *Leiognathus* sp., *Secutor* sp., *Gazza* sp. | ಕುರುಚಿ, ಕುರ್ಚಿ |
| 15 | Sciaenids (Crockers) | *Sciaena,Protonibea, Johnius, Otolithus, Otolithoides* | ಕಲ್ಲೂರು, ಕೊಡ್ವಾಯಿ |
| 16 | Ribbon fish | *Trichiurus* sp., *Lepturacanthus* sp., | ಪಾಂಬೋಲ್ |
| 17 | Flat fish | *Psettodes erumel* (Indian Halibut). *Cynoglossus, Pseudor hombus* Solea Synaotura, Euryglossa | ಚಪ್ಪಟೆ, ಹಲಗೆ |
| 18 | Cat fish | *Arius* sp *(Tachysurus), Plotosus* sp. | ತೇಡೆ, ಸೇಡೆ |
| 19 | Eels | *Congresox* sp., *Muraenesox* | ಹಾವು ಉಚ್ಚು |
| 20 | Pink perch | Nemipterus japonicus | ಮದ್ಮಲ್ |
| 21 | Crabs | *Scyllaserrata, Neptunus* sp., *Matuta planipes* | ಏಡಿ |
| 22 | Prawns | *Metapeneaus* sp., *Penaeus* sp. | ಸೀಗಡಿ, ಎಟ್ಟೆ |
| 23 | Peral spot | *Etroplus* sp., | ಕರಿ, ಇರಿ |
| 24 | Silver Bellies | *Leognathus* sp., *Gazza* sp., | ಕರ್ಲಿ |

| ಕ್ರ.ಸಂ. | ಸಾಮಾನ್ಯ ಹೆಸರು | ವೈಜ್ಞಾನಿಕ ಹೆಸರು | ಸ್ಥಳೀಯ ಭಾಷೆಯ ಹೆಸರು |
|---|---|---|---|
| 25 | Soles | *Cynoglossus* sp. | ನಂಗು, ಎರುಮೆ |
| 26 | Shell | *Perna viridis*, P. indica<br>*Crassostrea madrasennis*,<br>*Loliga* sp. | ಚಿಪ್ಪು, ಮರುವಾಯಿ, ಮಳಿ |
| 27 | Squids and Cuttle fish | *Loliga duvauceli*<br>*Septaculeata, Sepia*.sp.,<br>*Otapus*. sp. | ಬೋಂಡಾಸ್ |
| 28 | Sqilla | *Mantis* shrimp,<br>*Oratasquilla sp.,* | ಪಚ್ಚೆ ಮೀನು |

| ಕ್ರ.ಸಂ. | ಸಾಮಾನ್ಯ ಹೆಸರು | ವೈಜ್ಞಾನಿಕ ಹೆಸರು | ಸ್ಥಳೀಯ ಭಾಷೆಯ ಹೆಸರು |
|---|---|---|---|
| **b)** | **Estuarine fishes** | | |
| 1 | Lady fish | *Sillaga sihoma* | ಕಾಣೆ, ಕಂಡಿಕೆ |
| 2 | Mullets | *Mugil Rhinomugil,*<br>*Valamugil, Liza* | ಮಾಲ |
| 3 | Gerres | *Gerres,*<br>*Gerreomaarpha* | ಪೈಯಿ, ಬೈಂಗೆ |
| 4 | Etroplus | *Etroplus suratensis,*<br>*E. maculatus* | |
| **c)** | **Inland fishes** | | |
| 1 | Cat fish | *Wallogo attu*<br>*Ompak binanlatus*<br>*Mystus oar Mystus seenghata* | ಬಾಳೆ<br>ಗೊದ್ದಲೆ<br>ತುರಗಿ, ಗಿರ್ಲು |
| 2 | Chelu meenu | *Heteropneustes fossilis* | ಚೇಳು |
| 3 | Ane meenu | *Clarius batrachus* | ಮುರುಗೋಡು, ಆಣೆ |
| 4 | Bilihalati | *Silonia childrenii* | ಬಿಳಿ ಹಳಪಿ |
| 5 | Common Carp | *Cyprinus carpio var communis*<br>*C. carpio var scalaris*<br>*C. carpio var nudus* | ಪರೆ<br>ಕನ್ನಡಿ<br>ಬೆತ್ತಲೆ |

| ಕ್ರಸಂ. | ಸಾಮಾನ್ಯ ಹೆಸರು | ವೈಜ್ಞಾನಿಕ ಹೆಸರು | ಸ್ಥಳೀಯ ಭಾಷೆಯ ಹೆಸರು |
|---|---|---|---|
| 6 | Grass Carps | *Ctenopharyngodon idella* | ಹುಲ್ಲು ಗೆಂಡೆ |
| 7 | Silver Carps | *Hypophthalmichtys molitrix* | ಬೆಳ್ಳಿ ಗೆಂಡೆ |
| 8 | Major Carps | *Catla catla*<br>*Labeo calbasu*<br>*Labeo rohita*<br>*Labeo fimbriatus*<br>*Cirrhina mrigal* | ಕಾಟ್ಲ<br>ಕರಿ, ಕಕ್ಕೆ, ಕೆಮ್ಮಚ್ಚಲು<br>ರೋಹು<br>ಕೆಮ್ಮೀನು<br>ಮೃಗಾಲ್ |
| 9 | Minor Carps | *Labeo bata*<br>*Cirrhina reba*<br>*Cirrhina fulungee*<br>*Puntius ticto*<br>*Puntius sarana* | ಪಂಜಾರಿ<br>ಅರ್ಜಿ<br>ಅರ್ಜಿ<br>ನಯಾಪೈಸೆ<br>ಗೆಂಡೆ |
| 10 | Bilihargi | *Puntius pulchellus* | ಬಿಳಿಅರಗಿ |
| 11 | Kolcha | *Puntius kolus* | ಕೊಳಚ |
| 12 | Mahseer | *Tor khadree*<br>*Tor mussullah, Tor tor* | ಬಿಳಿ |
| 13 | Saslu | *Rosbora* | ಸಸ್ಲು, ಪಕ್ಕೆ |
| 14 | Chappali meenu | *Notopterus notopterus* | ಚಪ್ಪಲಿ |
| 15 | Murrels | *Channa gachua*<br>*Channa marulius*<br>*Channa striatus*<br>*Channa punctatus* | ಕಲ್ಲು ಕೊರವ<br>ಹೂ ಕುಚ್ಚು, ಅವಲು<br>ಕುಚ್ಚು<br>ಕೊರವ |
| 16 | Nettikannukorva | *Glossogabius giuris* | ನೆತ್ತಿ ಕಣ್ಣು ಕೊರವ |
| 17 | Bitiha | *Chela chela* | ಬೆಳ್ಳಿ |
| 18 | Haragi | *Barbus pulchellus* | ಅರಗಿ |
| 19 | Pakke | *Esomus daniconius* | ಮೀಸೆ ಪಕ್ಕೆ |
| 20 | Halati | *Pseudotropicus lakree* | ಹಲಟಿ |
| 21 | Gambusia | *Gambusia affinis* | ಗ್ಯಾಂಬೂಸಿಯಾ |
| 22 | Jilebi | *Tilapia mossambica* | ತಿಲಾಪಿಯಾ, ಜಿಲೇಬಿ |

ಆಧಾರ : *Statistical Bulletin of Fisheries 2004-05 Department of Fisheries.*

* * * * *